Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ-17 ಸಂಚಿಕೆ-30 ಜುಲೈ 24-30, 2023 ಪುಟ 16 ರೂ. 10/-
Volume-17 Issue-30 July 24-30, 2023 Pages:16 Price: 10/-

26 ವಿರೋಧ ಪಕ್ಷಗಳ ಸಭೆ:



ಬಿಜೆಪಿ ಯನ್ನು ತೊಲಗಿಸಿ ಭಾರತ ಸಂರಕ್ಷಿಸಲು ಪಣ

ಆಮದಾಗುತ್ತಿರುವ ಕೊಬ್ಬರಿ: ಬೆಳೆಗಾರರ ಸಂಕಷ್ಟ





ನ್ಯಾಟೋ ಶೃಂಗ ಸಭೆ: ಜಾಗತಿಕ ಅಧಿಪತ್ಯಕ್ಕೆ ಯೋಜನೆ

ಆಹಾರದ ಬೆಲೆ ಏರಿಕೆಗೆ ರಶಿಯಾ ಧಾನ್ಯ ಡೀಲನ್ನು ಅಮಾನತುಗೊಳಿಸಿದ್ದು ಕಾರಣವೇ?

ಕಮ್ಯುನಿಸ್ಟ್ ಪಕ್ಷಗಳ ಅಸ್ತಿತ್ವ; ಚುನಾವಣೆ ಮತ್ತು ವರ್ಗ ಹೋರಾಟ

ಸಿ. ಸಿದ್ದಯ್ಯ

ಚುನಾವಣೆಯ ಸೋಲು ಗೆಲುವುಗಳನ್ನು ನೋಡಿ ಕಮ್ಯುನಿಸ್ಟ್ ಪಕ್ಷಗಳ ಅಸ್ತಿತ್ವದ ಅಗತ್ಯವಿದೆಯೇ? ಎಂಬ ಪ್ರಶ್ನೆ ಎತ್ತುವ ಮೂಲಕ ಚರ್ಚೆಯೊಂದನ್ನು ಕೆಲವರು ಹುಟ್ಟುಹಾಕಿದ್ದಾರೆ. ರಾಜ್ಯದಲ್ಲಿ ನಡೆದ ಇತ್ತೀಚಿನ ವಿಧಾನಸಭಾ ಚುನಾವಣಾ ಫಲಿತಾಂಶದ ನಂತರ ಸಾಮಾಜಿಕ ಜಾಲತಾಣದಲ್ಲಿ ಈ ಚರ್ಚೆ ನಡೆದಿದೆ. ಕಮ್ಯುನಿಸ್ಟರ ಅಸ್ತಿತ್ವದ ಅಗತ್ಯತೆಯ ಪ್ರಶ್ನೆ ಇದೇ ಮೊದಲಲ್ಲ, ಕೊನೆಯೂ ಅಲ್ಲ. ಸಮಾಜವಾದದ ಪರಿಕಲ್ಪನೆ ಮೂಡಿಬಂದ ಕಾಲದಿಂದಲೂ ಇಂತಹ ಪ್ರಶ್ನೆ ಇದ್ದೇ ಇದೆ. ಇದು ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ, ಕಾಲ, ಸಮಾಜದ ಬದಲಾವಣೆಗೆ ತಕ್ಕಂತೆ ಬದಲಾಗುತ್ತದೆ. ಬಂಡವಾಳಶಾಹಿ, ಮತ್ತು ಅವರ ಪರ ಇರುವ ಬುದ್ಧಿಜೀವಿಗಳಿಗೆ ಕಮ್ಯುನಿಸ್ಟರು ಎಂದೂ ಅಗತ್ಯವಿಲ್ಲದವರು. ಇವರು ಸಮಾಜದಲ್ಲಿ ವರ್ಗಗಳನ್ನು ನಿರಾಕರಿಸುತ್ತಾರೆ. ಆದರೆ, ಕೆಲವು ಎಡ ಬುದ್ಧಿಜೀವಿಗಳು, ಜನರ ಚಳುವಳಿಯ ಜೊತೆ ಗುರುತಿಸಿಕೊಂಡವರು, ಬಂಡವಾಳಶಾಹಿಗಳಿಂದ ಜನರ ಶೋಷಣೆಯನ್ನು ಕಣ್ಣಾರೆ ಕಂಡವರು ಇಂತಹ ಮಾತುಗಳನ್ನು ಆಡಿದರೆ, ಅಂಥವರು ವರ್ಗ ರಾಜಕೀಯದ ಬಗ್ಗೆ, ಸಮಾಜವಾದಿ ಚಳುವಳಿಯ ಏಳು ಬೀಳುಗಳ ಬಗ್ಗೆ ಸಾಕಷ್ಟು ಅರಿತಿಲ್ಲ ಎಂದರೆ ಕೆಲವರಿಗೆ ಕೋಪ ಬರಬಹುದೇನೋ? ಅಥವಾ ಈ ಮಾತಿನಿಂದ ಅಂಥವರ ಮನಸ್ಸಿಗೆ ನೋವಾಗಬಹುದೇನೋ?

ಅಮೆರಿಕಾ ಸಂಸತ್ತಿನಲ್ಲಿ ಸಮಾಜವಾದವನ್ನು ತಿರಸ್ಕರಿಸುವ ನಿರ್ಣಯ

ಕಮ್ಯುನಿಸಂ ಅಥವಾ ಸಮಾಜವಾದ, ಅಥವಾ ಕಮ್ಯುನಿಸ್ಟರನ್ನು ಕಂಡರೆ ಬಂಡವಾಳಶಾಹಿ ವರ್ಗಕ್ಕೆ ಸದಾ ಭಯ ಕಾಡುತ್ತದೆ ಎಂಬುದಕ್ಕೆ ಇತ್ತೀಚಿನ ಒಂದು ಉದಾಹರಣೆಯೆಂದರೆ, ಅಮೆರಿಕಾ ಕಾಂಗ್ರೆಸ್ ಅಂಗೀಕರಿಸಿದ ಸಮಾಜವಾದವನ್ನು ತಿರಸ್ಕರಿಸುವ ಒಂದು ನಿರ್ಣಯ. ಜಗತ್ತಿನಲ್ಲಿ ಕಮ್ಯುನಿಸಂ ನಾಶವಾಯಿತು ಎಂದು ಅಪಪ್ರಚಾರ ಮಾಡುತ್ತಲೇ, ಬಂಡವಾಳಶಾಹಿಗಳು, ಸಾಮ್ರಾಜ್ಯಶಾಹಿ ರಾಷ್ಟ್ರಗಳು ಕಮ್ಯುನಿಸಂ 'ಗುಮ್ಮ'ಕ್ಕೆ ಸದಾ ಹೆದರುತ್ತಾರೆ. ಜಗತ್ತಿನಲ್ಲಿ ಕಮ್ಯುನಿಸಂ ನಾಶವಾಗಿದೆ ಎನ್ನುವುದಾದರೆ, ಅಮೆರಿಕಾದ ಬಂಡವಾಳಶಾಹಿಗಳಿಗೆ ಕಮ್ಯುನಿಸ್ಟರ ಭಯ ಇಲ್ಲದಿದ್ದರೆ, ಸಂಸತ್ತಿನಲ್ಲಿ ಇಂತಹ ನಿರ್ಣಯ ಅಂಗೀಕರಿಸುವ ಅಗತ್ಯ ಏನಿತ್ತು?

02.02.2023 ರಂದು ಅಮೆರಿಕಾದ ಕಾಂಗ್ರೆಸ್ (ಯುಎಸ್ ಪಾರ್ಲಿಮೆಂಟ್) ಎಲ್ಲಾ ರೀತಿಯ ಸಮಾಜವಾದವನ್ನು ತಿರಸ್ಕರಿಸುವ ನಿರ್ಣಯವನ್ನು ಅಂಗೀಕರಿಸಿತು ಮತ್ತು ಅಮೆರಿಕಾದಲ್ಲಿ ಸಮಾಜವಾದಿ ತತ್ವಗಳ ಅನುಷ್ಠಾನವನ್ನು ಸಂಪೂರ್ಣವಾಗಿ ವಿರೋಧಿಸಿತು. ಈ ನಿರ್ಣಯದ ಪರವಾಗಿ 328 ಮಂದಿ ಮತ ಚಲಾಯಿಸಿದರೆ, ವಿರುದ್ಧವಾಗಿ 86 ಮಂದಿ ಮತ ಚಲಾಯಿಸಿದ್ದಾರೆ. 14 ಮಂದಿ ತಟಸ್ಥರಾಗಿದ್ದರು. ಯುಎಸ್ ಕಾಂಗ್ರೆಸ್ ಸಮಾಜವಾದದ ವಿರುದ್ಧ ನಿರ್ಣಯವನ್ನು ಅಂಗೀಕರಿಸುವ ಅಗತ್ಯ ಏನಿತ್ತು? ಏಕೆಂದರೆ ಅಮೆರಿಕದ ಜನರಲ್ಲಿ ಅದರಲ್ಲೂ ಯುವ ಪೀಳಿಗೆಯಲ್ಲಿ ಸಮಾಜವಾದಿಗಳ ಪರವಾದ ಮನೋಭಾವ ಹೆಚ್ಚಿದೆ. ಕಮ್ಯುನಿಸ್ಟ್ ಪ್ರಣಾಳಿಕೆ ಬರೆದ 175 ವರ್ಷಗಳ ನಂತರವೂ "ಕಮ್ಯುನಿಸ್ಟ್ ಗುಮ್ಮ" ಅಮೆರಿಕ ಮತ್ತು ಭಾರತ ಸೇರಿದಂತೆ ಇತರ ಬಂಡವಾಳಶಾಹಿಗಳ ನಿದ್ದೆ ಕೆಡಿಸುತ್ತಿದೆ.

ಭಾರತದಲ್ಲಿಯೂ ಕಮ್ಯುನಿಸ್ಟರು ನಾಶವಾಗತೊಡಗಿದ್ದಾರೆ ಎಂದು ಹೇಳುವ ಬಂಡವಾಳಶಾಹಿ ಪರ ಚಿಂತಕರು, ಮಾಧ್ಯಮದವರು, ಕಳೆದ ಕೆಲವು ವರ್ಷಗಳಿಂದ ಪ್ರತಿ ವರ್ಷವೂ ಎಂಬಂತೆ, ಆಳುವವರ ಜನವಿರೋಧಿ, ಪ್ರಜಾಪ್ರಭುತ್ವ ವಿರೋಧಿ ನೀತಿಗಳ ವಿರುದ್ಧ ನಡೆಯುತ್ತಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಮತ್ತು ಅದರಲ್ಲಿ ಭಾಗವಹಿಸುವ ಕೋಟ್ಯಾಂತರ ಜನರನ್ನು ಒಮ್ಮೆ ನೋಡಬೇಕಿತ್ತು. ಈ ಚಳುವಳಿ ಎಡ ಪಕ್ಷಗಳು ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ನಡೆದ ಮುಷ್ಕರಗಳಾಗಿವೆ. ಪ್ರತಿಯೊಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳಲ್ಲಿ ಹೊಸ ಹೊಸ ವಿಭಾಗಗಳ ಜನತೆಯ ಸೇರ್ಪಡೆಯೊಂದಿಗೆ ಜನತೆಯ ಭಾಗವಹಿಸುವಿಕೆ ಹೆಚ್ಚಾಗುತ್ತಾ ಬಂದದ್ದು, 2020ರ ಡಿಸೆಂಬರ್ 30 ರಂದು ನಡೆದ ಮುಷ್ಕರದಲ್ಲಿ 25 ಕೋಟಿ ಶ್ರಮಿಕರು ಭಾಗಿಯಾಗಿದ್ದು, 2022ರ ಮಾರ್ಚ್ 28, 29 ಎರಡು ದಿನಗಳ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿ ಇವರ ಸಂಖ್ಯೆ ಮತ್ತಷ್ಟು ಹೆಚ್ಚಾಗಿದ್ದುದು ಇವೆಲ್ಲವನ್ನೂ ಕಮ್ಯುನಿಸ್ಟ್ ವಿರೋಧಿಗಳು ಮರೆಮಾಚುತ್ತಾರೆ. ಬ್ಯಾಂಕ್‌ಗಳು, ವಿಮಾ ಸಂಸ್ಥೆಗಳು, ಟೆಲಿಕಾಂ ಸಂಸ್ಥೆಗಳು ಮತ್ತು ಐಟಿ ವಲಯದಿಂದ ಹಿಡಿದು ಸಣ್ಣ ಉತ್ಪಾದನಾ ಘಟಕಗಳವರೆಗೆ ಕಾರ್ಮಿಕರು, ಸರ್ಕಾರಿ ನೌಕರರು, ರೈತರು, ಕೃಷಿಕೂಲಿಕಾರರು, ವಿದ್ಯಾರ್ಥಿ, ಯುವಜನರು ಸೇರಿದಂತೆ 25 ಕೋಟಿ ಜನರು ಈ ಹೋರಾಟಗಳಲ್ಲಿ ಭಾಗವಹಿಸಿದ್ದುದು, ಈ ಮುಷ್ಕರಕ್ಕೆ ಕಮ್ಯುನಿಸ್ಟರು, ಕಮ್ಯುನಿಸ್ಟ್ ನೇತೃತ್ವದ ಸಾಮೂಹಿಕ ಸಂಘಟನೆಗಳು ನೇತೃತ್ವ ನೀಡಿದ್ದು, ಈ ಹೋರಾಟಗಳಿಂದಾಗಿ ನವ–ಉದಾರವಾದಿ ನೀತಿಗಳ ಜಾರಿಯ ಒಕ್ಕೂಟ ಸರ್ಕಾರದ ವೇಗಕ್ಕೆ ತಡೆಯಾಗುತ್ತಿರುವುದು ಈ ಎಲ್ಲವನ್ನೂ ಬಂಡವಾಳಶಾಹಿ ಅನುಯಾಹಿಗಳು ಮರೆಮಾಚುವ ಪ್ರಯತ್ನ ಮಾಡುತ್ತಾರೆ.

ಬ್ಯಾಂಕುಗಳ ಮಾರಾಟ ತಡೆದಿರುವ ಹೋರಾಟಗಳು

ಸಾರ್ವಜನಿಕ ಒಡೆತನದ ಬ್ಯಾಂಕುಗಳ (ಪಿಎಸ್‌ಬಿ) ಖಾಸಗೀಕರಣ ಪ್ರಕ್ರಿಯೆಯನ್ನು ಮೋದಿ ಸರ್ಕಾರ ಮುಂದುವರಿಸಲಾಗದಂತೆ ತಡೆ ಹಿಡಿಯುವಲ್ಲಿ ಎಡ ಪಕ್ಷಗಳು, ಆ ಪಕ್ಷಗಳ ಕಾರ್ಮಿಕ ಸಂಘಟನೆಗಳು ಮತ್ತು ಅವುಗಳ ನೇತೃತ್ವದ ಹೋರಾಟಗಳು ಯಶಸ್ವಿಯಾಗಿವೆ. ಪಿಎಸ್‌ಬಿ ಗಳನ್ನು ಸಾರ್ವಜನಿಕರ ಒಡೆತನದಲ್ಲೇ ಉಳಿಸಿಕೊಳ್ಳುವಲ್ಲಿ, ಬ್ಯಾಂಕುಗಳು ಖಾಸಗಿ ಬಂಡವಾಳಗಾರರ ವಶಕ್ಕೆ ಹೋಗದಂತೆ ತಡೆಯುವಲ್ಲಿ, ಸರ್ಕಾರದ ಜನವಿರೋಧಿ ನೀತಿಗಳಾದ ನವ–ಉದಾರೀಕರಣ ನೀತಿಗಳ ಜಾರಿಯ ವೇಗಕ್ಕೆ ಕಡಿವಾಣ ಹಾಕುವಲ್ಲಿ ಮೋದಿ ಸರ್ಕಾರದ ಮೇಲೆ ಎಡ ಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳ ಹೋರಾಟ ಎಷ್ಟು ಪರಿಣಾಮ ಬೀರಿದೆ ಎಂಬದನ್ನು ಮನಿಕಂಟ್ರೋಲ್ ಮಾಧ್ಯಮದ ಇತ್ತೀಚಿನ (ಜುಲೈ 12, 2023) ವರದಿಯೊಂದು ಹೇಳುತ್ತದೆ.

ಭಾರತದ 137 ಕೋಟಿ ಜನಸಂಖ್ಯೆಯಲ್ಲಿ 92 ಕೋಟಿ ದುಡಿಯುವ ವಯಸ್ಸಿನವರು. 25 ಕೋಟಿ ಜನರು ಎಂದರೆ, ಇವರಲ್ಲಿ ನಾಲ್ಕನೇ ಒಂದು ಭಾಗ ಶ್ರಮಿಕರು ಸಾರ್ವತ್ರಿಕ ಮುಷ್ಕರಗಳಲ್ಲಿ ಭಾಗಿಯಾಗಿದ್ದರು. ಸರ್ಕಾರದ ನವ ಉದಾರವಾದಿ ನೀತಿಗಳ ವಿರುದ್ಧ, ಬೆಲೆ ಏರಿಕೆ, ಉದ್ಯೋಗ, ಭೂಮಿ, ವಸತಿ, ಸಾರ್ವಜನಿಕ ಉದ್ದಿಮೆಗಳ ಮಾರಾಟ, ಬ್ಯಾಂಕುಗಳಲ್ಲಿನ ಸಾರ್ವಜನಿಕರ ಸಂಪತ್ತಿನ ಲೂಟಿ, ಇಂತಹ ಜನರ ಬದುಕಿನ ಪ್ರಶ್ನೆಗಳ ಮೇಲೆ ಕಮ್ಯುನಿಸ್ಟರಲ್ಲದೆ, ಬೇರೆ ಯಾರಾದರೂ ಮುಷ್ಕರ ನಡೆಸಲು ಮತ್ತು ಈ ಪ್ರಮಾಣದ ಜನರನ್ನು ಒಳಗೊಳ್ಳುವಂತೆ ಮಾಡಲು ಸಾಧ್ಯವೇ? ಇಷ್ಟು ಬೃಹತ್ ಶಕ್ತಿ ಇರುವ ಭಾರತದ ಕಮ್ಯುನಿಸ್ಟರನ್ನು ಚುನಾವಣೆಗಳಲ್ಲಿ ಅವರು ಪಡೆಯುವ ಮತಗಳನ್ನು ನೋಡಿ ಅಳೆಯಲಾದಿತೆ?

ಮೋದಿ ಸರ್ಕಾರವನ್ನು ಮಣಿಸಿದ ಐತಿಹಾಸಿಕ ರೈತರ ಹೋರಾಟ

ದುಡಿಯುವ ವರ್ಗವು ತಮ್ಮ ಸ್ವಂತ ಅನುಭವದ ಮೂಲಕ ಶತ್ರುವನ್ನು ಗುರುತಿಸಿದಾಗ, ಅದೇ ಸಮಯದಲ್ಲಿ ಅವರು ತಮ್ಮ ಸ್ನೇಹಿತರನ್ನು ಗುರುತಿಸುತ್ತಾರೆ. ಸಾಮಾನ್ಯವಾಗಿ ರೈತರು ಮತ್ತು ಕಾರ್ಮಿಕರು ಬೆಲೆ ಏರಿಕೆ ಮತ್ತು ಆದಾಯದ ಅಸಮಾನತೆಗಳಿಗಾಗಿ ಪರಸ್ಪರರ ವಿರುದ್ಧ ಹೋರಾಡುತ್ತಾರೆ. ಆದರೆ ಹೋರಾಟದ ಕೊನೆಯ ವರ್ಷದಲ್ಲಿ, ಎರಡೂ ವಿಭಾಗಗಳು ಬಿಜೆಪಿಯ ಅದೇ ನವ ಉದಾರವಾದಿ ಆರ್ಥಿಕ ನೀತಿಗಳಿಂದ ದಾಳಿಗೆ ಒಳಗಾಗಿದ್ದವು, ಅದು ಎರಡನ್ನೂ ಒಟ್ಟಿಗೆ ತಂದಿತು. ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯು ಸಂಯುಕ್ತ ಕಿಸಾನ್ ಮೋರ್ಚಾ (SKM) ಹೋರಾಟಕ್ಕೆ ತನ್ನ ಸಕ್ರಿಯ ಬೆಂಬಲವನ್ನು ವಿಸ್ತರಿಸಿತು ಮತ್ತು ನಾಲ್ಕು ಕಾರ್ಮಿಕ ಸಂಹಿತೆಗಳು ಮತ್ತು ಸಾರ್ವಜನಿಕ ವಲಯದ ಉದ್ಯಮ(PSU)ಗಳ ಖಾಸಗೀಕರಣದ ವಿಷಯಯನ್ನು ತೆಗೆದುಕೊಂಡಿತು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂಎನ್‌ಆರ್‌ಇಜಿಎ) ಮತ್ತು ಸಾರ್ವಜನಿಕ ಪಡಿತರ ವ್ಯವಸ್ಥೆ (ಪಿಡಿಎಸ್) ಸಮಸ್ಯೆಗಳನ್ನು ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು SKM ಎರಡೂ ಕೃಷಿ ಕಾರ್ಮಿಕರನ್ನು ಹತ್ತಿರಕ್ಕೆ ತರುತ್ತವೆ. ರೈತರ ಹೋರಾಟಕ್ಕೆ ಬೆಂಬಲವಾಗಿ ಕಾರ್ಮಿಕರ ಬೃಹತ್ ಸಮಾವೇಶಗಳು ನಡೆದವು. ರೈತರು ಮತ್ತು ಕೃಷಿ ಕಾರ್ಮಿಕರು ಟ್ರೇಡ್ ಯೂನಿಯನ್‌ಗಳು ಕರೆದ ಮುಷ್ಕರಗಳು ಮತ್ತು ಇತರ ಕ್ರಿಯೆಗಳ ಭಾಗವಾದರು.

ಇವು ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತು ರೈತರ ನಾಯಕತ್ವದ ಉದ್ದೇಶಪೂರ್ವಕ ಪ್ರಯತ್ನಗಳಾಗಿವೆ. ರೈತರ ವಿಜಯದ ನಂತರ, ಈ ಒಗ್ಗಟ್ಟನ್ನು ಮುಂದುವರಿಸಲು ನಾಯಕತ್ವವು ಪುನರುಚ್ಚರಿಸಿತು.

ಕಳೆದ 9 ವರ್ಷಗಳಲ್ಲಿ ಭಾರತ ಎದುರಿಸುತ್ತಿರುವ, ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಿಂದ ಒಡೆದು ಆಳುವ ಹಿಂದುತ್ವದ ರಾಜಕೀಯವನ್ನು ಹೇಗೆ ಎದುರಿಸುವುದು ಎಂಬುದೊಂದು ದೊಡ್ಡ ಪ್ರಶ್ನೆಯಾಗಿದೆ. ಅದು ಅವರ ಧಾರ್ಮಿಕ ಮತ್ತು ಜಾತಿಯ ಗುರುತಿನ ಮೇಲೆ ಜನರ ಒಗ್ಗಟ್ಟನ್ನು ಒಡೆಯುತ್ತದೆ. ಇದಕ್ಕೆ ಉತ್ತರವೆಂದರೆ ಅವರ ಸಮಸ್ಯೆಗಳ ಆಧಾರದ ಮೇಲೆ ಕಾರ್ಮಿಕರು ಮತ್ತು ರೈತರ ಐಕ್ಯತೆ, ಇದು ಸಾಮಾನ್ಯ ಜನರ ವ್ಯಾಪಕ ಬೆಂಬಲವನ್ನು ಕೇಳುತ್ತದೆ.

ಕಮ್ಯುನಿಸ್ಟರ ಹೋರಾಟಗಳಿಲ್ಲದಿದ್ದರೆ ಎಂದೋ.....

10 ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಬಹುತೇಕ ಎಲ್ಲಾ ಸ್ವತಂತ್ರ ವಲಯವಾರು ಒಕ್ಕೂಟಗಳನ್ನು ಒಳಗೊಂಡ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ನೇತೃತ್ವದಲ್ಲಿ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳನ್ನು ನಡೆಸುವ ಮೂಲಕ ಜನರನ್ನು ಭಾದಿಸುವ ಮುಕ್ತ ಆರ್ಥಿಕ ನೀತಿಗಳ ಜಾರಿಗೆ ತಡೆ ವೊಡ್ಡಿವೆ. ಈ ಮೂಲಕ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (LPG) ನೀತಿಗಳ ಜಾರಿಯ ವೇಗ ಕುಂಠಿತಗೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಸಾಧ್ಯವಾಗಿದೆ. ಕಮ್ಯುನಿಸ್ಟರ ಹೋರಾಟಗಳು ಕ್ಷೀಣಿಸಿದ್ದರೆ, ಈ ನೀತಿಗಳ ವಿರುದ್ಧ ಕಮ್ಯುನಿಸ್ಟರು ಜನರನ್ನು ಹೋರಾಟಕ್ಕೆ ಇಳಿಸದಿದ್ದರೆ, ಆಳುವ ಬಂಡವಾಳಶಾಹಿ ವರ್ಗ ಇಷ್ಟರಲ್ಲಾಗಲೇ LPG ನೀತಿಗಳನ್ನು ಸಂಪೂರ್ಣವಾಗಿ ಜಾರಿಗೊಳಿಸುತ್ತಿದ್ದರು. ಅದು ಮೋದಿ ಅಧಿಕಾರಕ್ಕೆ ಬರುವ ಮುನ್ನವೇ ಕಾಂಗ್ರೆಸ್ ಆಡಳಿತಗಳಲ್ಲೇ ಜಾರಿಯಾಗುತ್ತಿದ್ದವು. ಸಾರ್ವಜನಿಕ ವಲಯದ ಉದ್ಯಮಗಳು ಸ್ವದೇಶಿ ಮತ್ತು ವಿದೇಶಿ ಬಂಡವಾಳಗಾರರ ಸ್ವತ್ತಾಗುತ್ತಿದ್ದವು.

1991 ರಲ್ಲಿ ವಿಶ್ವ ವಾಣಿಜ್ಯ ಸಂಸ್ಥೆ(WTO)ಯ ಜೊತೆಗೆ ಪಿವಿ ನರಸಿಂಹರಾವ್ ಸರ್ಕಾರ ಮಾಡಿಕೊಂಡ ಗ್ಯಾಟ್ ಒಪ್ಪಂದದ ಷರತ್ತುಗಳಿಗೆ ಒಪ್ಪಿ ಸಹಿ ಮಾಡಿದಾಗಲೇ, ಈ ಒಪ್ಪಂದದ ಮುಂದಿನ ಕೆಟ್ಟ ಪರಿಣಾಮಗಳೇನು, ಅದು ದೇಶದ ಆರ್ಥಿಕತೆಯ ಮೇಲೆ, ರೈತರು ಮತ್ತು ಕಾರ್ಮಿಕರ ಮೇಲೆ, ಸಣ್ಣ ವ್ಯಾಪಾರಿಗಳ ಮೇಲೆ, ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಮೇಲೆ, ಸಾಮಾಜಿಕ ಭದ್ರತಾ ಯೋಜನೆಗಳ ಮೇಲೆ, ಪಡಿತರ ವ್ಯವಸ್ಥೆಯ ಮೇಲೆ, ಒಟ್ಟಾರೆಯಾಗಿ ಜನಸಾಮಾನ್ಯರ ಮೇಲೆ ಹಾಗೂ ಸಾರ್ವಜನಿಕ ಉದ್ಯಮಗಳ ಮೇಲೆ ಏನೆಲ್ಲಾ ಪರಿಣಾಮ ಬೀರುತ್ತದೆ ಎಂಬುದನ್ನು ವಿವರಿಸುವ ಮೂಲಕ ಕಮ್ಯುನಿಸ್ಟರು ಅದರ ವಿರುದ್ಧ ಜನರನ್ನು ಸಂಘಟಿಸಿ ಬೀದಿಗಿಳಿದು ಹೋರಾಟ ಮಾಡಿದ್ದರು. ಗ್ಯಾಟ್ ಒಪ್ಪಂದದ ಮುಂದಿನ ಪರಿಣಾಮಗಳ ಕುರಿತಾಗಿ ಕಮ್ಯುನಿಸ್ಟ್ ಪಕ್ಷಗಳು ಮತ್ತು ಅವುಗಳ ಸಾಮೂಹಿಕ ಸಂಘಟನೆಗಳು ಅಂದೇ ಕೆಲವು ಪುಸ್ತಕಗಳನ್ನೂ ಹೊರತಂದಿದ್ದರು.

ಇಂದೂ ಸಹಾ ಕಮ್ಯುನಿಸ್ಟರು, ಬಿಜೆಪಿ ನೇತೃತ್ವದ ನವ ಉದಾರವಾದಿ ನೀತಿಗಳು ಮತ್ತು ಕೋಮುವಾದದ ಅವಳಿ ದಾಳಿಯಿಂದ ಭಾರತವನ್ನು ರಕ್ಷಿಸುವ ಭವಿಷ್ಯದ ಹೋರಾಟಗಳಿಗಾಗಿ ರೈತ–ಕಾರ್ಮಿಕರ ಐಕ್ಯತೆಯನ್ನು ಅದರ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯಲು ಮತ್ತು ಮತ್ತಷ್ಟು ಬಲಪಡಿಸಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ಭ್ರಷ್ಟಗೊಂಡಿರುವ ಚುನಾವಣಾ ವ್ಯವಸ್ಥೆ

ಚುನಾವಣೆಯಲ್ಲಿ ಕಮ್ಯುನಿಸ್ಟರು ಉತ್ತಮ ಸಾಧನೆ ಮಾಡದಿರಲು ಮತ್ತೊಂದು ಪ್ರಮುಖ ಕಾರಣ, ಬಂಡವಾಳಶಾಹಿ ಪಕ್ಷಗಳು ಮತ್ತು ಆ ಪಕ್ಷಗಳ ಅಭ್ಯರ್ಥಿಗಳು ಚುನಾವಣೆಯನ್ನು ಭ್ರಷ್ಟವನ್ನಾಗಿ ಮಾಡಿರುವುದೂ ಒಂದು ಕಾರಣ. ಕಮ್ಯುನಿಸ್ಟರನ್ನು ಹೊರತುಪಡಿಸಿದಂತೆ ಬಹುತೇಕ ರಾಜಕೀಯ ಪಕ್ಷಗಳು ಮತ್ತು ಸ್ವತಂತ್ರ ಅಭ್ಯರ್ಥಿಗಳು ತಮ್ಮ ಸಾಧನೆಗಳ ಆಧಾರದಲ್ಲಿ ಮತ ಕೇಳುವುದಿಲ್ಲ. ತಮ್ಮ ನೀತಿ ನಿಲುವುಗಳ ಕುರಿತು ಮಾತನಾಡುವುದಿಲ್ಲ. ತಮ್ಮ ಪಕ್ಷದ ನಿಜವಾದ ಸಿದ್ಧಾಂತ ಮತ್ತು ಗುರಿ ಏನು ಎಂಬುದನ್ನು ಬಹಿರಂಗಪಡಿಸುವುದಿಲ್ಲ. ಜಾತಿ, ದೇವರು, ಧರ್ಮ, ಭಾಷೆ, ಪ್ರಾದೇಶಿಕ ವಿಷಯದಲ್ಲಿನ ಜನರ ಭಾವನೆಗಳನ್ನು ಬಳಸಿಕೊಂಡು ಮತ ಪಡೆಯಲು ಮುಂದಾಗುತ್ತಾರೆ. ಮತದಾರರಿಗೆ ಹಲವು ಬಗೆಯ ಆಮಿಷಗಳನ್ನು ಹೊಡ್ಡುತ್ತಾರೆ. ಹಣ ಹಂಚುತ್ತಾರೆ. ದೇವಸ್ಥಾನ, ಮಸೀದಿ, ಚರ್ಚ್ ಗಳನ್ನು ಕಟ್ಟಲು ಹಣದ ನೆರವು ನಿಡುತ್ತಾರೆ. ಪ್ರಣಾಳಿಕೆಯಲ್ಲಿ ಸುಳ್ಳು ಭರವಸೆ ನೀಡುತ್ತಾರೆ.

ಆದರೆ, ಕಮ್ಯುನಿಸ್ಟ್ ಪಕ್ಷಗಳು ತಮ್ಮ ಸಿದ್ಧಾಂತಗಳು, ನೀತಿ ನಿಲುವುಗಳ ಆಧಾರದ ಮೇಲೆ ಜನರ ಬಳಿ ಹೋಗುತ್ತವೆ. ಮತದಾರರಿಗೆ ಹಣ ಹಂಚುವುದಿಲ್ಲ, ದೇವರು, ಧರ್ಮ, ಭಾಷೆ ಹೆಸರಿನಲ್ಲಿ ಜನರ ಭಾವನೆಗಳನ್ನು ಕೆರಳಿಸುವ ಪ್ರಯತ್ನ ಮಾಡುವುದಿಲ್ಲ.

ಭಾರತದಲ್ಲಿ ಆರ್ಥಿಕ ಅಸಮಾನತೆ

ಬಂಡವಾಳಶಾಹಿ ವ್ಯವಸ್ಥೆಯು ಉತ್ಪಾದನಾ ಸಾಧನಗಳನ್ನು ಕೆಲವರಲ್ಲಿ ಕೇಂದ್ರೀಕರಿಸುತ್ತದೆ. ಪರಿಣಾಮವಾಗಿ, ಸಂಪತ್ತು ಕೂಡ ಕೆಲವರ ಕೈಯಲ್ಲಿ ಅಗಾಧವಾಗಿ ಸಂಗ್ರಹವಾಗುತ್ತದೆ. ಈ ವರ್ಷದ ಜನವರಿಯಲ್ಲಿ ಪ್ರಕಟವಾದ ಆಕ್ಸ್‌ಫ್ಯಾಮ್ ವರದಿಯ ಮಾಹಿತಿಯು ಇದು ಎಷ್ಟು ನಿಜ ಎಂಬುದನ್ನು ಬಹಿರಂಗಪಡಿಸುತ್ತದೆ. '2020 ರಲ್ಲಿ ಜಗತ್ತಿನ ಒಟ್ಟು ಸಂಪತ್ತಿನ ಶೇ. 67 ರಷ್ಟು ಸಂಪತ್ತನ್ನು ಶೇ. ಒಂದರಷ್ಟು ಶ್ರೀಮಂತರು ಹೊಂದಿದ್ದಾರೆ. ಉಳಿದ ಶೇ. 99 ರಷ್ಟು ಜನರು ಕೇವಲ ಶೇ. 33 ರಷ್ಟು ಸಂಪತ್ತು ಹೊಂದಿದ್ದಾರೆ. ಕೆಳಗಿನ ಶೇ. 90 ರಷ್ಟು ಜನರ ತಲಾ ಆದಾಯ ಒಂದು ಡಾಲರ್ ಇದ್ದರೆ, ಬಿಲಿಯನೇರ್‌ಗಳು ಗಳಿಸಿದ ಆದಾಯ 17,00,000 ಡಾಲರ್ ಗಳು.' ಪುಟ 14 ಕ್ಕೆ

ಸಂಪಾದಕೀಯ

ವಿರೋಧ ಪಕ್ಷಗಳ ಮುತುವರ್ಜಿ: ಸಕಾರಾತ್ಮಕ ಕ್ರಿಯೆ

2024 ರ ಲೋಕಸಭಾ ಚುನಾವಣೆಯಲ್ಲಿ ಹಿಂದುತ್ವದ ಕೋಮುವಾದಿ ಹಾಗೂ ಕಾರ್ಪೋರೇಟ್ ಗಳ ಸಂಗಮವಾದ ಬಿಜೆಪಿಯನ್ನು ಅಧಿಕಾರದಿಂದ ತೊಲಗಿಸುವ ದೆಸೆಯಲ್ಲಿ ಇದೇ 2023 ಜುಲೈ 17 ಮತ್ತು 18 ರಂದು ಬೆಂಗಳೂರಿನಲ್ಲಿ ನಡೆದ ವಿರೋಧ ಪಕ್ಷಗಳ ಸಭೆ ಅತ್ಯಂತ ಮಹತ್ವದ್ದು. ವಿವಿಧ ಸೈದ್ಧಾಂತಿಕ, ರಾಜಕೀಯ ನಿಲುವುಗಳಿದ್ದರೂ ಈ ಸಭೆಯಲ್ಲಿ 26 ಪಕ್ಷಗಳು ಒಂದೆಡೆ ಸೇರಿ ಸಾಮಾನ್ಯ ಗುರಿಯತ್ತ ಸಾಗುವ ಕಾರ್ಯ ಯೋಜನೆ ಮತ್ತು ಬದ್ಧತೆಯನ್ನು ಪ್ರಕಟಿಸಿದ್ದು ಗಮನಾರ್ಹ. ದೇಶವನ್ನು ರಕ್ಷಿಸುವ ತುರ್ತನ್ನು ಮನಗಂಡಿರುವ ವಿರೋಧ ಪಕ್ಷಗಳು ನಿರ್ಣಾಯಕ ಹೋರಾಟವನ್ನು ನಡೆಸಬೇಕಾದ ಅನಿವಾರ್ಯ ಅಗತ್ಯವನ್ನು ಮನಗಂಡಿರುವುದು ಅವುಗಳ ಪ್ರಕಟನೆಯಲ್ಲಿ ವ್ಯಕ್ತವಾಗಿದೆ. ಮತ್ತೊಂದು ಗಮನಾರ್ಹ ಬೆಳವಣಿಗೆ ಎಂದರೆ ವಿರೋಧ ಪಕ್ಷಗಳ ಇಂತಹ ಕ್ರಿಯಾಶೀಲತೆಯಿಂದ ಬಿಜೆಪಿ ವಿಹ್ವಲವಾಗಿರುವುದು. ಅವಸರದಲ್ಲಿ ಎಂದೋ ಮೂಲೆಗುಂಪು ಮಾಡಿ ಮರೆತೇ ಹೋಗಿ 'ತೀವ್ರ ನಿಗಾ ಘಟಕ' ದಲ್ಲಿದ್ದ ಎನ್.ಡಿ.ಎ. ಮೈತ್ರಿ ಕೂಟದ ಸಭೆ ಸೇರಿಸಿ ಒಂದು ಮೈತ್ರಿಕೂಟದ ಪ್ರದರ್ಶನ ಮಾಡಿದ್ದು. ಅಲ್ಲಿ ಸೇರಿದ್ದ ಬಹುತೇಕ ನಾಮಕಾವಸ್ತೆಯ 38 ಪಕ್ಷಗಳ ಪ್ರದರ್ಶನ, ವಾಗ್ಧಾಳಿ ಬಿಜೆಪಿಯ ಹತಾಶೆ ಮತ್ತು ಆತಂಕವನ್ನು ಹೊರಗಿಟ್ಟಿದೆ. ಇದು ಬಿಜೆಪಿಯ ಕ್ರಿಯೆಗೆ ವಿರೋಧ ಪಕ್ಷಗಳು ನೀಡುತ್ತಿದ್ದ ಪ್ರತಿಕ್ರಿಯೆಗೆ ಭಿನ್ನವಾದ ಪ್ರಕ್ರಿಯೆ. ಈಗ ವಿರೋಧ ಪಕ್ಷಗಳು ಕ್ರಿಯೆಯ ಮುತುವರ್ಜಿ ವಹಿಸುತ್ತಿದ್ದರೆ ಬಿಜೆಪಿ ಪ್ರತಿಕ್ರಿಯೆಯನ್ನು ನೀಡುತ್ತಿರುವುದು ಗಮನಿಸ ಬೇಕಾದ ಬೆಳವಣಿಗೆ. ವಿರೋಧ ಪಕ್ಷಗಳು ಇಂತಹ ಕ್ರಿಯಾಶೀಲತೆಯನ್ನು ಇನ್ನಷ್ಟು ಆಕ್ರಮಣಕಾರಿಯಾಗಿ ಸತತವಾಗಿ ಮುಂದೊತ್ತ ಬೇಕು. ಪ್ರಮುಖ ವಿಷಯಗಳನ್ನು ಎತ್ತಿಕೊಳ್ಳಬೇಕು, ನಡೆವ ಪ್ರತಿ ಘಟನೆಗಳಲ್ಲಿ ಮಧ್ಯ ಪ್ರವೇಶಿಸಿ ಜನತೆಯನ್ನು ಸಂರಕ್ಷಿಸ ಬೇಕು. ಮುಖ್ಯವಾಗಿ, ಜನತೆಗೆ ಬೇಕಿರುವುದು ಪರಿಹಾರ, ಸಾಂತ್ವನ, ಶಾಂತಿ, ಸಾಮರಸ್ಯದ ನೆಮ್ಮದಿಯ ಬದುಕು. ಹಾಗಾಗಿ ಪ್ರತಿಯೊಂದಕ್ಕೂ ಒಂದು ಸ್ಪಷ್ಟ ಸಕಾರಾತ್ಮಕ ಮನೋಭಾವದ ಪರ್ಯಾಯ ಇರಬೇಕು. ಇಂತಹ ಪ್ರಾಯೋಗಿಕತೆ ಸ್ಪಷ್ಟ ಕಾರ್ಯಕ್ರಮ ರೂಪುಗೊಳಿಸಬಲ್ಲುದು. ಜನರಲ್ಲಿ ಆತ್ಮ ವಿಶ್ವಾಸವನ್ನೂ ತುಂಬ ಬಲ್ಲುದು.

ಈ ಮೈತ್ರಿ ಕೂಟಕ್ಕೆ 'ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟ್ ಇನ್‌ಕ್ಲೂಸಿವ್ ಅಲೈಯನ್ಸ್ ಅಥವಾ 'ಇಂಡಿಯಾ' (I.N.D.I.A) ಎಂದು ಹೆಸರಿಸಿರುವುದು ಒಂದು ಸಕಾರಾತ್ಮಕ ನಡೆ. ಭಾರತದ ಪರಿಕಲ್ಪನೆಯ ವಿರುದ್ಧ ಬಿಜೆಪಿ ಮತ್ತು ಹಿಂದುತ್ವ ರಾಷ್ಟ್ರೀಯವಾದಿಗಳ ದಾಳಿಯಿಂದ ದೇಶವನ್ನು ಉಳಿಸಲು ವಿರೋಧ ಪಕ್ಷಗಳು ಈ ಹೆಸರನ್ನು ಇಟ್ಟಿವೆ. ಸಂವಿಧಾನದ ಮೂಲಭೂತ ತತ್ವಗಳಾದ ಜಾತ್ಯಾತೀತತೆ, ಪ್ರಜಾಪ್ರಭುತ್ವ, ಆರ್ಥಿಕ ಸಾರ್ವಭೌಮತ್ವ, ಸಾಮಾಜಿಕ ನ್ಯಾಯ ಮತ್ತು ಈ ಮೈತ್ರಿ ಕೂಟಕ್ಕೆ 'ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟ್ ಇನ್‌ಕ್ಲೂಸಿವ್ ಅಲೈಯನ್ಸ್ ಅಥವಾ 'ಇಂಡಿಯಾ' (I.N.D.I.A) ಎಂದು ಹೆಸರಿಸಿರುವುದು ಒಂದು ಸಕಾರಾತ್ಮಕ ನಡೆ. ಭಾರತದ ಪರಿಕಲ್ಪನೆಯ ರುದ್ಧ ಬಿಜೆಪಿ ಮತ್ತು ಹಿಂದುತ್ವ ರಾಷ್ಟ್ರೀಯವಾದಿಗಳ ದಾಳಿಯಿಂದ ದೇಶವನ್ನು ಉಳಿಸಲು ವಿರೋಧ ಪಕ್ಷಗಳು ಈ ಹೆಸರನ್ನು ಇಟ್ಟಿವೆ.

ಸಂವಿಧಾನದ ಮೂಲಭೂತ ತತ್ವಗಳಾದ ಜಾತ್ಯಾತೀತತೆ, ಪ್ರಜಾಪ್ರಭುತ್ವ, ಆರ್ಥಿಕ ಸಾರ್ವಭೌಮತ್ವ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟದ ಮೇಲೆ ದಾಳಿ ಮಾಡುತ್ತಿರುವ ಆರ್.ಎಸ್.ಎಸ್.–ಬಿಜೆಪಿ ಮೈತ್ರಿಯಿಂದ ಭಾರತವನ್ನು ರಕ್ಷಿಸುವುದು 'ಭಾರತ' (I.N.D.I.A) ದ ಉದ್ದೇಶವಾಗಿದೆ ಎಂದು ಅವು ಪ್ರಕಟಿಸಿವೆ. ಒಟ್ಟು ಮೈತ್ರಿಕೂಟದ ಕೆಲಸಗಳನ್ನು ನಿರ್ವಹಿಸಲು ಸಂಚಾಲನ ಸಮಿತಿಯ ರಚನೆ, ಪ್ರಚಾರ ಸಮಿತಿ ಗಳನ್ನು ರಚಿಸಿರುವ ಮೂಲಕ ಚಟುವಟಿಕೆಗಳಿಗೆ ಸಂಘಟನಾ ಸ್ವರೂಪ ಮತ್ತು ಸಹಜ ನಾಯಕತ್ವ ರೂಪುಗೊಳ್ಳಲು ಮುಂದಡಿ ಇಟ್ಟಿದೆ. ಈ ಮೈತ್ರಿಕೂಟ ಹಿಂದಿನ ಸಭೆಗಿಂತ ಮತ್ತಷ್ಟು ಹೊಸ ಪಕ್ಷಗಳನ್ನು ಒಳಗೊಂಡಿರುವುದು ಸಹ ಸಕಾರಾತ್ಮಕವಾಗಿದೆ.

ಮೋದಿ ಮತ್ತು ಅಮಿತ್ ಷಾ ಜೋಡಿಗೆ ಸೋಲೆಂಬುದೇ ಇಲ್ಲ, ಅಜೇಯ ಎಂದು ಬೀಗುತ್ತಿದ್ದವರಿಗೆ ಕರ್ನಾಟಕದ ಜನತೆ ಅಘಾತಕಾರಿ ಸೋಲನ್ನು ನೀಡಿದರು. ಈ ಫಲಿತಾಂಶ ದೇಶದಲ್ಲಿ ಮುಂಬರುವ ಚುನಾವಣೆಯಲ್ಲಿ ಮೋದಿ ಷಾ ರ ನ್ನು ಸೋಲಿಸಬಹುದು ಎಂಬ ಆತ್ಮ ವಿಶ್ವಾಸವನ್ನು ನೀಡಿತು. ಹೀಗಾಗಿ ವಿರೋಧ ಪಕ್ಷಗಳ ಈ ಕ್ರಿಯಾಶೀಲತೆ, ಫ್ಯಾಶಿಸ್ಟ್ ವಾದಿ 'ಮೋ–ಷಾಗಳನ್ನು ಸೋಲಿಸಬಹುದು' ಎನ್ನುವ ಅಭಿಯಾನಕ್ಕೆ ಖಂಡಿತ ಬಲ ತುಂಬಿದೆ. ಈ ಸಭೆಯ ಯಶಸ್ಸು ದೇಶದ ಜನತೆಗೆ ಭರವಸೆ ಹುಟ್ಟಿಸುತ್ತದೆ.

ಅದೇ ಹೊತ್ತಿನಲ್ಲಿ ಗಮನಿಸಬೇಕಾದ್ದು ಭಾರತ ಹಿಂದೆ ಇಂತಹ ಹಲವು ಮೈತ್ರಿಕೂಟಗಳ ರಚನೆಗೆ ಸಾಕ್ಷಿಯಾಗಿದೆ. ಸಹಮತ, ಕೆಲವು ಭಿನ್ನಾಭಿಪ್ರಾಯಗಳು ತಲೆದೋರಿದ್ದವು. ಆದರೆ ಕಾಲ ಬದಲಾಗಿದೆ. ಅಂತಹ ಪ್ರಸಂಗಗಳು ಅನುಭವವನ್ನು ಶ್ರೀಮಂತಗೊಳಿಸಬಲ್ಲವು. ಅದರಿಂದ ಹಲವು ಸೂಕ್ತ ಪಾಠಗಳನ್ನೂ ಕಲಿಯಬಹುದು. ಕೋಮುವಾದಿ ಕಾರ್ಪೋರೇಟ್ ಬಣ ಹಲವು ಸಮಸ್ಯೆಗಳನ್ನು ವಿರೋಧ ಪಕ್ಷಗಳ ಒಳ ಹೊರಗೂ ಸೃಷ್ಟಿಸಬಹುದು. ಅಂತಹ ಯತ್ನಗಳನ್ನು ಮಹರಾಷ್ಟ್ರ, ಕರ್ನಾಟಕ ಮುಂತಾದೆಡೆ ಕಂಡಿದ್ದೇವೆ. ಕೇವಲ ಅಧಿಕಾರ ಪೀಠದಲ್ಲಿದ್ದರೆ ಸಾಕು ಗರಲ್ಲಬಹುದು ಎನ್ನುವುದು ಒಂದು ಭ್ರಮೆ. ಹಾಗೆ ಪ್ರಧಾನಿಯ ಅಭ್ಯರ್ಥಿಯನ್ನು ಪ್ರಕಟಿಸಬೇಕೆಂದು ಬಿಜೆಪಿ ಕೇಳುವುದೂ ಅರ್ಥಹೀನ ಕೂಡ. ಈಗ ಯಾರು ಪ್ರಧಾನಿ ಎಂಬ ಪ್ರಶ್ನೆಯಲ್ಲ. ನಮ್ಮಲ್ಲಿ ಪ್ರಧಾನಿಯನ್ನು ನೇರ ಚುನಾಯಿಸುವ ಪದ್ಧತಿಯೂ ಇಲ್ಲ. ಸಂಸದರು ನಾಯಕನನ್ನು ಆಯ್ಕೆ ಮಾಡುವರು. ಮೊದಲೇ ಪ್ರಧಾನಿ ಹೆಸರು ಪ್ರಚಾರ ಮಾಡುವುದು ಪ್ರಜಾಪ್ರಭುತ್ವಕ್ಕೆ ವಿರೋಧವಾದುದು. ಬಿಜೆಪಿಯ ಅಂತಹ ಹಾದಿ ತಪ್ಪಿಸುವ ಕುತಂತ್ರಕ್ಕೂ ಯಾರೂ ಬಲಿಯಾಗಬಾರದು. ನಾಯಕನ ಆಯ್ಕೆ ಎನ್ನುವುದು ಹೊಸ ಸಂಸತ್ ಸದಸ್ಯರ ಹಕ್ಕು. ಅದು ಅಭಾಧಿತವಿರಲಿ.

ಬೆಂಗಳೂರಿನಲ್ಲಿಯ ವಿರೋಧ ಪಕ್ಷಗಳ ಸಭೆ ಹೊಸ ನಿರೀಕ್ಷೆ ಮತ್ತು ಜನತೆಯ ಆಂದೋಲನಗಳಿಗೆ ಸಕಾರಾತ್ಮಕ ಸಂಕೇತ ನೀಡಿದೆ. ಅದು ಮತ್ತಷ್ಟೂ ಬಲಗೊಂಡು ಮುನ್ನಡೆಯಲಿ.



ದಲಿತರ ಹಕ್ಕೊತ್ತಾಯ ಸಮಾವೇಶ: ಮನೆ, ನಿವೇಶನ, ಭೂ ಮಂಜೂರಾತಿಗೆ ಒತ್ತಾಯ

ರಾಜ್ಯದಲ್ಲಿ ಮನೆ ಇಲ್ಲದ ದಲಿತ ಕುಟುಂಬಗಳಿಗೆ ನಿವೇಶನ ಮತ್ತು ಮನೆ, ಕೃಷಿ ಭೂಮಿ ಇಲ್ಲದವರಿಗೆ ಭೂಮಿ, ಬಗರ್ ಹುಕುಂ ಸಾಗುವಳಿದಾರರಿಗೆ ಭೂ ಮಂಜೂರಾತಿ, ದಲಿತರ ಮೇಲಿನ ದೌರ್ಜನ್ಯಗಳ ತಡೆ ಸೇರಿದಂತೆ ದಲಿತರ ಹಲವು ಸಮಸ್ಯೆಗಳ ಪರಿಹಾರಕ್ಕೆ 'ದಲಿತರ ಹಕ್ಕೊತ್ತಾಯ ರಾಜ್ಯಮಟ್ಟದ ಸಮಾವೇಶ'ದಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸಲಾಯಿತು.

'ದಲಿತ ಹಕ್ಕುಗಳ ಸಮಿತಿ–ಕರ್ನಾಟಕ' (DHS) ರಾಜ್ಯ ಸಮಿತಿ ವತಿಯಿಂದ ಜುಲೈ 3ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ 'ದಲಿತರ ಹಕ್ಕೊತ್ತಾಯ ರಾಜ್ಯಮಟ್ಟದ ಸಮಾವೇಶ'ದಲ್ಲಿ ಮಾತನಾಡಿದ ಸಾಹಿತಿಗಳು, ಪ್ರಗತಿಪರ ಚಿಂತಕರು, ದಲಿತ ಮುಖಂಡರು ಮಾತನಾಡಿ, ರಾಜ್ಯದಲ್ಲಿ ದಲಿತರು ಎದುರಿಸುತ್ತಿರುವ ಹಲವು ಗಂಭೀರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು.

ಸಾಹಿತಿ ಹಾಗೂ ಪ್ರಗತಿಪರ ಚಿಂತಕ ಡಾ. ಅರವಿಂದ ಮಾಲಗತ್ತಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಸಮಾರಂಭದಲ್ಲಿ ಆರ್ಥಿಕ ತಜ್ಞ ಪ್ರೊ. ಟಿ.ಆರ್. ಚಂದ್ರಶೇಖರ್ ಅವರು ದಲಿತರ ಆರ್ಥಿಕ ಅಭಿವೃದ್ಧಿ ಕುರಿತು ಮಾತನಾಡಿದರು. ಡಿ.ಎಚ್.ಎಸ್. ರಾಜ್ಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಸಹ ಸಂಚಾಲಕ ಎನ್.ನಾಗರಾಜ್, ಎನ್.ರಾಜಣ್ಣ, ಬಿ.ಮಾಳಮ್ಮ, ಆರ್.ಕೃಷ್ಣ ಹಾಗೂ ಹೆಚ್.ಜಿ. ನಾಗಣ್ಣ ಸಮಾರಂಭದಲ್ಲಿ ಭಾಗವಹಿಸಿದ್ದರು.

ಸಮಾವೇಶದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು. ಡಿ.ಎಚ್.ಎಸ್. ನಿಯೋಗವೊಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನವರನ್ನು ಭೇಟಿ ಮಾಡಿ ದಲಿತರ ಹಕ್ಕೊತ್ತಾಯಗಳ ಮನವಿಯನ್ನು ಸಲ್ಲಿಸಲು ನಿರ್ಧರಿಸಿತು.

ಸಮಾವೇಶದ ಮೂಲಕ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಮನವಿಯಲ್ಲಿನ ಪ್ರಮುಖ ಬೇಡಿಕೆಗಳು ಹೀಗಿವೆ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ವಿಸ್ತರಿಸಬೇಕು:

ದಲಿತರ ಭೂಮಿ ಪ್ರಶ್ನೆಗಳಿಗೆ ನ್ಯಾಯ ಒದಗಿಸಬೇಕು. ಬಗರ್ ಹುಕುಂ ಸಾಗುವಳಿದಾರರಿಗೆ ಭೂ ಮಂಜೂರಾತಿ ನೀಡಬೇಕು. ಭೂರಹಿತ ದಲಿತರ ಸಂಖ್ಯೆ ಶೇ. 70ಕ್ಕಿಂತ ಹೆಚ್ಚಾಗಿದೆ. ಭೂಮಿ ಇಲ್ಲದ ಕಾರಣದಿಂದ ದಲಿತರು ಗ್ರಾಮೀಣ ಪ್ರದೇಶಗಳಲ್ಲಿ ವರ್ಷದಲ್ಲಿ ಕೆಲವು ತಿಂಗಳಷ್ಟೇ ಸಿಗುವ ಕೃಷಿ ಕೆಲಸದಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದರೆ, ಬಹಳಷ್ಟು ದಲಿತ ಕೂಲಿಕಾರರು ಕೂಲಿ ಅರಸಿ ನಗರಗಳಲ್ಲಿ ವಲಸಿಗರಾಗಿ, ಸ್ಲಂಗಳಲ್ಲಿ ಬಡತನದ ಬೇಗೆಯಲ್ಲಿ ಸಿಲುಕಿ ನರಳುತ್ತಿದ್ದಾರೆ. ಈ ಕಾರಣದಿಂದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಸರ್ಕಾರ ಹೆಚ್ಚಿನ ಹಣ ಒದಗಿಸಬೇಕು. ವರ್ಷಕ್ಕೆ 200 ದಿನಗಳ ಕೆಲಸ ಮತ್ತು 600 ರೂ. ಕೂಲಿ ನಿಗದಿಪಡಿಸಬೇಕು. ಈ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು.

ಬಗರ್ ಹುಕುಂ ಸಾಗುವಳಿದಾರರಿಗೆ ಭೂ ಮಂಜೂರಾತಿ

ರಾಜ್ಯದಲ್ಲಿ ಲಕ್ಷಾಂತರ ದಲಿತರು ಬಗರ್ ಹುಕುಂ ಸಾಗುವಳಿದಾರರಾಗಿ 40–50 ವರ್ಷಗಳಿಂದ ಭೂಮಿ ಸಾಗುವಳಿ ಮಾಡುತ್ತಿದ್ದಾರೆ. ಸರ್ಕಾರದ ಆದೇಶದಂತೆ 54, 56, 57 ರಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಇವರಿಗೆ ಮಂಜೂರಾತಿ ಆದೇಶ ನೀಡಬೇಕು.

ಪಿಟಿಸಿಎಲ್ ಖಾಯ್ದೆ

ದಲಿತರ ಭೂಮಿಗೆ ರಕ್ಷಣೆ ನೀಡುವಂತೆ ಪಿಟಿಸಿಎಲ್ ಖಾಯ್ದೆ ತಿದ್ದುಪಡಿ ಮಾಡಿ ಜಾರಿಗೊಳಿಸಬೇಕು. ದರಖಾಸ್ತು ಜಮೀನುಗಳನ್ನು ಈ ಹಿಂದೆ ಸರ್ಕಾರ ನೀಡಿದ್ದರೂ, ದಲಿತರಿಗೆ, ಬಡವರ ಭೂಮಿಗೆ ರಕ್ಷಣೆ ಇಲ್ಲದಂತಾಗಿದೆ. ಸಾವಿರಾರು ಪ್ರಕರಣಗಳು ನ್ಯಾಯಾಲಯದಲ್ಲಿವೆ. ಎಸಿ ಮತ್ತು ಜಿಲ್ಲಾಧಿಕಾರಿಗಳು ಪಟ್ಟಭದ್ರ ಹಿತಾಶಕ್ತಿಗಳ ಪರವಹಿಸಿ, ಸುಪ್ರೀಂ ಕೋರ್ಟ್ ನ ಕೆಲವು ತೀರ್ಪುಗಳನ್ನು ಬಳಸಿ ಬಡವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಈ ಬಗ್ಗೆ ದಲಿತ ಸಂಘಟನೆಗಳು ಸ್ವಾತಂತ್ರ್ಯ ಉದ್ಯಾನವನದಲ್ಲಿ ಸತತ 180 ದಿನಗಳ ಹೋರಾಟ ನಡೆಸಿವೆ. ಕಾಂಗ್ರೆಸ್ ಪಕ್ಷ ತಾನು ನೀಡಿರುವ ವಾಗ್ದಾನದಂತೆ

ಪುಟ 04 ಕ್ಕೆ



ಮಣಿಪುರ ಹಿಂಸಾಚಾರದ ಆಘಾತಕಾರಿ ವೀಡಿಯೋ–ಮಹಿಳಾ ಸಂಘಟನೆಗಳ ಖಂಡನೆ–ಮಣಿಪುರ ಮುಖ್ಯಮಂತ್ರಿಯ ರಾಜೀನಾಮೆಗೆ ಆಗ್ರಹ

ಮಣಿಪುರದಲ್ಲಿ ಮೇ 3 ರಂದು ಜನಾಂಗೀಯ ಹಿಂಸಾಚಾರ ಪ್ರಾರಂಭವಾದ ಮರುದಿನವೇ ಮೇ 4 ರಂದು ನಡೆದ ಅತ್ಯಾಚಾರದ ಆಘಾತಕಾರಿ ವೀಡಿಯೋಗಳು ಸಾಮಾಜಿಕ ಮಾಧ್ಯಮದಲ್ಲಿ ಈಗ ಕಾಣಿಸಿಕೊಂಡಿವೆ. ಇವು ಒಂದೆಡೆಯಲ್ಲಿ ಅಮಾನುಷ ಕ್ರೌರ್ಯವನ್ನು ಮತ್ತು ಇನ್ನೊಂದೆಡೆಯಲ್ಲಿ ಮಣಿಪುರದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸುವ ಅಪರಾಧಿಗಳ ಭಂಡತನವನ್ನೂ, ನಾಚಿಕೆಗೇಡಿತನವನ್ನೂ ಪ್ರದರ್ಶಿಸಿದೆ ಎಂದು ಮಹಿಳಾ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ. ಈ ಘಟನೆಯಲ್ಲಿ ಪುರುಷರ ಗುಂಪು ಇಬ್ಬರು ಮಹಿಳೆಯರನ್ನು ಬೆತ್ತಲೆಯಾಗಿ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗಿತ್ತು. ಇದರ ವೀಡಿಯೊಗಳನ್ನು ರೆಕಾರ್ಡ್ ಮಾಡಿರುವುದು ಮಾತ್ರವಲ್ಲದೆ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಪೋಸ್ಟ್ ಮಾಡಿ ಈ ಮಹಿಳೆಯರ ಗುರುತನ್ನು ಬಹಿರಂಗಪಡಿಸಿರುವುದು ತುಂಬಾ ಆಘಾತಕಾರಿ, ಇದು ಸಂತ್ರಸ್ತರ ಘನತೆ ಮತ್ತು ಹಕ್ಕುಗಳನ್ನು ಉಲ್ಲಂಘಿಸಿರುವ ಕೃತ್ಯ ಎಂದು ಅವು ಖಂಡಿಸಿವೆ.



ಈ ಘಟನೆ ನಡೆದು ಎರಡೂವರೆ ತಿಂಗಳಾಗಿವೆ. ಆದರೆ ಕೇವಲ ಶೂನ್ಯ ಎಫ್‌ಐಆರ್ ಗಿಂತ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳದಿರುವುದು ಪೊಲೀಸರಿಗೆ ಸಂತ್ರಸ್ತರ ಬಗ್ಗೆ ನಿರಾಸಕ್ತಿ ಮತ್ತು ಅಪರಾಧಿಗಳೊಂದಿಗೆ ಅವರ ಶಾಮೀಲನ್ನು ಹೇರಳವಾಗಿ ಸ್ಪಷ್ಟಗೊಳಿಸುತ್ತದೆ. ಇದರೊಂದಿಗೆ ಮುಖ್ಯಮಂತ್ರಿ ಮತ್ತು ಪ್ರಧಾನ ಮಂತ್ರಿಗಳ ಭಾರೀ ಮೌನ ಅತ್ಯಂತ ಖಂಡನೀಯ. ರಾಜ್ಯದಲ್ಲಿ ನಡೆಯುತ್ತಿರುವ ಜನಾಂಗೀಯ ಹಿಂಸಾಚಾರಕ್ಕೆ ಮಹಿಳೆಯರು ನೇರ ಬಲಿಪಶುಗಳಾಗಿದ್ದಾರೆ ಎಂದು ಈ ಸಂಘಟನೆಗಳು ಆಪಾದಿಸಿವೆ.

ದೇಶದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಈ ಘಟನೆ ದೇಶಾದ್ಯಂತ ಆಘಾತದ ಅಲೆಗಳನ್ನು ಎಬ್ಬಿಸಿದೆ. ನಾಗರಿಕರ ಹಕ್ಕುಗಳನ್ನು ರಕ್ಷಿಸುವುದು ಸರ್ಕಾರದ ಕರ್ತವ್ಯ. ಆದರೆ ಈ ವಿಚಾರದಲ್ಲಿ ಮೌನ ವಹಿಸಿರುವ ಪ್ರಧಾನಿ ವಿದೇಶ ಪ್ರವಾಸದಲ್ಲಿ ಮಗ್ನರಾಗಿದ್ದಾರೆ ಎಂದು ಖೇದ ವ್ಯಕ್ತಪಡಿಸಿರುವ ಈ ಸಂಘಟನೆಗಳು, ಮಹಿಳೆಯರ ಮೇಲಿನ ಕ್ರೂರ ಹಲ್ಲೆಯನ್ನು ಖಂಡಿಸಿ ನವದೆಹಲಿಯಲ್ಲಿ ಮಣಿಪುರ ಭವನದ ಎದುರು ಪ್ರತಿಭಟನೆ ನಡೆಸಿದವು. "ಮಣಿಪಮೇಂತಬಾಹಿ ಕಿ ಝಿಮ್ಮೆದಾರ ಮೋದಿ ಸರ್ಕಾರ್‌ಹೋ ಬರ್ಬಾದ್"(ಮಣಿಪುರದಲ್ಲಿ ವಿನಾಶದ ಹೊಣೆಗಾರ ಮೋದಿ ಸರ್ಕಾರ ನಾಶವಾಗಲಿ), "ಬಿರೇನ್ ಸಿಂಹ ಇಸ್ತಿಫ ದೋ" (ಬಿರೇನ್ ಸಿಂಗ್ ರಾಜೀನಾಮೆಕೊಡು), "ಮಣಿಪುರ್ ಮೇಂ ನಂಗಾ ನಾಚ್ ಬಂದ್ ಕರೋ" (ಮಣಿಪುರದಲ್ಲಿ ನಗ್ನ ನರ್ತನ ನಿಲ್ಲಿಸು), "ಮಹಿಲಾ ಪರ ಹಿಂಸಾ ನಹೀಂ ಸಹೇಂಗೆ" (ಮಹಿಳೆಯರ ಮೇಲೆ ಹಿಂಸೆಯನ್ನು ಸಹಿಸುವುದಿಲ್ಲ) ಮುಂತಾದ ಘೋಷಣೆಗಳಲ್ಲಿ ಮಹಿಳೆಯರ ಆಕ್ರೋಶ, ನೋವು ಸ್ಪಷ್ಟವಾಗಿತ್ತು ಎಂದಿರುವ ಈ ಸಂಘಟನೆಗಳು, ಅಪರಾಧಿಗಳನ್ನು ತಕ್ಷಣವೇ ಬಂಧಿಸಬೇಕು, ಮತ್ತು ಈ ಪ್ರಕರಣವನ್ನು ಫಾಸ್ಟ್‌ಟ್ರಾಕ್ ಮಾಡಬೇಕು, ಕರ್ತವ್ಯಲೋಪ ಎಸಗಿರುವ ಪೋಲಿಸರ ವಿರುದ್ಧ ಕ್ರಮ ಕೈಗೊಳ್ಳಬೇಕು, ಬೀರೇನ್ ಸಿಂಗ್ ರಾಜೀನಾಮೆ ಕೊಡಬೇಕು ಮತ್ತು ಮಣಿಪುರದಲ್ಲಿ ಶಾಂತಿ ಮರುಸ್ಥಾಪಿಸಲು ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿವೆ.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮರಿಯಮ್ ಧವಳೆ (ಎಐಡಿಡಬ್ಲ್ಯುಎ), ದೀಪ್ತಿ ಭಾರತಿ (ಎನ್‌ಎಫ್‌ಐಡಬ್ಲ್ಯು), ಪೂನಮ್ ಕೌಶಿಕ್ (ಪ್ರಗತಿಶೀಲ್ ಮಹಿಳಾ ಸಂಗಟನ್)), ರಿತು ಕೌಶಿಕ್ (ಐಎಂಎಸ್‌ಎಸ್), ನೊಬಿತಾ (ಸಿಎಸ್‌ಡಬ್ಲ್ಯು), ಲಾಂಬಿ (ಎನ್‌ಇಎಫ್‌ಐಎಸ್), ಕುಸುಮ್ ಸೆಹಗಲ್ ಮತ್ತು (ಜಿಮ್ಮೇದಾರಿ ಎಸ್‌ಡಬ್ಲ್ಯುಒ) ಮಾತನಾಡಿದರು, ಅವರೆಲ್ಲರೂ ಮಣಿಪುರದಲ್ಲಿ ಸುಮಾರು 3 ತಿಂಗಳ ಕಾಲ ನಿರಂತರವಾಗಿ ನಡೆಯುತ್ತಿರುವ ಜನಾಂಗೀಯ ಹಿಂಸಾಚಾರಕ್ಕೆ ಮಣಿಪುರದ ಬಿರೇನ್ ಸಿಂಗ್ ಸರ್ಕಾರ ಮತ್ತು ಕೇಂದ್ರದ ಮೋದಿ–ಶಾ ಅವರ ಬಿಜೆಪಿ ಸರ್ಕಾರ ಎರಡನ್ನೂ ದೂಷಿಸಿದರು.

"77 ದಿನ ಬಾಯಿ ತೆರೆಯದ ಪ್ರಧಾನಿಗಳ ಈ ಸಿಟ್ಟು!"– ಬೃಂದಾ ಕಾರಟ್ ತೀಕ್ಷ್ಣ ಟೀಕೆ

"ಈ ಘಟನೆ ಅತ್ಯಂತ ನಾಚಿಕೆಗೇಡಿ, ನನ್ನ ಮನಸ್ಸು ನೋವು ಮತ್ತು ಸಿಟ್ಟಿನಿಂದ ತುಂಬಿದೆ" ಎಂದು ಪ್ರಧಾನಿಗಳು ಪ್ರತಿಕ್ರಿಯಿಸಿದ್ದಾರೆ, ಇದು ದೇಶದ 140 ಕೋಟಿ ಜನತೆಗೆ ಮಾಡಿರುವ ಅವಮಾನ, ಅವರು ತಲೆತಗ್ಗಿಸುವಂತೆ ಮಾಡಿರುವ ಕೃತ್ಯ ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.

140 ಕೋಟಿ ಬಗ್ಗೆ ಏಕೆ ಹೇಳುತ್ತೀರಿ, ನಾಚಿಕೆಪಡಬೇಕಾಗಿರುವುದು ಕೇಂದ್ರ ಸರಕಾರ, ಡಬಲ್ ಇಂಜಿನ್ ಸರಕಾರ, ಸ್ವತಃ ಪ್ರಧಾನ ಮಂತ್ರಿಗಳು ಎಂದು ಪ್ರಧಾನಿಗಳ ಮಾತಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಹಿರಿಯ ಮುಖಂಡರಾದ ಬೃಂದಾ ಕಾರಟ್ ಹೇಳಿದ್ದಾರೆ. ಮೇ 4ರಿಂದ ಇದುವರೆಗೂ ಅಲ್ಲಿಯ ಡಬಲ್ ಇಂಜಿನ್ ಸರಕಾರ ಯಾವುದೇ ಕ್ರಮಕೈಗೊಂಡಿಲ್ಲ, ಇಂತಹ ಅಪರಾಧ ಪೂರ್ಣ ಬೇಜವಾಬ್ದಾರಿ ಮುಖ್ಯಮಂತ್ರಿಯನ್ನು ಇದುವರೆಗೂ ರಕ್ಷಿಸುತ್ತ ಬಂದಿದ್ದೀರಿ, 77 ದಿನಗಳ ಕಾಲ ಬಾಯಿ ತೆರೆಯದವರು, ಮಣಿಪುರದ ಬಗ್ಗೆ ಒಂದು ಮಾತೂ ಆಡದವರು, ಈಗ ಸದನವನ್ನು ಎದುರಿಸಬೇಕಾಗಿ ಬಂದಿರುವುದರಿಂದ ಮನದಲ್ಲಿ ಸಿಟ್ಟು ತುಂಬಿದೆಯೇ? ಇಡೀ ದೇಶ ಈ ನಾಚಿಕೆಗೇಡಿ ಘಟನೆಗೆ ಕೇಂದ್ರ ಸರಕಾರವನ್ನು, ಗೃಹಮಂತ್ರಿಗಳನ್ನು, ಮಣೀಪುರ ಸರಕಾರವನ್ನು ಅಪರಾಧಿ ಎಂದು ಬಗೆಯುತ್ತದೆ ಎಂದು ಎಎನ್‌ಐ ಸುದ್ದಿ ಸಂಸ್ಥೆಗೆ ಅವರು ಹೇಳಿದ್ದಾರೆ.

ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಈ ಘಟನೆಯ ಬಗ್ಗೆ ಜೂನ್ 12ರಂದೇ ದೂರು ಬಂದಿತ್ತು. ಆದರೆ ಅದಕ್ಕೆ ಅದು ಯಾವ ಸ್ಪಂದನೆಯನ್ನೂ ತೋರಿಲ್ಲ. ಇದಲ್ಲದೆ ಇನ್ನೂ ಹಲವು ಕುಕೃತ್ಯಗಳನ್ನು ಅದರ ಗಮನಕ್ಕೆ ತರಲಾಗಿತ್ತು ಎಂದು ವೆಬ್ ಪತ್ರಿಕೆ 'ನ್ಯೂಸ್ ಲಾಂಡ್ರಿ' ಹೇಳಿದೆ. ಮಹಿಳೆಯರನ್ನು ಅಸ್ತ್ರಗಳಾಗಿ ಬಳಸುವ ಕಾರ್ಯತಂತ್ರ ಇವುಗಳಲ್ಲಿ ಕಾಣುತ್ತದೆ ಎಂದು ಅದು ಹೇಳಿದೆ. ಪತ್ರಿಕೆಯ ಫೋನ್ ಕರೆಗಳಿಗೂ ಆಯೋಗದ ಅಧ್ಯಕ್ಷೆ ರೇಖಾ ಶರ್ಮ ಸ್ಪಂದಿಸಿಲ್ಲ ಎಂದೂ ಅದು ತಿಳಿಸಿದೆ.

ಮಣಿಪುರ ಮುಖ್ಯಮಂತ್ರಿ ಹೋಗಲೇ ಬೇಕು

– ಸಿಪಿಐ(ಎಂ) ಪೊಲಿಟ್‌ಬ್ಯುರೊ

ಮಣಿಪುರದಲ್ಲಿ ಇಬ್ಬರು ಬುಡಕಟ್ಟು ಮಹಿಳೆಯರ ಮೇಲೆ ನಡೆದ ಭೀಕರ ದೌರ್ಜನ್ಯ, ವಿವಸ್ತ್ರಗೊಳಿಸಿ ಮೆರವಣಿಗೆ ಮಾಡಿಸಿದ್ದು ಮತ್ತು ಅವರಲ್ಲಿ ಒಬ್ಬಾಕೆಯ ಮೇಲೆ ಸಾಮೂಹಿಕ ಅತ್ಯಾಚಾರದ ಜೊತೆಗೆ ಆಕೆಯನ್ನು ಉಳಿಸಲು ಯತ್ನಿಸಿದ ಇಬ್ಬರು ಕುಟುಂಬ ಸದಸ್ಯರನ್ನು ಹತ್ಯೆಗೈದಿರುವುದು ದೇಶವನ್ನು ಕೆರಳಿಸಿದೆ. ಘಟನೆ ನಡೆದ ಎರಡು ವಾರಗಳೊಳಗೆ ಸಂತ್ರಸ್ತರ ಕುಟುಂಬಗಳು ಅಪಾರ ಧೈರ್ಯ ತಗೊಂಡು ಎಫ್‌ಐಆರ್ ದಾಖಲಿಸಿದ್ದರೂ ಬಿಜೆಪಿ ಸರಕಾರದ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದ ಕಾರಣ ಸರ್ಕಾರವು ನೇರವಾಗಿಯೇ ಈ ದುಷ್ಕೃತ್ಯ ಎಸಗಿದ ದುಷ್ಕರ್ಮಿಗಳಿಗೆ ಅಭಯ ಒದಗಿಸಿದ ದೋಷಿಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಎರಡೂವರೆ ತಿಂಗಳಿನಿಂದ ರಾಜ್ಯ ಹೊತ್ತಿ ಉರಿಯುತ್ತಿದೆ, ಆದರೂ ಮುಖ್ಯಮಂತ್ರಿ ಮತ್ತು ಸರ್ಕಾರವನ್ನು ಬಿಜೆಪಿಯ ಉನ್ನತ ನಾಯಕತ್ವ ಮತ್ತು ಕೇಂದ್ರ ಸರ್ಕಾರ ಸಮರ್ಥಿಸಿಕೊಂಡೇ ಬಂದಿವೆ. ತಿಂಗಳಾನುಗಟ್ಟಲೆ ಗಾಢ ಮೌನದ ನಂತರ ಪ್ರಧಾನಿಯವರ ಹೇಳಿಕೆಯು ಈ ಘಟನೆಯನ್ನು, ಮಣಿಪುರದ ಹಿಂಸಾಚಾರದ ಅಗಾಧತೆಯನ್ನು ಮತ್ತು ಮುಖ್ಯಮಂತ್ರಿಯ ಪಕ್ಷಪಾತದ ಪಾತ್ರವನ್ನು ಕ್ಷುಲ್ಲಕಗೊಳಿಸಿದೆ. ಉತ್ತರದಾಯಿತ್ವದ ತತ್ವವನ್ನು ಡಬಲ್ ಎಂಜಿನ್ ಸರ್ಕಾರವು ಆಳವಾಗಿ ಹೂತು ಹಾಕಿದೆ.

ಇದು ಬಿಜೆಪಿಯ 'ಉತ್ತಮ ಆಳ್ವಿಕೆ'ಯ ದಾವೆಗೆ ಅತ್ಯಂತ ಜ್ವಲಂತ ವ್ಯಾಖ್ಯಾನವಾಗಿದೆ ಎಂದು ಟಿಪ್ಪಣಿ ಮಾಡಿರುವ ಪೊಲಿಟ್‌ಬ್ಯುರೊ ಮಣಿಪುರದ ಮುಖ್ಯಮಂತ್ರಿ ಕೂಡಲೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದೆ. ದೇಶಾದ್ಯಂತ ಪ್ರತಿಭಟನೆಯ ಕಾರ್ಯಾಚರಣೆಗಳಲ್ಲಿ ಮತ್ತು ಮಣಿಪುರದ ಸಂತ್ರಸ್ತ ಮಹಿಳೆಯರು ಮತ್ತು ಜನರೊಂದಿಗೆ ಸೌಹಾರ್ದ ವ್ಯಕ್ತಪಡಿಸಲು ಈ ಆಗ್ರಹವನ್ನು ಎತ್ತುವಂತೆ ಅದು ತನ್ನ ಘಟಕಗಳಿಗೆ ಕರೆ ನೀಡಿದೆ.

ದಲಿತರ ಹಕ್ಕೊತ್ತಾಯ ಸಮಾವೇಶ..... ಪುಟ 3 ರಿಂದ

ಪಿಟಿಸಿಎಲ್ ಕಾಯಿದೆಗೆ ತಿದ್ದುಪಡಿ ಮಾಡಿ ದಲಿತರ ಭೂಮಿಗೆ ರಕ್ಷಣೆ ಕೊಡಬೇಕು. ಪಿಟಿಸಿಎಲ್ ವ್ಯಾಪ್ತಿಯಲ್ಲಿ ಬರುವ ಎಲ್ಲರಿಗೂ ಕಾಲಮಿತಿ ವಿಧಿಸದೆ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು.

ಭೂಮಿ, ಮನೆ, ನಿವೇಶನಗಳ ಹಂಚಿಕೆ

ಭೂ ಸುಧಾರಣೆ ಜಾರಿಮಾಡುವ ಮೂಲಕ ದಲಿತರು ಸೇರಿದಂತೆ ಎಲ್ಲಾ ಬಡವರಿಗೂ ಭೂಮಿ ಹಂಚಿಕೆ ಮಾಡಬೇಕು. ಹೆಚ್ಚುವರಿ ಭೂಮಿ ಗುರುತಿಸಿ ಭೂಮಿ ಇಲ್ಲದ ದಲಿತರಿಗೆ ನೀಡಬೇಕು. ಮನೆ ಇಲ್ಲದ ದಲಿತರಿಗೆ ನಿವೇಶನ ಮತ್ತು ಮನೆ ಒದಗಿಸಿಕೊಡಬೇಕು. ಇದಕ್ಕಾಗಿ ಬಜೆಟ್ ನಲ್ಲಿ ಹೆಚ್ಚು ಹಣ ಮೀಸಲಿಡಬೇಕು. ನಿವೇಶನ ಇಲ್ಲದ ಕಾರಣದಿಂದ ಆಶ್ರಯ, ಅಂಬೇಡ್ಕರ್ ಆವಾಸ್, ಇಂದಿರಾ ಆವಾಸ್, ವಾಜಪೇಯಿ ಆವಾಸ್ ನಂತಹ ಯೋಜನೆಗಳು ತ್ವರಿತಗತಿಯಲ್ಲಿ ಜಾರಿಯಾಗುತ್ತಿಲ್ಲ. ನಿವೇಶನಗಳಿಗಾಗಿ ರಾಜ್ಯ ಸರ್ಕಾರ ಭೂಮಿ ಒದಗಿಸಿಕೊಡಬೇಕು. ಜೊತೆಗೆ ಈ ವಸತಿ ಯೋಜನೆಗಳ ಮೂಲಕ ನೀಡಲಾಗುತ್ತಿರುವ ಹಣದಿಂದ ಮನೆ ಕಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದಕ್ಕಾಗಿ ಹೆಚ್ಚಿನ ಹಣವನ್ನು ಸರ್ಕಾರ ನಿಗಧಿಪಡಿಸಬೇಕು.

'ಹಿತ್ತಲು ಸಹಿತ ಮನೆ' ಯೋಜನೆ

ಮನೆ ಸುತ್ತಲು ಹಸು, ಕುರಿ, ಕೋಳಿ ಸಾಕಲು, ಸೊಪ್ಪು, ತರಕಾರಿ ಬೆಳೆಯಲು ಪ್ರತಿ ದಲಿತ ಕುಟುಂಬಗಳಿಗೆ 'ಹಿತ್ತಲು ಸಹಿತ ಮನೆ' ಯೋಜನೆ ಜಾರಿ ಮಾಡಬೇಕು. ಕನಿಷ್ಟ ನಾಲ್ಕು ಗುಂಟೆ ಭೂಮಿ ಇರಬೇಕು. ಇದರಿಂದ ದಲಿತ ಮಹಿಳೆಯರಿಗೆ ಮತ್ತು ಅವರ ಕುಟುಂಬಕ್ಕೆ ಆರ್ಥಿಕವಾಗಿ ಸದೃಡವಾಗಲು ಒಂದಷ್ಟು ನೆರವಾಗುತ್ತದೆ. ಇದಕ್ಕಾಗಿ ಬೇಕಾದ ಯೋಜನೆಯನ್ನು ಬಜೆಟ್ ನಲ್ಲಿ ರೂಪಿಸಿ ಜಾರಿಗೆ ತರಬೇಕು.

ಉದ್ಯೋಗ ನೇಮಕಾತಿ ಪ್ರಾಧಿಕಾರ

ಸಾಕಷ್ಟು ಬ್ಯಾಕ್ ಲಾಗ್ ಹುದ್ದೆಗಳಿದ್ದರೂ ಇದರ ನೇಮಕಾತಿ ಮಾಡುವಲ್ಲಿ ವಿಳಂಬ, ಕೊರತೆ, ಅಡತಡೆಗಳು ಹೇರಳವಾಗಿವೆ. ಆದ್ದರಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಉದ್ಯೋಗ ನೇಮಕಾತಿ ಪ್ರಾಧಿಕಾರ ರಚಿಸಬೇಕು. ಈ ಪ್ರಾಧಿಕಾರದಲ್ಲಿ ಛೇರ್ ಮನ್, ಎಂ.ಡಿ. ಇತ್ಯಾದಿ ಅಧಿಕಾರಿಗಳು ಎಸ್.ಸಿ/ಎಸ್.ಟಿ ಆಗಿರಬೇಕು. ಈ ಮೂಲಕ ಬ್ಯಾಕ್ ಲಾಗ್ ಹುದ್ದೆಗಳು ಸಮರ್ಪಕವಾಗಿ ಗುರುತಿಸಿ ನೇಮಕಾತಿ ಮಾಡಲು ಸಾಧ್ಯವಾಗುವಂತೆ ಕಾನೂನು ರಚಿಸಬೇಕು. (ಉದಾ: ಕೆಇಎ ಕರ್ನಾಟಕ ಎಕ್ಷಮಿನೇಷನ್ ಅಥಾರಟಿ ಇರುವ ಹಾಗೆ). ಈ ಮೂಲಕ ಪರಿಕ್ಷಾ ನೇಮಕಾತಿಗಳು ನಡೆಯಬೇಕು.

ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ

ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಜಾರಿಗೆ ತರಬೇಕು ಮತ್ತು ಜನಸಂಖ್ಯೆ ಆಧಾರದಲ್ಲಿ ಒಳ ಮೀಸಲಾತಿ ಜಾರಿಗೊಳಿಸಬೇಕು. ರಾಜ್ಯ ಸರ್ಕಾರದ ಇಲಾಖೆಗಳಲ್ಲಿ 2,58,709 ಹುದ್ದೆಗಳು ಖಾಲಿ ಇವೆ. ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಬೇಕಾದ 63,000 ಬ್ಯಾಕ್ ಲಾಗ್ ಹುದ್ದೆಗಳಿವೆ. ಇವುಗಳನ್ನು ಭರ್ತಿ ಮಾಡಬೇಕು.

ಸರ್ಕಾರದ ಇಲಾಖೆಗಳಲ್ಲಿ ದುಡಿಯುತ್ತಿರುವ ಗುತ್ತಿಗೆ, ಹೊರಗುತ್ತಿಗೆ ನೌಕರರನ್ನು ಅದೇ ಇಲಾಖೆಯಲ್ಲಿ ಖಾಯಂಗೊಳಿಸಬೇಕು. ಧಾರ್ಮಿಕ ದತ್ತಿ ಇಲಾಖೆ ಅಡಿಯಲ್ಲಿ ಬರುವ ದೇವಸ್ಥಾನಗಳ ಪೂಜಾರಿ ಹುದ್ದೆಗಳಿಗೆ ದಲಿತರನ್ನು ನೇಮಕ ಮಾಡಬೇಕು. ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನದಾಸ್ ವರದಿ ಜಾರಿಗೊಳಿಸಿ ಪರಿಶಿಷ್ಟ ಜಾತಿಗೆ ಶೇ. 17 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ. 7 ಹೆಚ್ಚಿಸಿರುವ ವರದಿಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, 9 ಷೆಡ್ಯೂಲ್ ಗೆ ತಿದ್ದುಪಡಿ ತರುವಂತೆ ಮಾಡಬೇಕು. ಭೂಮಿ ಇಲ್ಲದ ಎಲ್ಲಾ ದಲಿತರಿಗೂ 5 ಎಕರೆ ಭೂಮಿ, 'ಭೂ ಒಡೆತನ' ಯೋಜನೆಗೆ ಮತ್ತು 'ಗಂಗಾ ಕಲ್ಯಾಣ' ಕೊಳವೆ ಬಾವಿ ಯೋಜನೆಗೆ ಅರ್ಜಿ ಸಲ್ಲಿಸಿದವರಿಗೆ ಮಂಜೂರಾತಿ, ಅಗತ್ಯವಿರುವ ಸ್ಮಾಶಾನ ಭೂಮಿ ಮಂಜೂರು, ಸಣ್ಣ ಉದ್ದಿಮೆ ಅಭಿವೃದ್ಧಿ ಪಡಿಸಲು ಗುಂಪು ಸಾಲ, ಕಿರುಸ ಸಾಲಯೋಜನೆಗೆ ಹೆಚ್ಚಿನ ಹಣ ನೀಡಬೇಕು. ರಾಜ್ಯದಲ್ಲಿನ ಪೋಲೀಸರು ದೌರ್ಜನ್ಯಕ್ಕೆ ಒಳಗಾದ ದಲಿತರ ದೂರುಗಳನ್ನು ಸ್ವೀಕರಿಸಲು ಮತ್ತು ಎಫ್.ಐ.ಆರ್. ಗಳನ್ನು ದಾಖಲಿಸಲು ನಿರಾಕರಿಸುವ, ಕೌಂಟರ್ ಕೇಸುಗಳನ್ನು ದಾಖಲಿಸುವ ಪ್ರವೃತ್ತಿ ಹೆಚ್ಚಾಗಿದೆ. ತಪ್ಪಿತಸ್ತರನ್ನು ಬಂಧಿಸದ ಪರಿಸ್ಥಿತಿ ಇದೆ. ಇದನ್ನು ಸರ್ಕಾರ ಗಂಭೀವಾಗಿ ಪರಿಗಣಿಸಿ ಇಂತಹ ಪ್ರವೃತ್ತಿಯನ್ನು ತಪ್ಪಿಸಬೇಕಿದೆ. ಎಂಬಿತ್ಯಾಧಿ ಬೇಡಿಕೆಗಳನ್ನು ಸಮಾವೇಶ ರಾಜ್ಯ ಸರ್ಕಾರದ ಮುಂದಿಟ್ಟಿದೆ.



ತೆಂಗು ಬೆಳೆಗಾರರ ವಿಧಾನ ಸೌಧ ಚಲೋ
ಬೆಂಬಲ ಬೆಲೆ ಹೆಚ್ಚಳ, ಕೊಬ್ಬರಿ ಖರೀದಿ ಕೇಂದ್ರಗಳಿಗೆ ಒತ್ತಾಯ

ಟಿ. ಯಶವಂತ
KPRS ರಾಜ್ಯ ಪ್ರಧಾನ ಕಾರ್ಯದರ್ಶಿ

ಕೊಬ್ಬರಿ ಬೆಲೆ ಕುಸಿತದಿಂದ ಕಂಗಾಲಾಗಿರುವ ತೆಂಗು ಬೆಳೆಗಾರರು, ಕೊಬ್ಬರಿಗೆ ಬೆಂಬಲೆ ಬೆಲೆ ಹೆಚ್ಚಿಸಬೇಕು ಮತ್ತು ಕೊಬ್ಬರಿ ಖರೀದಿ ಕೇಂದ್ರ ಸ್ಥಾಪಿಸಬೇಕು ಎಂದು ಒತ್ತಾಯಿಸಿ, ರಾಜ್ಯದ ಹಲವೆಡೆಗಳಲ್ಲಿ ನಡೆಸುತ್ತಿರುವ ಹೋರಾಟದ ಮುಂದುವರಿದ ಭಾಗವಾಗಿ ರೈತರು ವಿಧಾನಸೌಧ ಚಲೋ ಪ್ರತಿಭಟನೆ ನಡೆಸಿದರು. ಕರ್ನಾಟಕ ಪ್ರಾಂತ ರೈತ ಸಂಘ (KPRS) ಹಾಗೂ ತೆಂಗು ಬೆಳೆಗಾರರ ಹೋರಾಟ ಸಮಿತಿ ನೇತೃತ್ವದಲ್ಲಿ ಜುಲೈ 19, 2023 ರಂದು ನಡೆದ ಈ ಪ್ರತಿಭಟನೆಯಲ್ಲಿ, ಕೇಂದ್ರ ಸರ್ಕಾರದ ತಪ್ಪು ಆಮದು ನೀತಿ ಹಾಗೂ ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದಾಗಿ ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿದಿದೆ ಎಂದು ರೈತರು ಆರೋಪಿಸಿದರು. ಕ್ವಿಂಟಾಲ್ ಕೊಬ್ಬರಿಗೆ ಕನಿಷ್ಠ 16,730 ರೂ. ಬೆಂಬಲ ಬೆಲೆ ನಿಗದಿ ಮಾಡಬೇಕು ಎಂಬುದೂ ಸೇರಿದಂತೆ ತೆಂಗು ಬೆಳೆಗಾರರ ಇನ್ನಿತರೆ ಸಮಸ್ಯೆಗಳನ್ನು ಪರಿಹರಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯದ ಹಲವೆಡೆ ರೈತರ ಪ್ರತಿಭಟನೆ; 1,250 ರೂ. ಪ್ರೋತ್ಸಾಹ ಧನ ಪ್ರಕಟ

ವಿಧಾನ ಸೌಧ ಚಲೋಗೂ ಮೊದಲು, ತಿಪಟೂರು ಸೇರಿದಂತೆ ರಾಜ್ಯದ ಎಲ್ಲಾ ತೆಂಗು ಬೆಳೆಯುವ ಪ್ರದೇಶಗಳಲ್ಲಿ ತೀವ್ರವಾದ ಪ್ರತಿಭಟನೆಗಳು ನಡೆದವು. ಏಷ್ಯಾದ ಅತಿ ದೊಡ್ಡ ಕೊಬ್ಬರಿ ಮಾರುಕಟ್ಟೆಯಾಗಿರುವ ತಿಪಟೂರಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (KPRS) ಸೇರಿದಂತೆ ಹಲವು ರೈತ ಸಂಘಗಳು ತಿಂಗಳುಗಟ್ಟಲೆ ಪ್ರತಿಭಟನೆ ನಡೆಸಿದವು. ಇದರ ಪರಿಣಾಮವಾಗಿ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ತೆಂಗು ಬೆಳೆ ಪ್ರದೇಶದಲ್ಲಿ ಬಿಜೆಪಿ ಅಭ್ಯರ್ಥಿಗಳು ಹೀನಾಯವಾಗಿ ಸೋತರು.

ಹೋರಾಟ ಮುಂದುರಿಸಿದ ರೈತರು ರಾಜ್ಯದ ಇನ್ನಿತರ ಕಡೆಗಳಲ್ಲಿ ಪ್ರತಿಭಟನೆ ನಡೆಸಿದರು. ಹಾಸನ ಜಿಲ್ಲೆ ಚನ್ನರಾಯಪಟ್ಟಣದಲ್ಲಿ KPRS ನೇತೃತ್ವದಲ್ಲಿ ತಾಲ್ಲೂಕು ಸಮಾವೇಶ ನಡೆಸಿ, ತಹಶಿಲ್ದಾರ್ ಕಛೇರಿ ಮುಂದೆ ಪ್ರತಿಭಟನೆ ನಡೆಸಿದರು. ದಿನಾಂಕ 15–7–2023 ರಂದು, ಹಾಸನ, ತುಮಕೂರು, ಮಂಡ್ಯ ಮೂರು ಜಿಲ್ಲೆಯ ಸಾವಿರಾರು ತೆಂಗು ಬೆಳೆಗಾರರು, ನಾಗಮಂಗಲ ತಾಲ್ಲೂಕು ಕದಬಳ್ಳಿಯಲ್ಲಿ ಪುಟ 11 ಕ್ಕೆ



ಬೇಡಿಕೆಗಳು:

* ಕರ್ನಾಟಕ ತೋಟಗಾರಿಕೆ ಇಲಾಖೆ ಮತ್ತು ಕರ್ನಾಟಕ ಕೃಷಿ ಬೆಲೆ ಆಯೋಗದ ಶಿಫಾರಸ್ಸಿನಂತೆ ಕೂಡಲೇ ಒಂದು ಕ್ವಿಂಟಾಲ್ ದುಂಡು ಕೊಬ್ಬರಿಯ ಬೆಲೆ 16,730 ರೂ ನಿಗದಿಯಾಗಬೇಕು. ರಾಜ್ಯ ಸರ್ಕಾರ ಕನಿಷ್ಠ 5,000 ರೂ ಸಹಾಯಧನ ಘೋಷಣೆ ಮಾಡಬೇಕು.
* ಬೆಂಬಲ ಬೆಲೆಯಲ್ಲಿ ಕೊಬ್ಬರಿ ಖರೀದಿ ಮಾಡಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು.
* ತೆಂಗಿನ ಬೆಲೆಯೂ ಮಾರುಕಟ್ಟೆಯಲ್ಲಿ ವಿಪರೀತ ಕುಸಿತವನ್ನು ಕಂಡಿರುವುದರಿಂದ ಕೃಷಿ ತಜ್ಞ ಡಾ.ಎಂ.ಎಸ್.ಸ್ವಾಮಿನಾಥನ್ ರವರ ಆಯೋಗದ ಶಿಫಾರಸ್ಸಿನಂತೆ ಉತ್ಪಾದನಾ ವೆಚ್ಚಕ್ಕೆ ಶೇ 50 ರಷ್ಟು ಲಾಭಾಂಶವನ್ನು ಸೇರಿಸಿ ಬೆಲೆ ನಿಗದಿ ಮಾಡಬೇಕು.
* ತೆಂಗು ಮತ್ತು ಕೊಬ್ಬರಿಯನ್ನು ಎಪಿಎಂಸಿ ಮಾರುಕಟ್ಟೆಯ ಮೂಲಕ ಸರ್ಕಾರವೇ ಖರೀದಿಸಬೇಕು.
* ನಫೆಡ್ (NAFED) ಮೂಲಕ ನಡೆಯುವ ಕೊಬ್ಬರಿ ಖರೀದಿಯನ್ನು ಬಲಪಡಿಸಬೇಕು ಹಾಗೂ ವಿಸ್ತರಿಸಬೇಕು.
* ನೀರಾವರಿ ಪಂಪ್‌ಸೆಟ್‌ಗಳಿಗೆ ಡಿಜಿಟಲ್ ಮೀಟರ್ ಅಳವಡಿಕೆಯನ್ನು ಕೈಬಿಡಬೇಕು, ಹಾಗೂ ಪಂಪ್‌ಸೆಟ್‌ಗಳ ಆರ್. ಆರ್. ನಂಬರ್ ಮತ್ತು ಆಧಾರ್ ಕಾರ್ಡ್ ಜೋಡಣೆಯನ್ನು ಕೈಬಿಡಬೇಕು.
* ರೈತರಿಗೆ ಅನುಕೂಲವಾಗುವಂತೆ ಎಪಿಎಂಸಿ ಮಾರುಕಟ್ಟೆ ಬಲಪಡಿಸಿ, ಭ್ರಷ್ಟಾಚಾರ ತಡೆಗಟ್ಟಬೇಕು.
* ಮಾರುಕಟ್ಟೆಯ ಪ್ರಾಂಗಣದಲ್ಲಿ ರೈತರಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.
* ತೆಂಗಿನ ಉತ್ಪನ್ನ ಮತ್ತು ಉಪ ಉತ್ಪನ್ನಗಳ ಮೌಲ್ಯವರ್ಧನೆಗೆ ಅಗತ್ಯವಾದ ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಬೇಕು.
* ತೆಂಗು ಬೆಳೆಗಾರರ ಸಮಸ್ಯೆಗಳ ಪರಿಹಾರಕ್ಕಾಗಿ ವಿಶೇಷ ಪ್ಯಾಕೇಜ್ ಘೋಷಿಸಬೇಕು.

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ತೆಂಗು ಬೆಳೆಗಾರರ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಮತ್ತು ರೈತ ಸಂಘಟನೆಗಳನ್ನು ಒಳಗೊಂಡ ಜಂಟಿ ಸಭೆಯನ್ನು ನಡೆಸಬೇಕು.

ಬೆಂಬಲ ಬೆಲೆ ನಿಗದಿಯಲ್ಲೂ ಮೋಸ ಖರೀದಿ ಕೇಂದ್ರದಲ್ಲೂ ಅನ್ಯಾಯ

ಉತ್ಪಾದನಾ ವೆಚ್ಚದ ಆಧಾರದಲ್ಲಿ, ಪ್ರತಿ ಕ್ವಿಂಟಾಲ್ ಕೊಬ್ಬರಿಗೆ 16,730 ರೂಗಳನ್ನು ಬೆಂಬಲ ಬೆಲೆಯಾಗಿ ನೀಡುವಂತೆ, ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ದರ ಆಯೋಗ (CACP) ಕ್ಕೆ ರಾಜ್ಯದ ತೋಟಗಾರಿಕಾ ಇಲಾಖೆಯು ಶಿಪಾರಸ್ಸು ಮಾಡಿತ್ತು. (ವಾಸ್ತವವಾಗಿ ಉತ್ಪಾದನಾ ವೆಚ್ಚ ತೋಟಗಾರಿಕಾ ಇಲಾಖೆಯ ಅಂದಾಜಿಗಿಂತ ಹೆಚ್ಚೇ ಇದೆ) ರಾಜ್ಯ ಸರ್ಕಾರದ ಇಲಾಖೆಯ ಅಧಿಕೃತ ಶಿಪಾರಸ್ಸನ್ನು ಕಡೆಗಣಿಸಿ, ಕೇಂದ್ರ ಸರ್ಕಾರ ಕೇವಲ 11,750 ರೂ. ಮಾತ್ರ ನಿಗದಿ ಮಾಡಿದೆ. ಮಾತ್ರವಲ್ಲ, ಇದು ಉತ್ಪಾದನಾ ವೆಚ್ಚದ ಶೇಕಡಾ 50 ರಷ್ಟು ಹೆಚ್ಚು ಎಂದು ಜಂಭ ಕೊಚ್ಚಿಕೊಳ್ಳುತ್ತಿದೆ. ಇದೊಂದು ಪರಮ ಅಷಾಢಭೂತಿತನದ ಸರ್ಕಾರವೇ ಸರಿ! ತೆಂಗು ಬೆಳೆಯುವ ಪ್ರಮುಖ ರಾಜ್ಯದ ಸರ್ಕಾರಿ ತೋಟಾಗಾರಿಕೆ ಇಲಾಖೆ ಯ ಶಿಪಾರಸ್ಸನ್ನು ಒಪ್ಪದೇ ಇರಲು ಯಾವುದೇ ಕಾರಣ ನೀಡದೇ, ನರೇಂದ್ರ ಮೋದಿ ಸರ್ಕಾರ ಬೆಂಬಲ ಬೆಲೆ ನಿಗದಿಯಲ್ಲಿ ಭಾರೀ ಮೋಸಮಾಡಿದೆ.

ಬೆಂಬಲ ಬೆಲೆ 11,750 ರೂ. ಇದ್ದರೂ ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಪೆಡರೇಷನ್ (NAFED) ಮೂಲಕ ಖರೀದಿ ಕೇಂದ್ರ ತೆರೆಯಬೇಕಾದರೆ, ಗರಿಷ್ಠ ಕೊಬ್ಬರಿ ಬೆಲೆ 10,000 ರೂ.ಗಿಂತ ಕಡಿಮೆ ದರಕ್ಕೆ ಮಾರಾಟ ಆಗಬೇಕು ಎಂಬ ಷರತ್ತನ್ನು ವಿಧಿಸಿದೆ. ಈ ಕಾರಣದಿಂದಾಗಿ ಸುಮಾರು ಒಂದು ವರ್ಷಗಳ ಕಾಲ ರೈತರು, ಖರೀದಿ ಕೇಂದ್ರವಿಲ್ಲದೇ ತಮ್ಮ ಉತ್ಪನ್ನಗಳನ್ನು ಕಳೆದುಕೊಂಡಿದ್ದಾರೆ. ಕೊಬ್ಬರಿ ಬೆಲೆ 9,000 ರೂ. ಗಿಂತ ಕೆಳಗೆ ಕುಸಿದ ನಂತರ ಖರೀದಿ ಕೇಂದ್ರಗಳನ್ನು ತೆರೆಯಲಾಯಿತು. ಆದರೆ ಖರೀದಿ ನಡೆಸಲು ಬೇಕಾದ ಹಣವನ್ನು ನಪೇಡ್ ಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಲಿಲ್ಲ. ಖರೀದಿ ವೇಗವನ್ನು ಬಹಳ ನಿಧಾನಗೊಳಿಸಲಾಯಿತು.

ಒಂದೆಡೆ ಸರಿಯಾಗಿ ಮಳೆ ಇಲ್ಲದೇ, ಮತ್ತೊಂದೆಡೆ ವಿಪರೀತ ಹೆಚ್ಚಳವಾಗಿರುವ ಉತ್ಪಾದನಾ ವೆಚ್ಚವನ್ನು ನಿಭಾಯಿಸಿ, ತೆಂಗು ಬೆಳೆ ರೈತನ ಕೈಗೆ ಫಸಲಾಗಿ ಸಿಗಲು ಕನಿಷ್ಠ ಹತ್ತು ವರ್ಷಗಳು ಬೇಕು. ನುಸಿ ಪೀಡೆ, ಬರಗಾಲ–ಅಂತರ್ಜಲ ಮಟ್ಟ ಕುಸಿತ ಮುಂತಾದ ಹಲವಾರು ಸವಾಲುಗಳ ನಡುವೆಯೂ ತೆಂಗು ಬೆಳೆ ಬೆಳೆಯಲಾಗುತ್ತಿದೆ. ಇಂತಹ ಕಷ್ಟದ ರೈತರನ್ನು ಉತ್ಪಾದನಾ ವೆಚ್ಚವೂ ಸಿಗದಂತಹ ಮಾರುಕಟ್ಟೆ ಪರಿಸ್ಥಿತಿ ಗೆ ತಳ್ಳಲಾಗಿದೆ. ಬೆಲೆ ಹೆಚ್ಚಳಗೊಳ್ಳುವ ನಿರೀಕ್ಷೆಯಲ್ಲಿ ಹಲವಾರು ರೈತರು ಫಸಲು ಮಾರದೇ ದಾಸ್ತಾನು ಇಟ್ಟುಕೊಂಡಿದ್ದರು. ತಿಂಗಳುಗಳು ಕಳೆದರೂ ಬೆಲೆ ಹೆಚ್ಚಳಗೊಳ್ಳಲಿಲ್ಲ. ಬದಲಿಗೆ ದಾಸ್ತಾನು ಮಾಡಿದ್ದ ಕೊಬ್ಬರಿ ಮೇಲೆ ಫಂಗಸ್ ಬೆಳೆಯುವ ಆತಂಕದಲ್ಲಿ ಸಿಕ್ಕಷ್ಟು ಬೆಲೆಗೆ ಮಾರಾಟಕ್ಕೆ ಇಟ್ಟಾಗ, ಕೊಬ್ಬರಿ ಬೆಲೆ ಮತ್ತಷ್ಟು ಕುಸಿಯಿತು. ಕ್ವಿಂಟಾಲ್ ಗೆ 8–9 ಸಾವಿರ ರೂ ಇದ್ದ ಕೊಬ್ಬರಿ ಕಳೆದ ಒಂದು ತಿಂಗಳಿಂದ 6500 ರೂ. ಗೆ ಕುಸಿಯಿತು.

ಮುಕ್ತ ವ್ಯಾಪಾರ ಒಪ್ಪಂದದ ಪರಿಣಾಮ

ಪ್ರಪಂಚದಲ್ಲೇ ಅತಿ ದೊಡ್ಡ ತೆಂಗು ಉತ್ಪಾದನೆಯ ದೇಶವಾಗಿರುವ ಭಾರತದ ಪಾಲು ಶೇ 31 ರಷ್ಟಿದೆ. ದಕ್ಷಿಣ ಭಾರತದ ಕೇರಳ, ಕರ್ನಾಟಕ, ತಮಿಳುನಾಡು, ಆಂದ್ರಪ್ರದೇಶ ಈ ನಾಲ್ಕು ರಾಜ್ಯಗಳು ನಮ್ಮ ದೇಶದ ತೆಂಗು ಉತ್ಪಾದನೆಯ ಶೇ. 90 ರಷ್ಟು ಪಾಲನ್ನು ಹೊಂದಿವೆ. ಭಾರತದಲ್ಲಿ ತೆಂಗು ಬೆಳೆಯುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ.

ಖಾದ್ಯ ತೈಲಕ್ಕೆ ಬಳಕೆಯಾಗುವ ದೇಶದ ಒಟ್ಟು ಉತ್ಪಾದನೆಯ ಕೊಬ್ಬರಿಯಲ್ಲಿ ಕರ್ನಾಟಕದ ಪಾಲು ಶೇ 65.5 ರಷ್ಟಿದೆ. ದೇಶದಲ್ಲೇ ತೆಂಗು ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿ ಇರುವ ಕೇರಳವು ಖಾದ್ಯ ತೈಲಕ್ಕೆ ಬಳಕೆಯಾಗುವ ಕೊಬ್ಬರಿಯಲ್ಲಿ ಶೇ. 13.5 ರಷ್ಟು ಪಾಲನ್ನು ಮಾತ್ರ ಹೊಂದಿದೆ. ಅಂದರೆ ರಾಜ್ಯದ ಕೊಬ್ಬರಿಯ ಬೇಡಿಕೆ ಖಾದ್ಯ ತೈಲದ ದೇಶೀಯ ಉತ್ಪಾದನೆ ಜೊತೆ ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದಿದೆ. ಈ ತೈಲವು ಸಾಬೂನು ಮತ್ತು ಡಿಟರ್ಜೆಂಟ್ ಮತ್ತಿತರ ಕೊಳೆ ತೊಳೆಯುವ ಸರಕು ಉತ್ಪಾದನೆಯಲ್ಲಿ ಬಳಕೆಯಾಗುವ ಪ್ರಮುಖ ಕಚ್ಚಾ ವಸ್ತುವಾಗಿದೆ.

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಅಗ್ನೇಯ ಏಷ್ಯಾ ದೇಶಗಳಾದ ಮಲೇಷ್ಯಾ, ಥೈಲ್ಯಾಂಡ್ ಮುಂತಾದ ದೇಶಗಳ ಜೊತೆ ಮಾಡಿಕೊಂಡ ಮುಕ್ತ ವ್ಯಾಪಾರ ಒಪ್ಪಂದದ ಭಾಗವಾಗಿ, ತಾಳೆ ಎಣ್ಣೆಯು ಸುಂಕ ರಹಿತವಾಗಿ, ಯಾವುದೇ ಪ್ರಮಾಣದ ನಿರ್ಬಂಧವಿಲ್ಲದೇ ಆಮದಾಗುತ್ತಿದೆ. ಕೊಬ್ಬರಿ ತೈಲಕ್ಕೆ ಬೇಡಿಕೆ ಕುಸಿದು ರಾಜ್ಯದ ಕೊಬ್ಬರಿ ಬೆಲೆ ಕ್ವಿಂಟಾಲ್ ಗೆ 20,000 ರೂ.ಗಳಿಂದ 6,500 ರೂ.ಗಳಿಗೆ ಕುಸಿದಿದೆ. ಇದದಿಂದಾಗಿ ರಾಜ್ಯದ ತೆಂಗು ಬೆಳೆಗಾರರು ಸಂಕಷ್ಟದಲ್ಲಿ ಸಿಲುಕಿದ್ದಾರೆ.

ಏಕರೂಪತೆಯೇ ಸಮಾನತೆ ಅಲ್ಲ – ಎ.ಐ.ಡಿ.ಡಬ್ಲ್ಯು.ಎ.
ಪ್ರಸ್ತಾವಿತ ಏಕರೂಪ ನಾಗರಿಕ ಸಂಹಿತೆಯನ್ನು ವಿರೋಧಿಸಿ ಕಾನೂನು ಆಯೋಗಕ್ಕೆ ಪತ್ರ

ಜೂನ್ 14 ರಂದು ಪ್ರಸ್ತುತ ಕಾನೂನು ಆಯೋಗ ಯು.ಸಿ.ಸಿ. ಕುರಿತಂತೆ ಮತ್ತೊಮ್ಮೆ ಸಾರ್ವಜನಿಕರ ಅಭಿಪ್ರಾಯಗಳನ್ನು ಕೇಳುವ ಸೂಚನೆಯನ್ನು ಪ್ರಕಟಿಸಿತ್ತು. ಇದಕ್ಕೆ ಉತ್ತರವಾಗಿ ದೇಶಾದ್ಯಂತ ಒಂದು ಕೋಟಿಗೂ ಹೆಚ್ಚು ಸದಸ್ಯತ್ವವನ್ನು ಹೊಂದಿರುವ ಮಹಿಳಾ ಸಂಘಟನೆ ಎಐಡಿಡಬ್ಲ್ಯುಎ ಈ ಪತ್ರವನ್ನು ಬರೆದಿದೆ.

ಕಳೆದ 40 ವರ್ಷಗಳಿಂದ ಮಹಿಳೆಯರ ವೈಯಕ್ತಿಕ ಕಾನೂನು ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ರಾಜ್ಯದಲ್ಲಿ ವಿವಿಧ ಕಾನೂನು ಕೋಶಗಳಲ್ಲಿ ಹಲವಾರು ಪ್ರಕರಣಗಳನ್ನುಎತ್ತಿಕೊಂಡು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಎಐಡಿಡಬ್ಲ್ಯುಎ ಎಲ್ಲಾ ಸಮುದಾಯಗಳ ವೈಯಕ್ತಿಕ ಕಾನೂನುಗಳಲ್ಲಿ ಮಹಿಳೆಯರ ವಿರುದ್ಧ ತಾರಮ್ಯಗಳನ್ನು ನಿವಾರಿಸುವ ಮತ್ತು ಸಮಾನತೆ ಒದಗಿಸುವ ಸುಧಾರಣೆಗಳು ನಡೆಯಬೇಕು ಎಂದು ಪ್ರಚಾರ ಮಾಡಿಕೊಂಡು ಬಂದಿದೆ. ನಮ್ಮ ದೇಶದ ಮಹಿಳೆಯರು ಎಲ್ಲಾ ಧಾರ್ಮಿಕ ಸಮುದಾಯಗಳಲ್ಲಿ ಪಿತೃಪ್ರಧಾನ ಮತ್ತು ತಾರತಮ್ಯದ ವೈಯಕ್ತಿಕ ಕಾನೂನುಗಳ ಹೊರೆಯಲ್ಲಿ ಶತಮಾನಗಳಿಂದ ಬಳಲುತ್ತಿದ್ದಾರೆ. ಆದರೆ ಏಕರೂಪದ ಕಾನೂನುಗಳಿಂದಷ್ಟೇ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಪಡೆಯಲು ಅಥವಾ ಈ ಕಾನೂನುಗಳಲ್ಲಿ ವಿವಿಧ ಹಂತಗಳಲ್ಲಿ ಅಂತರ್ಗತವಾಗಿರುವ ತಾರತಮ್ಯವನ್ನು ತೊಡೆದುಹಾಕಲು ಸಾಧ್ಯವಿಲ್ಲ. ಏಕೆಂದರೆ ಏಕರೂಪತೆ ಎಂದರೆ ಸಮಾನತೆ ಅಲ್ಲ. ಬಹುಶಃ ಇದು ಹಿಂದೂ ಕಾನೂನುಗಳಲ್ಲಿನ ಲಿಂಗ ಪಕ್ಷಪಾತವನ್ನು ಎಲ್ಲಾ ಸಮುದಾಯಗಳ ಮೇಲೆ ನಕಲು ಮಾಡಲು ಕಾರಣವಾಗಬಹುದಷ್ಟೇ ಎಂದು ಎಐಡಿಡಬ್ಲ್ಯುಎ ಸಂದೇಹ ವ್ಯಕ್ತಪಡಿಸಿದೆ.

ಮರು–ಪರಿಶೀಲನೆಯ ಅಗತ್ಯವಾದರೂ ಏನು?

ಈಗಾಗಲೇ ವ್ಯಾಪಕವಾದ ಪುರಾವೆಗಳನ್ನು ಪಡೆದು, ವ್ಯಾಪಕವಾದ ಸಂಶೋಧನೆಯನ್ನು ನಡೆಸಿ, ಈ ಪ್ರಶ್ನೆಯ ಆಳವಾದ ಪರೀಕ್ಷಣೆಯ ನಂತರ ಹಿಂದಿನ(21ನೇ) ಕಾನೂನು ಆಯೋಗ ಏಕರೂಪ

ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಪ್ರಸ್ತಾವಿತ ಏಕರೂಪ ನಾಗರಿಕ ಸಂಹಿತೆ (ಯು.ಸಿ.ಸಿ.) ಯನ್ನು ಬಲವಾಗಿ ವಿರೋಧಿಸಿದೆ. ಜುಲೈ 11 ರಂದು ಭಾರತದ ಕಾನೂನು ಆಯೋಗಕ್ಕೆ ಬರೆದ ಪತ್ರದಲ್ಲಿ "ಏಕರೂಪತೆ ಎಂದರೆ ಸಮಾನತೆ ಎಂದರ್ಥವಲ್ಲ ಮತ್ತು ಅದನ್ನು ಮಹಿಳೆಯರಿಗೆ ಸಮಾನತೆ ಮತ್ತು ನ್ಯಾಯದೊಂದಿಗೆ ಸಮೀಕರಿಸಲಾಗದು" ಎಂದು ಅದು ಹೇಳಿದೆ.



ಕಾನೂನು ಸಂಹಿತೆ ತರಲು ಕಾಲ ಪಕ್ವವಾಗಿಲ್ಲ ಎಂಬ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿತ್ತು ಎಂಬುದನ್ನು ನೆನಪಿಸಿರುವ ಪತ್ರ, ಎಐಡಿಡಬ್ಲ್ಯುಎ ಕೂಡ ಇಂದು ಭಾರತದಲ್ಲಿ ಏಕರೂಪತೆ ಅಗತ್ಯವೂ ಅಲ್ಲ ಅಥವಾ ಅಪೇಕ್ಷಣೀಯವೂ ಅಲ್ಲ ಎಂದು ಭಾವಿಸುವುದಾಗಿ ಹೇಳಿದೆ.

"ಈಗಿರುವ ವೈಯಕ್ತಿಕ ಕಾನೂನುಗಳ ವಿವಿಧ ಅಂಶಗಳು ಮಹಿಳೆಯರನ್ನು ಸವಲತ್ತುಗಳಿಂದ ವಂಚಿತಗೊಳಿಸುತ್ತವೆ. ಅಸಮಾನತೆಯ ಮೂಲದಲ್ಲಿ ಇರುವುದು ತಾರತಮ್ಯವೇ ಹೊರತು ವ್ಯತ್ಯಾಸವಲ್ಲ ಎಂದು ಈ ಆಯೋಗವು ಅಭಿಪ್ರಾಯಪಡುತ್ತದೆ. ಈ ಅಸಮಾನತೆಯನ್ನು ನಿವಾರಿಸುವ ಸಲುವಾಗಿ, ಆಯೋಗವು ಅಸ್ತಿತ್ವದಲ್ಲಿರುವ ಕೌಟುಂಬಿಕ ಕಾನೂನುಗಳಿಗೆ ಹಲವಾರು ತಿದ್ದುಪಡಿಗಳನ್ನು ಸೂಚಿಸಿದೆ .... ಆದ್ದರಿಂದ ಈ ಆಯೋಗವು ಈ ಹಂತದಲ್ಲಿ ಅಗತ್ಯವಿಲ್ಲದ ಅಥವಾ ಅಪೇಕ್ಷಣೀಯವಲ್ಲದ ಏಕರೂಪ ನಾಗರಿಕ ಸಂಹಿತೆಯನ್ನು ಒದಗಿಸುವ ಬದಲು ತಾರತಮ್ಯದ ಕಾನೂನುಗಳೊಂದಿಗೆ ವ್ಯವಹರಿಸಿದೆ. ಹೆಚ್ಚಿನ ದೇಶಗಳು ಈಗ ವ್ಯತ್ಯಾಸವನ್ನು ಗುರುತಿಸುವತ್ತ ಸಾಗುತ್ತಿವೆ ಮತ್ತು ವ್ಯತ್ಯಾಸ ಇದೆಯೆಂದ ಮಾತ್ರಕ್ಕೆ ತಾರತಮ್ಯ ಇದೆ ಎಂದು ಹೇಳಲಾಗುವದಿಲ್ಲ, ಬದಲಾಗಿ ಇದು ಒಂದು ಪುಷ್ಟವಾದ ಪ್ರಜಾಪ್ರಭುತ್ವ ಇದೆ ಎಂಬುದನ್ನು ಸೂಚಿಸುತ್ತದೆ" ಎಂದು 21ನೇ ಕಾನೂನು ಹೇಳಿರುವಾಗ ಪ್ರಸ್ತುತ (22 ನೇ) ಕಾನೂನು ಆಯೋಗವು ಈ ಪ್ರಶ್ನೆಯನ್ನು ಮತ್ತೊಮ್ಮೆ ಪರಿಶೀಲಿಸುತ್ತಿರುವುದು ಆಶ್ಚರ್ಯ ತಂದಿದೆ ಎಂದು ಎಐಡಿಡಬ್ಲ್ಯುಎ ತನ್ನ ಪತ್ರದಲ್ಲಿ ಹೇಳಿದೆ.

ಈಗ 22ನೇ ಕಾನೂನು ಆಯೋಗವು ಈ ಬಗ್ಗೆ ಯಾವುದೇ ನೀಲನಕ್ಷೆಯನ್ನು ಒದಗಿಸದ ಅಸ್ಪಷ್ಟ ಪದಗಳ ಸೂಚನೆಯ ಮೂಲಕ ಮತ್ತೆ ಈ ಕಸರತ್ತಿನಲ್ಲಿ ತೊಡಗುವ ಅಗತ್ಯವಾದರೂ ಏನು? ಇದಲ್ಲದೆ, ಒಂದು ತಿಂಗಳ ಅತ್ಯಂತ ಸೀಮಿತ ಅವಧಿಯೊಳಗೆ ಅಭಿಪ್ರಾಯಗಳನ್ನು ಕೊಡಬೇಕು ಎಂದು ಕೇಳಿರುವುದನ್ನು ಗಮನಿಸಿದರೆ, ಇದು ಈ ವಿಷಯದ ಬಗ್ಗೆ ಕೆಲಸ ಮಾಡುತ್ತಿರುವ ವಿವಿಧ ಸಂಸ್ಥೆಗಳು ಮತ್ತು ಜನಗಳ ಅಭಿಪ್ರಾಯಗಳನ್ನು ಪಡೆಯುವ ಗಂಭೀರ ಪ್ರಯತ್ನ ಎಂದು ಅನಿಸುತ್ತಿಲ್ಲ. ಬದಲಾಗಿ, ಕೇವಲ ಔಪಚಾರಿಕತೆಯಾಗಿ ಕಾಣುತ್ತದೆ. ವಿವಿಧ ರಾಜ್ಯಗಳ ಬಿಜೆಪಿ ಸರ್ಕಾರಗಳು ಮತ್ತು ಪ್ರಧಾನ ಮಂತ್ರಿಗಳು ಇತ್ತೀಚೆಗೆ ಅದರ ಪರವಾಗಿ ಮಾತನಾಡಿದ್ದರಿಂದ ಕಾನೂನು ಆಯೋಗವು ಹೇಗಾದರೂ ಯು.ಸಿ.ಸಿ.ಯನ್ನು ಶಿಫಾರಸು ಮಾಡುವ ಅಜೆಂಡಾವನ್ನು ಹೊಂದಿರುವಂತೆ ಕಾಣುತ್ತದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ವ್ಯಕ್ತಪಡಿಸಿದೆ.

ವ್ಯಾಪಕ ಸಮಾಲೋಚನೆಗಳ ನಂತರವೇ ಸಾಧ್ಯ

ಕಾನೂನು ಆಯೋಗವು ನಿರ್ದಿಷ್ಟವಾಗಿ ವಿವಿಧ ಧಾರ್ಮಿಕ ಸಂಸ್ಥೆಗಳ ಅಭಿಪ್ರಾಯವನ್ನು ಕೇಳಿರುವುದು ಕೂಡ ಆಶ್ಚರ್ಯ ತಂದಿದೆ. ಯು.ಸಿ.ಸಿ.ಯು ಮಹಿಳಾ ಹಕ್ಕುಗಳು ಮತ್ತು ಸಮಾನತೆಗೆ ಸಂಬಂಧಿಸಿದ ವಿಷಯವಾಗಿದೆ. ಆದ್ದರಿಂದ ಕಾನೂನು ಆಯೋಗವು ವಿವಿಧ ಸಮುದಾಯಗಳ ಮಹಿಳೆಯರು ಸೇರಿದಂತೆ ಈ ಪ್ರಶ್ನೆಯನ್ನೆತ್ತಿಕೊಂಡು ಕೆಲಸ ಮಾಡುತ್ತಿರುವ ಎಲ್ಲರೊಂದಿಗೆ ಸಮಾಲೋಚನೆಗೆ ಆದ್ಯತೆ ನೀಡಬೇಕಾಗಿತ್ತು. ಆದರೆ ಈ ಕಸರತ್ತನ್ನು ಸರ್ಕಾರದ ಆದೇಶದ ಮೇರೆಗೆ ಇದನ್ನು ಮರುಪರಿಶೀಲಿಸಲಿಕ್ಕಾಗಿ, ಹೆಚ್ಚಿನ ಮಹಿಳಾ ಸಂಘಟನೆಗಳು ಮತ್ತು ಗುಂಪುಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಇಚ್ಛೆಗೆ ವಿರುದ್ಧವಾಗಿ ಏಕರೂಪ ನಾಗರಿಕ ಸಂಹಿತೆಯನ್ನು ತರುವುದಕ್ಕಾಗಿಯೇ ಎತ್ತಿಕೊಳ್ಳಲಾಗುತ್ತಿದೆ. ವಾಸ್ತವವಾಗಿ, ಯು.ಸಿ.ಸಿ.ಯು ಅಸ್ತಿತ್ವದಲ್ಲಿರುವ ಮುಸ್ಲಿಂ ಕಾನೂನು ಮತ್ತು ಬುಡಕಟ್ಟು ಪ್ರದೇಶಗಳಿಗೆ ಸಂಬಂಧಿಸಿದಂತೆ ಆರನೇ ಶೆಡ್ಯೂಲ್ ಅಡಿಯಲ್ಲಿ ಬರುವ ಕಾನೂನುಗಳನ್ನು ರದ್ದುಗೊಳಿಸುವ ಪ್ರಯತ್ನವಾಗಿದೆ ಎಂದಿರುವ ಎಐಡಿಡಬ್ಲ್ಯುಎ, ಪ್ರಜಾಪ್ರಭುತ್ವದ ವಿಧಿ–ವಿಧಾನಗಳ ಪ್ರಕಾರ, ಇದನ್ನು ಸಂಬಂಧಪಟ್ಟ ಸಮುದಾಯಗಳೊಂದಿಗೆ ವ್ಯಾಪಕ ಸಮಾಲೋಚನೆಗಳ ನಂತರವೇ ಮಾಡಲು ಸಾಧ್ಯ ಎಂದು ತನ್ನ ಪತ್ರದಲ್ಲಿ ಹೇಳಿದೆ.

ಮಹಿಳೆಯರ ಸಮಾನ ಹಕ್ಕುಗಳ ಸುಧಾರಣೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಸರ್ಕಾರ ಕೆಟ್ಟದಾಖಲೆಯನ್ನೇ ಹೊಂದಿದೆ. ಇದು ಎಂದಿಗೂ ಲಿಂಗ ನ್ಯಾಯಕ್ಕೆ ಆದ್ಯತೆ ನೀಡಿಲ್ಲ ಅಥವಾ ಮಹಿಳೆಯರಿಗಾಗಿ ಒಂದೇ ಒಂದು ಸುಧಾರಣೆಯನ್ನೂ ಕೈಗೊಂಡಿಲ್ಲ. ಮಹಿಳಾ ಚಳುವಳಿಯ ಹಲವಾರು ಆಗ್ರಹಗಳನ್ನು ಹಿಂದಿನ ಸರಕಾರಗಳಂತೆ ಇದೂ ನಿರ್ಲಕ್ಷಿಸಿದೆ. ಸರ್ಕಾರವು ಯುಸಿಸಿಯನ್ನು ತರಲು ತೀರ್ಮಾನಿಸಿದೆ ಎಂಬ ಕಾರಣಕ್ಕಾಗಿಯಷ್ಟೇ ಈ ಪ್ರಶ್ನೆಯನ್ನು ಮರುಪರಿಶೀಲಿಸಲು ಹೊರಡಬಾರದು ಎಂದು ಕಾನೂನು ಆಯೋಗವನ್ನು ವಿನಂತಿಸಿರುವ ಎಐಡಿಡಬ್ಲ್ಯುಎ "ಈ ಕ್ಷೇತ್ರದಲ್ಲಿನ ನಮ್ಮ ಅನುಭವವನ್ನು ಪರಿಗಣಿಸಿ, ಕಾನೂನು ಆಯೋಗವು ನಮ್ಮನ್ನು ಕರೆದಾಗ ನಾವು ಕೂಡ ಮೌಖಿಕ ಸಾಕ್ಷ್ಯವನ್ನು ನೀಡಲು ಬಯಸುತ್ತೇವೆ. ಯು.ಸಿ.ಸಿ.ಯನ್ನು ಯನ್ನು ಶಿಫಾರಸು ಮಾಡಲು ನಿರ್ಧರಿಸುವ ಮೊದಲು ಮಹಿಳಾ ಸಂಘಟನೆಗಳು ಮತ್ತು ಗುಂಪುಗಳು ಮತ್ತು ಇದಕ್ಕೆ ಸಂಬಂಧಿಸಿದ ಇತರರು, ವಿಶೇಷವಾಗಿ ಅಲ್ಪಸಂಖ್ಯಾತ ಸಮುದಾಯಗಳ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರೊಂದಿಗೆ ಕಾನೂನು ಆಯೋಗವು ವ್ಯಾಪಕವಾಗಿ ಸಮಾಲೋಚಿಸಬೇಕು ಎಂದು ನಾವು ಭಾವಿಸುತ್ತೇವೆ" ಎಂದು ತನ್ನ ಪತ್ರದಲ್ಲಿ ಬರೆದಿದೆ.

ಏಕರೂಪ ನಾಗರೀಕ ಕಾನೂನಿನಿಂದ ಲಿಂಗ ಸಮಾನತೆ ಸಾಧ್ಯವೇ?

ಬೃಂದಾ ಕಾರತ್

ಮಹಿಳಾ ಹಕ್ಕುಗಳ ಸಾಮಾಜಿಕ ಚಳುವಳಿಗಳು ಯಾವಾಗಲೂ ಪಿತೃಪ್ರಧಾನ ಸಮಾಜದ ವಿಧಾನಗಳು ಮತ್ತು ಕಾನೂನು ಸಂಹಿತೆಗಳ ವಿರುದ್ಧ ಹೋರಾಡುವ ಮೂಲಕ ಪ್ರಗತಿ ಸಾಧಿಸಿವೆ. ಸ್ವಾತಂತ್ರ್ಯ ಪಡೆದ 75 ವರ್ಷಗಳ ನಂತರವೂ ಮಹಿಳಾ ಹಕ್ಕುಗಳ ಕಾನೂನು ಚೌಕಟ್ಟು ಅಸಮಾನತೆಗಳು, ತಾರತಮ್ಯ ಮತ್ತು ಪೂರ್ವಾಗ್ರಹದಿಂದ ಕೂಡಿದೆ. ಮಹಿಳೆಯರು ಸಾಕಷ್ಟು ಪ್ರಗತಿ ಸಾಧಿಸಿದ್ದಾರೆ ನಿಜ. ಆದಾಗ್ಯೂ, ಹೋಗಲು ಇನ್ನೂ ಬಹಳ ದೂರವಿದೆ. 2023 ರ ಭಾರತದಲ್ಲಿ, ಮಹಿಳಾ ಸಮಾನತೆಯನ್ನು ಸಾಧಿಸಲು ಸೂಕ್ತವಾದ ಮತ್ತು ಪರಿಣಾಮಕಾರಿ ಮಾರ್ಗ ಯಾವುದು ಎಂಬ ನಿರ್ಣಾಯಕ ಪ್ರಶ್ನೆಯನ್ನು ನಾವು ಎದುರಿಸುತ್ತೇವೆ.

ಏಕರೂಪ ನಾಗರಿಕ ಸಂಹಿತೆಯು ಬುಡಕಟ್ಟು ಜನಾಂಗದವರಿಗೆ ಸಂವಿಧಾನವು ನೀಡಿರುವ ಎಲ್ಲಾ ವಿಶೇಷ ಹಕ್ಕುಗಳು ಮತ್ತು ಸವಲತ್ತುಗಳಿಗೆ ವಿರುದ್ಧವಾಗಿದೆ. ಆದಿವಾಸಿಗಳಿಗೆ ಸಂವಿಧಾನ ನೀಡಿರುವ ಈ ವಿಶೇಷ ಹಕ್ಕುಗಳ ವಿರುದ್ಧ ಕೇಂದ್ರ ಸರಕಾರ ಇದೆಯೇ? ಏಕ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ಅವೆಲ್ಲವನ್ನೂ ರದ್ದುಗೊಳಿಸಲಾಗುತ್ತದೆಯೇ? ಅಥವಾ ಏಕರೂಪ ನಾಗರಿಕ ಸಂಹಿತೆ ಅವರಿಗೆ ಅನ್ವಯಿಸುವುದಿಲ್ಲವೇ? ಮುಸ್ಲಿಮರು ಮಾತ್ರ ಇದರ ಗುರಿಯೇ? ಪ್ರಧಾನಿ ಉತ್ತರಿಸಬೇಕು.

'ಒಂದು ದೇಶ, ಒಂದು ಕಾನೂನು' ಎಂಬ ಘೋಷವಾಕ್ಯದಡಿಯಲ್ಲಿ ಮೋದಿ ಸರಕಾರ ಏಕರೂಪ ನಾಗರಿಕ ಸಂಹಿತೆಯನ್ನು ಪ್ರಚಾರ ಮಾಡುತ್ತಿದೆ. ಭಾರತೀಯ ಸಂದರ್ಭದಲ್ಲಿ, ಒಂದು ಕಾನೂನು ಲಿಂಗ ಸಮಾನತೆಗೆ ಕಾರಣವಾಗುವುದಿಲ್ಲ ಎಂದು ನಮಗೆ ತಿಳಿದಿದೆ. ಎಲ್ಲಾ ವರ್ಗಗಳ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಚಿತಪಡಿಸಿಕೊಳ್ಳಲು ಸಿಪಿಐ(ಎಂ) ಎರಡು ನೀತಿಯನ್ನು ಪ್ರತಿಪಾದಿಸುತ್ತದೆ. ಒಂದು, ಎಲ್ಲಾ ಜಾತಿಗಳ ಮಹಿಳೆಯರಿಗೆ ಸಮಾನವಾಗಿ ಅನ್ವಯಿಸಲು ಅಸ್ತಿತ್ವದಲ್ಲಿರುವ ಜಾತ್ಯತೀತ ಕಾನೂನುಗಳನ್ನು ಬಲಪಡಿಸಿ ಮತ್ತು ವಿಸ್ತರಿಸುವುದು. ಎರಡನೆಯದಾಗಿ, ಎಲ್ಲಾ ವಿಭಾಗಗಳ ಪುರುಷ ಮತ್ತು ಮಹಿಳಾ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ವೈಯಕ್ತಿಕ– ಸಾಂಪ್ರದಾಯಿಕ ಕಾನೂನುಗಳನ್ನು ಪರಿಷ್ಕರಿಸುವುದು. ಈ ರೀತಿಯಾಗಿ ಹಿಂದೂ, ಮುಸ್ಲಿಂ, ಪಾರ್ಸಿ, ಕ್ರಿಶ್ಚಿಯನ್, ಸಿಖ್ ಮತ್ತು ಬುಡಕಟ್ಟು ಸಮುದಾಯದಂತಹ ಪ್ರತಿಯೊಂದು ಗುಂಪಿನೊಳಗೆ ಸಮಾನತೆಯನ್ನು ಖಾತ್ರಿಪಡಿಸಿಕೊಳ್ಳಬಹುದು. ಇದರಿಂದ ವಿವಿಧ ಗುಂಪುಗಳಲ್ಲಿ ಸಮಾನತೆ ಸಾಧ್ಯ. 2016ರಲ್ಲಿ ಮೋದಿ ಸರ್ಕಾರವು ನ್ಯಾಯಮೂರ್ತಿ ಬಿ.ಎಸ್. ಚೌಹಾಣ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ 21 ನೇ ಕಾನೂನು ಆಯೋಗವು ಇದೇ ತೀರ್ಮಾನಕ್ಕೆ ಬಂದಿತು. ಆಯೋಗವು ಆಗಸ್ಟ್ 2018 ರಲ್ಲಿ ಸಲ್ಲಿಸಿದ 'ಕುಟುಂಬ ಕಾನೂನು ಸುಧಾರಣೆಗಳು' ವರದಿಯಿಂದಲೂ ಇದನ್ನು ಒತ್ತಿಹೇಳಲಾಗಿದೆ.

21 ನೇ ಕಾನೂನು ಆಯೋಗದ ಆವಿಷ್ಕಾರಗಳು

21ನೇ ಕಾನೂನು ಆಯೋಗದ ಮುಖ್ಯ ಕಾರ್ಯವೆಂದರೆ ಏಕರೂಪ ನಾಗರಿಕ ಸಂಹಿತೆಯ ಸಾಧ್ಯತೆಗಳನ್ನು ಅಧ್ಯಯನ ಮಾಡುವುದು. ಆದಾಗ್ಯೂ, ಆಯೋಗವು ಏಕರೂಪ ನಾಗರಿಕ ಸಂಹಿತೆಯನ್ನು 'ಅಗತ್ಯ ಅಥವಾ ಅಗತ್ಯವಲ್ಲ' ಎಂದು ತಳ್ಳಿಹಾಕಿತು. ವಿಶೇಷ ವಿವಾಹ ಕಾಯಿದೆ ಮತ್ತು ಕೌಟುಂಬಿಕ ಹಿಂಸಾಚಾರ ನಿಷೇಧ ಕಾಯಿದೆಯಂತಹ 'ಜಾತ್ಯತೀತ ಕಾನೂನು'ಗಳಿಗೆ ಅಧಿಕಾರ ನೀಡುವುದು ಮತ್ತು ಅವುಗಳನ್ನು ಎಲ್ಲಾ ವಿಭಾಗಗಳಿಗೂ ವಿಸ್ತರಿಸುವುದು ಆಯೋಗದ ಮೊದಲ ಶಿಫಾರಸು. ಎರಡನೆಯದಾಗಿ, ಆಯೋಗವು ಹಿಂದೂ, ಮುಸ್ಲಿಂ (ಸುನ್ನಿ ಮತ್ತು ಶಿಯಾ), ಕ್ರಿಶ್ಚಿಯನ್ ಪಾರ್ಸಿ, ಸಿಖ್ ಮತ್ತು ಬುಡಕಟ್ಟು ವಿವಾಹಗಳು, ವಿಚ್ಛೇದನ, ಮಕ್ಕಳ ನಿರ್ವಹಣೆ, ದತ್ತು ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದ ಕೌಟುಂಬಿಕ ಕಾನೂನುಗಳ ಕುರಿತು ಕೆಲವು ಶಿಫಾರಸುಗಳನ್ನು ಮಾಡಿದೆ. ಈ ವರ್ಗಗಳಲ್ಲಿನ ವೈಯಕ್ತಿಕ ➚

ಎಲ್ಲಾ ವರ್ಗಗಳ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಚಿತಪಡಿಸಿಕೊಳ್ಳಲು ಸಿಪಿಐ(ಎಂ) ಎರಡು ನೀತಿಯನ್ನು ಪ್ರತಿಪಾದಿಸುತ್ತದೆ. ಒಂದು, ಎಲ್ಲಾ ಜಾತಿಗಳ ಮಹಿಳೆಯರಿಗೆ ಸಮಾನವಾಗಿ ಅನ್ವಯಿಸಲು ಅಸ್ತಿತ್ವದಲ್ಲಿರುವ ಜಾತ್ಯತೀತ ಕಾನೂನುಗಳನ್ನು ಬಲಪಡಿಸಿ ಮತ್ತು ವಿಸ್ತರಿಸುವುದು. ಎರಡನೆಯದಾಗಿ, ಎಲ್ಲಾ ವಿಭಾಗಗಳ ಪುರುಷ ಮತ್ತು ಮಹಿಳಾ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ವೈಯಕ್ತಿಕ– ಸಾಂಪ್ರದಾಯಿಕ ಕಾನೂನುಗಳನ್ನು ಪರಿಷ್ಕರಿಸುವುದು.

ನ್ಯಾಟೋ ಶೃಂಗಸಭೆ: ಜಾಗತಿಕ ಅಧಿಪತ್ಯಕ್ಕೆ ಯೋಜನೆ

ಪ್ರಕಾಶ್ ಕಾರತ್

ಲಿಥುವೇನಿಯಾದ ವಿಲ್ನಿಯಸ್‌ನಲ್ಲಿ ನಡೆದ ನ್ಯಾಟೋ ಕೂಟದ ಶೃಂಗಸಭೆ, ಅಮೆರಿಕ ನೇತೃತ್ವದ ಪಾಶ್ಚಿಮಾತ್ಯ ಮಿಲಿಟರಿ ಮೈತ್ರಿಕೂಟದ ಆಕ್ರಮಣಶೀಲತೆಯನ್ನು ಹೊಸ ಮಟ್ಟಕ್ಕೆ ಒಯ್ದಿದೆ. ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ಸಮರವು ಸಭೆಯ ಚರ್ಚೆಯ ಪ್ರಮುಖ ಕಾರ್ಯಸೂಚಿ ಆಗಿದ್ದರೂ, ಶೃಂಗಸಭೆಯ ಅಂತ್ಯದಲ್ಲಿ ಹೊರಡಿಸಲಾದ ಘೋಷಣೆಯು ಅದಕ್ಕೂ ಮೀರಿದ್ದಾಗಿದೆ. ಅದು ಯುರೋಪ್‌ನಿಂದ ಹೊರಗಿನ ಜಗತ್ತಿನ ಇತರ ಭಾಗಗಳ ಹಿತಾಸಕ್ತಿಗಳನ್ನು ವ್ಯಕ್ತಪಡಿಸುತ್ತದೆ ಮತ್ತು ಜಾಗತಿಕ ಅಧಿಪತ್ಯಕ್ಕೆ ಪ್ರಯತ್ನಿಸುವ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ.

ಕಳೆದ ವರ್ಷ ನಡೆದ ಮ್ಯಾಡ್ರಿಡ್ ಶೃಂಗಸಭೆಯ ಘೋಷಣೆಯ ರೀತಿಯಲ್ಲೇ ಈ ವರ್ಷದ ದಾಖಲೆಯೂ ಭೂಮಿ, ವಾಯು, ಸಾಗರ ಮತ್ತು ಸೈಬರ್‌ಸ್ಪೇಸ್‌ನಲ್ಲಿನ ಭದ್ರತಾ ಅಪಾಯಗಳಿಗೆ ಸಂಬಂಧಿಸಿದ '360 ಡಿಗ್ರಿ ಧೋರಣೆ' ಬಗ್ಗೆ ಮಾತನಾಡಿದೆ.

ಯುದ್ಧಕೋರ ದನಿ

ಉಕ್ರೇನ್ ಸಂಘರ್ಷಕ್ಕೆ ಸಂಬಂಧಿಸಿದ ಅದರ ದನಿಯು ಯುದ್ಧಕೋರತನದ್ದಾಗಿದ್ದು ಶಾಂತಿ ಸಂಧಾನಗಳ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿಲ್ಲ. ಉಕ್ರೇನ್‌ನ ಎಲ್ಲ ಪ್ರದೇಶಗಳಿಂದ 'ರಷ್ಯಾ ಸಂಪೂರ್ಣವಾಗಿ ಹಾಗೂ ಬೇಷರತ್ತಾಗಿ ವಾಪಸಾಗಬೇಕು' ಎಂಬುದು ಅದರ ಪೂರ್ವ–ಷರತ್ತಾಗಿದೆ. ಉಕ್ರೇನ್‌ಗೆ ದೊಡ್ಡ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಹಾಗೂ ಸಾಧನ ಸಲಕರಣೆಗಳನ್ನು ಸರಬರಾಜು ಮಾಡುವ ಪ್ರತ್ಯೇಕ ನಿರ್ಣಯವೊಂದನ್ನು ನ್ಯಾಟೋ ಶೃಂಗಸಭೆ ಕೈಗೊಂಡಿದೆ.

ಉಕ್ರೇನ್‌ಗೆ ತಕ್ಷಣವೇ ನ್ಯಾಟೋ ಸದಸ್ಯತ್ವ ನೀಡಬೇಕೆಂಬ ಅದರ ಅಧ್ಯಕ್ಷ ಝೆಲೆನ್‌ಸ್ಕಿ ಬೇಡಿಕೆಗೆ ನ್ಯಾಟೋ ಮುಖಂಡರು ಸಮ್ಮತಿ ನೀಡಿಲ್ಲ. ಇದಕ್ಕೆ ವ್ಯೂಹಾತ್ಮಕ ಕಾರಣವಿದೆ. ಒಂದು ವೇಳೆ ಉಕ್ರೇನ್‌ಗೆ ನ್ಯಾಟೋ ಸದಸ್ಯತ್ವ ನೀಡಿದರೆ, ನ್ಯಾಟೋ ಒಡಂಬಡಿಕೆಯ 5ನೇ ಪರಿಚ್ಛೇದ ಅನ್ವಯವಾಗಬೇಕಾಗುತ್ತದೆ. ಹಾಗಾದಾಗ, ಅಮೆರಿಕ ಮತ್ತು ನ್ಯಾಟೋದ ಇತರ ಪಾಲುದಾರ ದೇಶಗಳು ರಷ್ಯಾದೊಂದಿಗಿನ ಯುದ್ಧದಲ್ಲಿ ನೇರವಾಗಿ ಪಾಲುದಾರರಾಗಬೇಕಾಗುತ್ತದೆ. ಉಕ್ರೇನ್ ಈಗ ವಾಸ್ತವವಾಗಿ ನ್ಯಾಟೋ ಮೈತ್ರಿಕೂಟದ ಭಾಗವಾಗಿದೆ ಎಂದು ಘೋಷಣೆ ಆಶ್ವಾಸನೆ ನೀಡಿದೆ. 'ಉಕ್ರೇನ್ ಹೆಚ್ಚೆಚ್ಚಾಗಿ ಅಂತರ್ ಕಾರ್ಯಾಚರಿಸಬಹುದಾಗಿದೆ ಮತ್ತು ರಾಜಕೀಯವಾಗಿ ಮೈತ್ರಿಕೂಟದೊಂದಿಗೆ ವಿಲೀನಗೊಂಡಿದೆ' ಎಂದು ಘೋಷಣೆ ಹೇಳಿದೆ. ಉಕ್ರೇನ್ ಯುದ್ಧ ಮಾಡುತ್ತಲೇ ಇರಬೇಕೆಂಬ ಸನ್ನಿವೇಶವನ್ನು ಹಾಗೂ ಯುದ್ಧದ ವಿನಾಶದ ಹೊರೆಯನ್ನು ಹಾಗೂ ಸಾವುನೋವನ್ನು ಅನುಭವಿಸಬೇಕು ಎಂಬುದನ್ನು ಅಮೆರಿಕ ಬಯಸುತ್ತದೆ. ನ್ಯಾಟೋ ಕೂಟದ ದೇಶಗಳು ಪೂರೈಸುವ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ನೆರವಿನೊಂದಿಗೆ ಅದು ಸಮರದಲ್ಲಿ ವ್ಯಸ್ತವಾಗಿರಬೇಕೆನ್ನುವುದು ಅದರ ಬಯಕೆಯಾಗಿದೆ.

ಫಿನ್ಲೆಂಡ್ ಹೊಸ ಸದಸ್ಯನಾಗಿದ್ದಕ್ಕೆ ಈ ಶೃಂಗಸಭೆ ಸಾಕ್ಷಿಯಾಯಿತು. ಹಾಗೂ ಟರ್ಕಿ ತನ್ನ ಆಕ್ಷೇಪವನ್ನು ವಾಪಸ್ ಪಡೆದದ್ದರಿಂದ ಸ್ವೀಡನ್ ಈ ಒಡಂಬಡಿಕೆಯ ಸದಸ್ಯ ರಾಷ್ಟ್ರವಾಯಿತು. ಈ ಎರಡು ದೇಶಗಳ ಸೇರ್ಪಡೆಯಿಂದಾಗಿ ರಷ್ಯಾದೊಂದಿಗಿನ ನ್ಯಾಟೋದ ಭೂ ಗಡಿ ದುಪ್ಪಟ್ಟಿಗಿಂತ ಜಾಸ್ತಿಯಾಗಿದೆ. ಪೂರ್ವ ಯುರೋಪಿನಾದ್ಯಂತ ಪಡೆಗಳು ಮತ್ತು ಶಸ್ತ್ರಾಸ್ತ್ರಗಳ ನಿಯೋಜನೆಯ ವಿವರಣೆ ಹಾಗೂ ನ್ಯಾಟೋದ ತ್ವರಿತ ಪ್ರತಿಕ್ರಿಯೆ ಪಡೆಯ ಯೋಧರ ಸಂಖ್ಯೆಯನ್ನು 40,000 ದಿಂದ 3 ಲಕ್ಷಕ್ಕೆ ಹೆಚ್ಚಿಸುವ ಯೋಜನೆಯ ಒಂದು ದಾಖಲೆಪತ್ರಕ್ಕೂ ಶೃಂಗಸಭೆ ಅನುಮೋದನೆ ನೀಡಿದೆ. ಹೀಗಾಗಿ, ರಷ್ಯಾ ಗಡಿಗಳಲ್ಲಿ ನ್ಯಾಟೋ ಪಡೆಗಳ ಸುತ್ತುವರಿಯುವಿಕೆಯು ತ್ವರಿತವಾಗಿ ವಿಸ್ತರಣೆಯಾಗಲಿದೆ.

ಉಕ್ರೇನ್‌ನಲ್ಲಿ ಸಂಘರ್ಷದ ಮೂಲವಾಗಿರುವ ಪೂರ್ವದ ಕಡೆಗಿನ ನ್ಯಾಟೋದ ಈ ವಿಸ್ತರಣೆಗೆ ಮೊದಲ ಸ್ಥಾನ ಸಿಕ್ಕಿದೆ. ಜರ್ಮನಿಯ ಏಕೀಕರಣದ ನಂತರ ಪೂರ್ವದತ್ತ ವಿಸ್ತರಣೆ ಮಾಡುವುದಿಲ್ಲ ಎಂಬ ಆಶ್ವಾಸನೆಯನ್ನು ನ್ಯಾಟೋ ಉಲ್ಲಂಘಿಸಿದೆ.

ವಿಲ್ನಿಯಸ್ ಘೋಷಣೆಯು ಮಧ್ಯ ಪ್ರಾಚ್ಯ, ಆಫ್ರಿಕಾ ಮತ್ತು ಇಂಡೋ–ಪೆಸಿಫಿಕ್ ವಲಯದ ಸಹಿತ ಜಗತ್ತಿನ ಪ್ರತಿ ಭಾಗದಲ್ಲಿಯೂ ವ್ಯೂಹಾತ್ಮಕ ಹಿತಾಸಕ್ತಿಗಳನ್ನು ವಿಸ್ತರಿಸುವ ಬಗ್ಗೆ ಮಾತನಾಡಿದೆ.

ಚೀನಾ ಮೇಲೆ ಕಣ್ಣು

ಚೀನಾ, ಈ ಘೋಷಣೆಯ ಇನ್ನೊಂದು ಪ್ರಮುಖ ಅಂಶವಾಗಿದೆ. ಚೀನಾ 'ಜಾಗತಿಕ ಹೆಜ್ಜೆ ಗುರುತು ಹೆಚ್ಚಿಸಲು ಮತ್ತು ಅಧಿಕಾರವನ್ನು ಹೆಚ್ಚಿಸಿಕೊಳ್ಳಲು ವ್ಯಾಪಕ ವ್ಯಾಪ್ತಿಯ ರಾಜಕೀಯ, ಆರ್ಥಿಕ ಮತ್ತು ಮಿಲಿಟರಿ ಸಾಧನಗಳನ್ನು ಬಳಸಿಕೊಳ್ಳುತ್ತಿದೆ' ಎಂದು ಘೋಷಣೆ ಆರೋಪಿಸಿದೆ. 'ದುರುದ್ದೇಶಪೂರಿತ ಹೈಬ್ರಿಡ್ ಮತ್ತು ಸೈಬರ್ ಕಾರ್ಯಾಚರಣೆಗಳ' ಮೂಲಕ ನ್ಯಾಟೋ ಮೈತ್ರಿಕೂಟದ ಭದ್ರತೆಗೆ ಚೀನಾ ಹಾನಿ ಮಾಡುತ್ತಿದೆ ಎಂದು ಆರೋಪಿಸಿದೆ. ಮತ್ತು ಪ್ರಮುಖವಾದ ತಂತ್ರಜ್ಞಾನ ವಲಯಗಳು, ನಿರ್ಣಾಯಕ ಮೂಲಸೌಕರ್ಯ, ವ್ಯೂಹಾತ್ಮಕ ಸಾಮಗ್ರಿಗಳು ಮತ್ತು ಸರಬರಾಜು ಬದಲಾವಣೆಯನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದೆ ಎಂದು ಹೇಳಿದೆ.

ಚೀನಾವು 'ಕಾನೂನು–ಆಧಾರಿತ ಅಂತರಾಷ್ಟ್ರೀಯ ವ್ಯವಸ್ಥೆಯನ್ನು' ಉಲ್ಲಂಘಿಸುತ್ತಿದೆ ಎಂದೂ ಆರೋಪಿಸಲಾಗಿದೆ. ಜಗತ್ತಿನ ಮೇಲೆ ಅಮೆರಿಕ ಅಧಿಪತ್ಯ ಹೊಂದಲು ಎರಡನೇ ವಿಶ್ವ ಯುದ್ಧದ ನಂತರ ರೂಪಿಸಲಾದ ನಿಯಮಗಳನ್ನು ಉಲ್ಲೇಖಿಸಲು ಈ ಮಾತನ್ನು ಬಳಸಲಾಗಿದೆ.

ವಿಲ್ನಿಯಸ್ ಶೃಂಗಸಭೆಯಲ್ಲಿ ಕ್ವಾಡ್ ಮತ್ತು ಎಯುಕೆಯುಎಸ್ ದೇಶಗಳ ರಾಜಕೀಯ ನಾಯಕರ ಭಾಗವಹಿಸುವಿಕೆಯೇ ಚೀನಾವನ್ನು ಟಾರ್ಗೆಟ್ ಮಾಡಿದ್ದಕ್ಕೆ ಸಾಕ್ಷಿಯಾಗಿದೆ. ಜಪಾನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ದಕ್ಷಿಣ ಕೊರಿಯಾ ಅಧ್ಯಕ್ಷರು ಸಭೆಯಲ್ಲಿ ಭಾಗವಹಿಸಿದ್ದರು. ಚೀನಾವನ್ನು ಎದುರಿಸಲು ಹಾಗೂ ಪ್ರತ್ಯೇಕಿಸಲು ಪೂರ್ವದಲ್ಲಿ ನ್ಯಾಟೋವನ್ನು ಸೃಷ್ಟಿಸುವುದು ಅಮೆರಿಕದ ಆಶಯವಾಗಿದೆ.

ಕ್ವಾಡ್ ಸದಸ್ಯ ದೇಶವಾದರೂ ಭಾರತ ಈ ಶೃಂಗಸಭೆಯಲ್ಲಿ ಭಾಗವಹಿಸಿರಲಿಲ್ಲ. ಉಕ್ರೇನ್ ಸಂಘರ್ಷ ಮತ್ತು ರಷ್ಯಾವನ್ನು ನಿರ್ವಹಿಸುವುದು ನ್ಯಾಟೋದ ವಿಲ್ನಿಯಸ್ ಶೃಂಗಸಭೆಯ ಪ್ರಮುಖ ಉದ್ದೇಶವಾಗಿದ್ದರಿಂದ ತಟಸ್ಥ ಧೋರಣೆಯ ಭಾರತ ಅದರಲ್ಲಿ ಭಾಗವಹಿಸುವುದು ಸಾಧ್ಯವಿರಲಿಲ್ಲ. ಆದರೆ, ನ್ಯಾಟೋ ಶೃಂಗಸಭೆಯು ಪಾಶ್ಚಿಮಾತ್ಯ ಮೈತ್ರಿಕೂಟದ ಇಂಡೋ–ಪೆಸಿಫಿಕ್ ಕಾರ್ಯತಂತ್ರವನ್ನು ಪ್ರೊಜೆಕ್ಟ್ ಮಾಡಿದ್ದರಿಂದ ಭಾರತ ಈಗಾಗಲೇ ಸಂಪೂರ್ಣವಾಗಿ ಇದರ ಪಾಲುದಾರ ಎಂದು ಅರ್ಥವಾಗಿದೆ.

ನ್ಯಾಟೋ ಶೃಂಗಸಭೆಯು ಅಮೆರಿಕ ಮತ್ತದರ ಮಿತ್ರರ ಹೆಚ್ಚುತ್ತಿರುವ ಮಿಲಿಟರೀಕರಣ ಮತ್ತು ಆಕ್ರಮಣಶೀಲತೆಯನ್ನು ಸಂಕೇತಿಸುತ್ತದೆ. ದ್ವಿತೀಯ ವಿಶ್ವ ಸಮರದ ನಂತರ ಡಿಮಿಲಿಟರೀಕರಣಗೊಂಡ ಜಪಾನ್ ಮತ್ತು ಜರ್ಮನಿ, ಈಗ ಮತ್ತೆ ಸಶಸ್ತ್ರೀಕರಣ ಹಾದಿ ತುಳಿದಿವೆ ಮತ್ತು ಮಿಲಿಟರಿ ಶಕ್ತಿಯನ್ನು ಕಟ್ಟಲು ಸಜ್ಜಾಗುತ್ತಿವೆ. ಉಕ್ರೇನ್‌ನಲ್ಲಿ ಯುದ್ಧ ಇನ್ನೂ ದೀರ್ಘ ಕಾಲ ಮುಂದುವರಿಯಬೇಕೆನ್ನುವುದು ಅಧ್ಯಕ್ಷ ಜೋ ಬೈಡೆನ್‌ರ ಆಶಯವಾಗಿದೆ. ಸುದೀರ್ಘ ಕಾಲ ಯುದ್ಧ ನಡೆಯುವುದು ಯುರೋಪ್ ಮೇಲೆ ಏಕಸ್ವಾಮ್ಯ ಸ್ಥಾಪಿಸುವ ಹಾಗೂ ಚೀನಾದೊಂದಿಗಿನ ಸಂಘರ್ಷದಲ್ಲಿ ಅವುಗಳನ್ನು ಬಳಸಿಕೊಳ್ಳುವ ಅಮೆರಿಕದ ಗುರಿ ಸಾಧನೆಗೆ ಅನುಗುಣವಾಗಿರಲಿದೆ. ಈ ಕಾರಣದಿಂದಲೇ, ಮೋದಿ ಸರ್ಕಾರವು ಅಮೆರಿಕದ ಆಕ್ರಮಣಕಾರಿ ಯೋಜನೆಗಳಿಗೆ ಹೆಚ್ಚು ಹೆಚ್ಚಾಗಿ ಮೌನಸಮ್ಮತಿ ನೀಡುತ್ತಿರುವಂತೆ ಕಾಣಿಸುತ್ತದೆ.

ಅನು: ವಿಶ್ವ



ಕಾನೂನುಗಳನ್ನು ಸುಧಾರಿಸಲು ಇವುಗಳನ್ನು ಉದ್ದೇಶಿಸಲಾಗಿದೆ.

ಸ್ವೀಕರಿಸಿದ 75,378 ಸಲಹೆಗಳನ್ನು ಆಧರಿಸಿ, ಸಮಾನ ಹಕ್ಕುಗಳಿಗಾಗಿ ಮಹಿಳಾ ಹೋರಾಟಗಳನ್ನು ಮುನ್ನಡೆಸಲು ನೀಲನಕ್ಷೆಯನ್ನು ಸಿದ್ಧಪಡಿಸುವ ಕಾರ್ಯವನ್ನು ಆಯೋಗಕ್ಕೆ ವಹಿಸಲಾಯಿತು. ಪ್ರಸ್ತುತ ಹಿಂದೂ ಕಾನೂನಿನ ಅಡಿಯಲ್ಲಿ ಆ ವರ್ಗದ ಮಹಿಳೆಯರು ಎದುರಿಸುತ್ತಿರುವ ತೀವ್ರ ತಾರತಮ್ಯದ ಹಲವು ಉದಾಹರಣೆಗಳನ್ನು ವರದಿ ಹೊಂದಿದೆ. ಉತ್ತರಾಧಿಕಾರದ ಹಕ್ಕಿನಲ್ಲಿ, 2005 ರ ತಿದ್ದುಪಡಿಯ ನಂತರವೂ ಮಹಿಳೆಯರಿಗೆ ಸಮಾನ ಹಕ್ಕುಗಳು ಸಿಗುತ್ತಿಲ್ಲ ಎಂದು ವರದಿ ಹೇಳಿದೆ. ಅವಿಭಕ್ತ ಕುಟುಂಬದ ಪರಿಕಲ್ಪನೆಯ ಆಧಾರದ ಮೇಲೆ ತೆರಿಗೆ ವಿನಾಯಿತಿಗಳನ್ನು ಹಿಂಪಡೆಯಲು ಪ್ರಸ್ತಾಪಿಸಲಾಗಿದೆ. ವಾಸ್ತವವಾಗಿ, ಆಯೋಗದ ವರದಿಯು ಕೇವಲ ಮುಸ್ಲಿಂ ವೈಯಕ್ತಿಕ ಕಾನೂನನ್ನು ರದ್ದುಗೊಳಿಸಬೇಕು ಎಂಬ ಬಿಜೆಪಿಯ ವಾದವನ್ನು ಸಾರಾಸಗಟಾಗಿ ತಿರಸ್ಕರಿಸಿದೆ. ಹಾಗಾಗಿ ಕೇಂದ್ರ ಸರ್ಕಾರ ವರದಿಯನ್ನು ಫ್ರೀಜರ್ ನಲ್ಲಿಟ್ಟಿತ್ತು. ಆಯೋಗದ ವರದಿಯು ತ್ರಿವಳಿ ತಲಾಖ್ ಅನ್ನು ನಿಷೇಧಿಸುವ ಮೂಲಕ 'ಮುಸ್ಲಿಂ ಹೆಣ್ಣುಮಕ್ಕಳಿಗೆ' ಸಹಾಯ ಮಾಡಿದ ಏಕೈಕ ಸರ್ಕಾರ ನಮ್ಮದಾಗಿದೆ ಎಂಬ ಮೋದಿ ಸರ್ಕಾರದ ಹೇಳಿಕೆಯನ್ನು ತಳ್ಳಿಹಾಕುವಂತಿತ್ತು. ತ್ರಿವಳಿ ತಲಾಖ್ ಅಗತ್ಯ ಧಾರ್ಮಿಕ ವಿಧಿಯಲ್ಲದ ಕಾರಣ ಸುಪ್ರೀಂ ಕೋರ್ಟ್ ಅದನ್ನು ಕಾನೂನುಬಾಹಿರಗೊಳಿಸಿದೆ ಎಂದು ಆಯೋಗ ಹೇಳಿದೆ. ಕೌಟುಂಬಿಕ ದೌರ್ಜನ್ಯ ತಡೆ ಕಾಯಿದೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಮುಸ್ಲಿಂ ಮಹಿಳೆಯರನ್ನು ದೌರ್ಜನ್ಯದಿಂದ ರಕ್ಷಿಸಲು ಸರಕಾರ ಮುಂದಾಗಬೇಕು ಎಂದಿದೆ. ಪರಿಣಾಮ, ಮೋದಿ ಸರ್ಕಾರ ಕಾನೂನು ತಂದಿರುವುದು ಮುಸ್ಲಿಂ ಮಹಿಳೆಯರ ರಕ್ಷಣೆಗೆ ಅಲ್ಲ, ಮುಸ್ಲಿಂ ಪುರುಷರನ್ನು ಜೈಲಿಗೆ ಕಳುಹಿಸಲು. ರಾಜಕೀಯ ಅಜೆಂಡಾದ ಹೆಸರಿನಲ್ಲಿ ಈ ಸಂಪೂರ್ಣ ವರದಿಯನ್ನು ನಿರ್ಲಕ್ಷಿಸಿದ ಮೋದಿ ಸರ್ಕಾರವು ಎರಡನೇ ಸುತ್ತಿನಲ್ಲಿ ವೈಯಕ್ತಿಕ ನಿಯಮಗಳನ್ನು ಸುಧಾರಿಸಲು ಯಾವುದೇ ಪ್ರಯತ್ನವನ್ನು ಮಾಡಲಿಲ್ಲ. ಬದಲಾಗಿ, 21 ನೇ ಕಾನೂನು ಆಯೋಗವು ತಿರಸ್ಕರಿಸಿದ ಏಕರೂಪ ನಾಗರಿಕ ಸಂಹಿತೆಯ ಅನುಷ್ಠಾನವನ್ನು ಪರಿಶೀಲಿಸಲು ನ್ಯಾಯಮೂರ್ತಿ ರಿತುರಾಜ್ ಅವಸ್ತಿ ಅವರ ಅಧ್ಯಕ್ಷತೆಯಲ್ಲಿ 22 ನೇ ಆಯೋಗವನ್ನು ನೇಮಿಸಲಾಯಿತು. ಕೇಂದ್ರ ಸರ್ಕಾರದ ಉದ್ದೇಶ ಚುನಾವಣೆ ಗುರಿಯಾಗಿಟ್ಟುಕೊಂಡಿರುವ ಸಾಮಾಜಿಕ ವಿಭಜನೆಯೇ ಹೊರತು ಮಹಿಳೆಯರ ಹಕ್ಕುಗಳಲ್ಲ ಎಂಬುದು ಸ್ಪಷ್ಟ. ಮಹಿಳಾ ಮೀಸಲಾತಿ ಮಸೂದೆ, ಮರ್ಯಾದಾ ಹತ್ಯೆಗಳ ವಿರುದ್ಧದ ಮಸೂದೆ ಮತ್ತು ವೈವಾಹಿಕ ಅತ್ಯಾಚಾರವನ್ನು ಅಪರಾಧ ಮಾಡುವ ಮಸೂದೆಯನ್ನು ಸರ್ಕಾರ ಮುಚ್ಚಿಟ್ಟಿದೆ ಎಂಬುದನ್ನು ಸಹ ನೆನಪಿಸಿಕೊಳ್ಳಬೇಕು.

ಬುಡಕಟ್ಟು ಜನಾಂಗದವರಿಗೆ ಕಾನೂನು ವ್ಯವಸ್ಥೆ

ಏಕರೂಪ ನಾಗರಿಕ ಸಂಹಿತೆಯನ್ನು ವಿರೋಧಿಸುವವರು ತುಷ್ಟೀಕರಣ ರಾಜಕಾರಣದ ಪ್ರತಿಪಾದಕರು ಎಂದು ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ ಭೋಪಾಲ್‌ನಲ್ಲಿ ಹೇಳಿದ್ದರು. 'ಒಂದು ಕುಟುಂಬದ ಇಬ್ಬರು ಸದಸ್ಯರು ವಿಭಿನ್ನ ನಿಯಮಗಳನ್ನು ಹೊಂದಿದ್ದರೆ, ಕುಟುಂಬವು ಹೇಗೆ ಮುಂದುವರಿಯುತ್ತದೆ? ಈ 'ವಿಭಿನ್ನ ಸಂಪ್ರದಾಯ'ದಲ್ಲಿ ದೇಶ ಹೇಗೆ ಮುಂದುವರಿಯುತ್ತದೆ ಎಂಬ ಪ್ರಶ್ನೆ ಎದುರಾಗಿತ್ತು.

ಪುಟ 10 ಕ್ಕೆ

ಸಂದರ್ಶನ: ಜನಶಕ್ತಿ ಮೀಡಿಯಾ

ಸರ್ಕಾರ ಮತ್ತು ಪ್ರಭುತ್ವದ ಅಧಿಕಾರವನ್ನು ಬಿಜೆಪಿ ಹಿಡಿತದಿಂದ ಬಿಡಿಸಿಕೊಳ್ಳಬೇಕಿದೆ. ಇದಕ್ಕೆ 26 ಪಕ್ಷಗಳು ಸಹಕರಿಸುವ ಇಂಗಿತವನ್ನು ವ್ಯಕ್ತಪಡಿಸಿವೆ. ಇದೊಂದು ದೊಡ್ಡ ರಾಜಕೀಯ ಪ್ರಾಮುಖ್ಯತೆಯಾಗಿದೆ. ಬಿಜೆಪಿ ಆಡಳಿತವು, ಭಾರತೀಯ ಗಣರಾಜ್ಯದ ಪ್ರಮುಖ ಸ್ವರೂಪವಾದ ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯ ಮತ್ತು ಸಾಂವಿಧಾನಿಕ ವ್ಯವಸ್ಥೆಯ ಮೇಲೆ ದಾಳಿಗಳನ್ನು ನಡೆಸುತ್ತಿದೆ. ಇದನ್ನು 26 ಪಕ್ಷಗಳು ಅರಿತುಕೊಂಡಿರುವುದರಿಂದ ಇದೊಂದು ಪ್ರಮುಖ ಬೆಳವಣಿಗೆಯಾಗಿದೆ.

ಬಿಜೆಪಿಯನ್ನು ಅಧಿಕಾರದಿಂದ ಹೊರಹಾಕುವುದು ನಮ್ಮ ಮೊದಲ ಆದ್ಯತೆ: ಸೀತಾರಾಂ ಯೆಚೂರಿ

ಜುಲೈ 18, 2023 ರಂದು ಬೆಂಗಳೂರಿನಲ್ಲಿ ಬಿಜೆಪಿಯನ್ನು ವಿರೋಧಿಸುವ 26 ರಾಜಕೀಯ ಪಕ್ಷಗಳ ಸಮಾವೇಶ ನಡೆಯಿತು. ಈ ಸಮಾವೇಶ ಕುರಿತು ಸಿಪಿಐ(ಎಂ) ನ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರೊಂದಿಗೆ 'ಜನಶಕ್ತಿ ಮೀಡಿಯಾ' ನಡಸಿದ ಸಂದರ್ಶನದ ಪ್ರಮುಖ ಅಂಶಗಳು ಇಲ್ಲಿವೆ.

ಜನಶಕ್ತಿ: 2024 ರ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು 26 ರಾಜಕೀಯ ಪಕ್ಷಗಳು ಬೆಂಗಳೂರಿನಲ್ಲಿ ಸಭೆ ಸೇರಿದ್ದವು. ನಿಮ್ಮ ಪ್ರಕಾರ ಈ ಸಭೆಯ ಪ್ರಾಮುಖ್ಯತೆ ಏನು?

ಯೆಚೂರಿ: ಸರ್ಕಾರ ಮತ್ತು ಪ್ರಭುತ್ವದ ಅಧಿಕಾರವನ್ನು ಬಿಜೆಪಿ ಹಿಡಿತದಿಂದ ಬಿಡಿಸಿಕೊಳ್ಳಬೇಕಿದೆ. ಇದಕ್ಕೆ 26 ಪಕ್ಷಗಳು ಸಹಕರಿಸುವ ಇಂಗಿತವನ್ನು ವ್ಯಕ್ತಪಡಿಸಿವೆ. ಇದೊಂದು ದೊಡ್ಡ ರಾಜಕೀಯ ಪ್ರಾಮುಖ್ಯತೆಯಾಗಿದೆ. ಬಿಜೆಪಿ ಆಡಳಿತವು, ಭಾರತೀಯ ಗಣರಾಜ್ಯದ ಪ್ರಮುಖ ಸ್ವರೂಪವಾದ ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯ ಮತ್ತು ಸಾಂವಿಧಾನಿಕ ವ್ಯವಸ್ಥೆಯ ಮೇಲೆ ದಾಳಿಗಳನ್ನು ನಡೆಸುತ್ತಿದೆ. ಇದನ್ನು 26 ಪಕ್ಷಗಳು ಅರಿತುಕೊಂಡಿರುವುದರಿಂದ ಇದೊಂದು ಪ್ರಮುಖ ಬೆಳವಣಿಗೆಯಾಗಿದೆ. ಗಣರಾಜ್ಯದ ಸ್ವರೂಪ, ದೇಶ ಮತ್ತು ಜನತೆಯನ್ನು ಉಳಿಸಬೇಕು ಎಂಬುದನ್ನು ಇವರು ಅರಿತುಕೊಂಡಿದ್ದಾರೆ.

ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಯಾವ ಅಂಶಗಳು ಇರಬೇಕು ಮತ್ತು ಅದಕ್ಕಾಗಿ ಎಷ್ಟು ಒತ್ತಡವನ್ನು ಬೀರಬಹುದು ಎಂಬುದು ನಮ್ಮ ಶಕ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ಉದಾಹರಣೆಗೆ, ಯುಪಿಎ ಒಂದರಲ್ಲಿ ನಾವು ಮಾಹಿತಿ ಹಕ್ಕು, ಗ್ರಾಮೀಣ ಉದ್ಯೋಗ ಖಾತ್ರಿ ಹಕ್ಕು, ಶಿಕ್ಷಣದ ಹಕ್ಕು, ಆಹಾರ ಭದ್ರತೆಯ ಹಕ್ಕು, ಈ ಎಲ್ಲಾ ಹಕ್ಕುಗಳನ್ನು ಖಾತ್ರಿ ಮಾಡಿದಾಗ, ಎಡಪಕ್ಷಗಳು 61 ಸಂಸತ್ ಸದಸ್ಯರನ್ನು ಹೊಂದಿದ್ದೆವು. ಅಂದು ನಾವಿಲ್ಲದೇ ಸರ್ಕಾರ ರಚನೆ ಸಾಧ್ಯವಿಲ್ಲ ಎಂಬ ಸ್ಥಿತಿ ಇತ್ತು. ಆದ್ದರಿಂದ ಇದೆಲ್ಲಾ ಆ ಸಮಯದಲ್ಲಿನ ಶಕ್ತಿಗಳ ಪರಸ್ಪರ ಸಂಬಂಧವನ್ನು ಅವಲಂಬಿಸಿರುತ್ತದೆ.

ಜನಶಕ್ತಿ: ಈ ಮೈತ್ರಿಗೆ ಇಟ್ಟಿರುವ ಹೆಸರು ಅತ್ಯಂತ ಆಸಕ್ತಿದಾಯಕ ಸಂಗತಿಯಾಗಿದೆ. –ಭಾರತೀಯ ರಾಷ್ಟ್ರೀಯ ಅಭಿವೃದ್ಧಿ ಒಳಗೊಂಡ ಮೈತ್ರಿ ಅಥವಾ I.N.D.I.A. – ಇದರ ಹಿಂದಿನ ಕಥೆ ಏನು?

ಯೆಚೂರಿ: ನಾವು ತಿಳಿದಿರುವಂತೆ ನಾವಿಂದು ಭಾರತವನ್ನು ಉಳಿಸಬೇಕಾಗಿದೆ. ನಮ್ಮ ಪಕ್ಷದ ಪರವಾಗಿ V4India (ವಿ ಫಾರ್ ಇಂಡಿಯಾ) ಎಂಬ ಹೆಸರನ್ನು ನಾನು ಸೂಚಿಸಿದೆ. I.N.D.I.A. ವನ್ನು ವಿಸ್ತರಿಸಲು ಒಂದು ಸಲಹೆ ಬಂತು. ಪ್ರತಿ ಅಕ್ಷರ ಏನು ಪ್ರತಿನಿಧಿಸಬೇಕು ಎಂಬ ಚರ್ಚೆಗಳ ಮೂಲಕ ನಾವು ಅಂತಿಮ ಹೆಸರನ್ನು ಇಟ್ಟಿದ್ದೇವೆ. ಮೋದಿ ಸರ್ಕಾರವು ನಡೆಸುತ್ತಿರುವ ದಾಳಿಯಿಂದ ಭಾರತವನ್ನು ರಕ್ಷಿಸಬೇಕಾಗಿದೆ ಎಂಬುದೇ ಇದರ ಹಿಂದಿರುವ ಸಂಪೂರ್ಣ ಉದ್ದೇಶ.

ಜನಶಕ್ತಿ: ಈ ಮೈತ್ರಿಯ ವಿಷಯಕ್ಕೆ ಬಂದಾಗ, ಇದು ಜನರು ತಮ್ಮ ಬದುಕಿಗೆ ಸಂಭಂದಿಸಿದಂತೆ ಪ್ರಸ್ತುತ ಎದುರಿಸುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯ ಸಮಸ್ಯೆಗಳನ್ನು ಆಧರಿಸಿರಬೇಕು ಎಂದು ನಿಮಗೆ ಅನಿಸುವುದಿಲ್ಲವೇ?

ಯೆಚೂರಿ: ವಾಸ್ತವವಾಗಿ ಇದು ಆ ಅರ್ಥದಲ್ಲಿನ ಮೈತ್ರಿಯಲ್ಲ. ಒಂದು ನಿರ್ದಿಷ್ಟ ಉದ್ದೇಶವನ್ನು ಸಾಧಿಸಲು ನಾವೆಲ್ಲರೂ ಸಹಕರಿಸುತ್ತೇವೆ ಎಂದು ಈ ಪಕ್ಷಗಳು ಒಟ್ಟಾಗಿ ಬರುತ್ತಿವೆ. ಒಂದು ನಿರ್ದಿಷ್ಟ ಕಾರ್ಯಕ್ರಮದ ಆಧಾರದ ಮೇಲೆ ಮೈತ್ರಿ ಮಾಡಿಕೊಳ್ಳಬೇಕು ನಿಜ. ಅದು ಅಗತ್ಯವಿದ್ದರೆ ನಂತರದ ಪ್ರಯತ್ನವಾಗಿದೆ. ಇಲ್ಲಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ರೂಪಿಸಬೇಕು ಎಂಬ ಸಲಹೆ ಇತ್ತು. ಈಗಲೇ ಅದನ್ನು ರೂಪಿಸಲು ನಾವು ಒಪ್ಪುವುದಿಲ್ಲ. ಒಂದು ಸರ್ಕಾರ ರಚಿಸಿದಾಗ ಮಾತ್ರ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಜಾರಿಗೆ ತರಲು ಅಧಿಕಾರವಿದೆ ಎಂದು ನಾವು ಹೇಳಿದ್ದೇವೆ. ತಕ್ಷಣಕ್ಕೆ ನಾವು, ರಾಜ್ಯ ಸರ್ಕಾರಗಳ ಹಕ್ಕುಗಳ ಮೇಲಿನ ಘೋರ ಹಸ್ತಕ್ಷೇಪ, ಸಂವಿಧಾನದ ಆಧಾರ ಸ್ತಂಭಗಳಾದ ಜಾತ್ಯತೀತತೆ, ಪ್ರಜಾಪ್ರಭುತ್ವ, ಆರ್ಥಿಕ ಸಾರ್ವಭೌಮತ್ವ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟ ತತ್ವದ ಮೇಲೆ ನಡೆಯುತ್ತಿರುವ ದಾಳಿ, ಈ ಅಂಶಗಳ ಮೇಲೆ ಸಾಮಾನ್ಯ ಅಜೆಂಡಾ (ಕಾರ್ಯಸೂಚಿ)ವನ್ನು ಮಾಡಬಹುದು. ಈ ಸಭೆಯಲ್ಲಿ ಈ ಎಲ್ಲಾ ಅಂಶಗಳನ್ನು ಖಂಡಿಸಿ ಹೇಳಿಕೆಯನ್ನು ಸಿದ್ಧ ಪಡಿಸಲಾಗಿದೆ. ಇದೂ ಅಲ್ಲದೆ, ಕೋಮು ಧ್ರುವೀಕರಣ ಮತ್ತು ಅಲ್ಪಸಂಖ್ಯಾತ ಸಮುದಾಯಗಳನ್ನು ಗುರಿಯಾಗಿಸಿರುವುದು, ಈ ಎಲ್ಲಾ ವಿಷಯಗಳನ್ನು ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಗುರುತಿಸಲಾಗಿದೆ. ಈ ಕೆಲವು ಸಮಸ್ಯೆಗಳ ಕುರಿತು ತಕ್ಷಣದ ಕಾಳಜಿಯನ್ನು ತೋರಿಸಲಾಗಿದೆ.



ಜನಶಕ್ತಿ: ಈ ಕಾರ್ಯಸೂಚಿಯನ್ನು ರೂಪಿಸುವಾಗ, ಎಡ ಶಕ್ತಿಗಳ ಮತ್ತು ವಿಶೇಷವಾಗಿ CPIM ನ ಪಾತ್ರ ಏನಿರುತ್ತದೆ?

ಯೆಚೂರಿ: ಜನರ ಸಮಸ್ಯೆಗಳನ್ನು ಮುನ್ನೆಲೆಗೆ ತರುವಲ್ಲಿ ಎಡಪಕ್ಷಗಳ ಪಾತ್ರವಿದೆ. ವಾಸ್ತವವಾಗಿ ನಮ್ಮ ಮಧ್ಯಪ್ರವೇಶದಿಂದಾಗಿಯೇ ನಿರುದ್ಯೋಗ, ಬೆಲೆ ಏರಿಕೆ, ಜನರ ಬದುಕಿಗೆ ಸಂಭಂದಿಸಿದ ವಿಷಯಗಳು, ರೈತರ ಸಮಸ್ಯೆಗಳು, ಕಾರ್ಮಿಕರ ಸಮಸ್ಯೆಗಳ ಸಂಪೂರ್ಣ ಪ್ರಶ್ನೆಯನ್ನು ಮುನ್ನೆಲೆಗೆ ತಂದಿತು. ಹಾಗಾಗಿ ದೇಶದ ಜನತೆಗೆ ಉತ್ತಮ ಬದುಕನ್ನು ನಿರ್ಮಿಸಲು ನಾವು ಬದ್ಧರಾಗಿದ್ದೇವೆ ಎಂದು ಹೇಳಿಕೆಯಲ್ಲಿ ಸೇರಿಸುವ ಮೂಲಕ, ಆ ಎಲ್ಲಾ ಸಮಸ್ಯೆಗಳನ್ನು ಸಹ ಸೇರಿಸಲಾಗಿದೆ.

ಜನಶಕ್ತಿ: ಇತ್ತೀಚಿನ ದಿನಗಳಲ್ಲಿ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಸೇರಿದಂತೆ ವಿವಿಧ ವರ್ಗಗಳ ಜನರಿಂದ ಸಾಕಷ್ಟು ಆಂದೋಲನಗಳನ್ನು ನಾವು ನೋಡಿದ್ದೇವೆ. ಈ ಸಮಸ್ಯೆಗಳು ಸಹಾ ಅಜೆಂಡಾವನ್ನು ರೂಪಿಸುವಲ್ಲಿ ಭಾರಿ ಪರಿಣಾಮ ಬೀರುತ್ತವೆ ಎಂದು ನೀವು ಭಾವಿಸುತ್ತೀರಾ? ನಂತರ ಸಾಧ್ಯವಾದರೆ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ರೂಪಿಸುವಲ್ಲಿ ಸಹ?

ಯೆಚೂರಿ: ಖಂಡಿತಾ. ಮೋದಿಯವರು ರೈತರಿಗೆ ನೀಡಿದ್ದ ಭರವಸೆಗಳಲ್ಲಿ ಹಲವು ಭರವಸೆಗಳು ಈಡೇರಿಲ್ಲ. ಕನಿಷ್ಠ ಬೆಂಬಲ ಬೆಲೆ (MSP) ಯಂತಹ ಹಲವು ಭರವಸೆಗಳನ್ನು ಜಾರಿಗೆ ತರಲಿಲ್ಲ. ಇವುಗಳ ಜಾರಿಗಾಗಿ ನಾವು ಒತ್ತಾಯಿಸುತ್ತೇವೆ. ಈ ವಿಷಯಗಳು ಖಂಡಿತವಾಗಿಯೂ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಮತ್ತು ಅಜೆಂಡಾದಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ.

ಜನಶಕ್ತಿ: ಈಗ ವಿಶೇಷವಾಗಿ ಎಡಪಂಥೀಯರ ಮೇಲೆ ಬರುತ್ತಿರುವ ಒಂದು ಟೀಕೆ ಎಂದರೆ, ಇಂದಿನ ಸಭೆಯ ಭಾಗವಾಗಿರುವ ಅನೇಕ ಪಕ್ಷಗಳು, ಆರ್ಥಿಕ ಮತ್ತು ಜನಕಲ್ಯಾಣ ಯೋಜನೆಗಳ ಕುರಿತು ಎಡ ಧೋರಣೆಗಳಿಗೆ ಸಂಪೂರ್ಣವಾಗಿ ವಿರುದ್ಧವಾದ ದೃಷ್ಟಿಕೋನವನ್ನು ಹೊಂದಿವೆ. ಈಗಿನ ಅವರ ರಾಜ್ಯ ಸರ್ಕಾರಗಳು ಸಹ ಆರ್ಥಿಕ ವಿಷಯದಲ್ಲಿ ಎಡಕ್ಕೆ ಸಂಪೂರ್ಣವಾಗಿ ವಿರುದ್ಧವಾದ ದೃಷ್ಟಿಕೋನಗಳನ್ನು ಜಾರಿಗೆ ತರುತ್ತಿದ್ದಾರೆ. ಯುಪಿಎ 2 ರ ನವ ಉದಾರೀಕರಣ ನೀತಿಗಳು, 2014 ರಲ್ಲಿ ಎನ್‌ಡಿಎ ಯ ಗೆಲುವಿನ ಪರಿಸ್ಥಿತಿಯನ್ನು ಶಕ್ತಗೊಳಿಸಿದವು ಎಂಬ ಟೀಕೆಗಳಿವೆ. ಹಾಗಾದರೆ ವಿವಿಧ ರೀತಿಯ ಈ ರಾಜಕೀಯ ಪಕ್ಷಗಳೊಂದಿಗೆ ವಿಶೇಷವಾಗಿ, ಎಡ ದೃಷ್ಟಿಕೋನದಿಂದ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ರೂಪಿಸಲು ಸಾಧ್ಯ ಎಂದು ನೀವು ಭಾವಿಸುತ್ತೀರಾ?

ಯೆಚೂರಿ: ನಿಜ, ಇದನ್ನು ಆ ಸಮಯದಲ್ಲಿ ನೋಡೋಣ. ಆ ಸಮಯದಲ್ಲಿ ಯಾವ ಪಕ್ಷಗಳು ಸರ್ಕಾರದ ಜೊತೆ ಇರುತ್ತವೆ ಎಂಬುದರ ಮೇಲೆ ಸರ್ಕಾರದ ಕಾರ್ಯಕ್ರಮದ ಸ್ವರೂಪ ನಿರ್ಧಾರವಾಗುತ್ತದೆ. ಅದರ ಮೇಲೆ ಎಷ್ಟು ಒತ್ತಡವನ್ನು ಬೀರಬಹುದು ಎಂಬುದು ನಮ್ಮ ಶಕ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ಉದಾಹರಣೆಗೆ, ಯುಪಿಎ ಒಂದರಲ್ಲಿ ನಾವು ಮಾಹಿತಿ ಹಕ್ಕು, ಗ್ರಾಮೀಣ ಉದ್ಯೋಗ ಖಾತ್ರಿ ಹಕ್ಕು, ಶಿಕ್ಷಣದ ಹಕ್ಕು, ಆಹಾರ ಭದ್ರತೆಯ ಹಕ್ಕು, ಈ ಎಲ್ಲಾ ಹಕ್ಕುಗಳನ್ನು ಖಾತ್ರಿ ಮಾಡಿದಾಗ, ಎಡಪಕ್ಷಗಳು 61 ಸಂಸತ್ ಸದಸ್ಯರನ್ನು ಹೊಂದಿದ್ದೆವು. ಅಂದು ನಾವಿಲ್ಲದೇ ಸರ್ಕಾರ ರಚನೆ ಸಾಧ್ಯವಿಲ್ಲ ಎಂಬ ಸ್ಥಿತಿ ಇತ್ತು. ಆದ್ದರಿಂದ ಇದೆಲ್ಲಾ ಆ ಸಮಯದಲ್ಲಿನ ಶಕ್ತಿಗಳ ಪರಸ್ಪರ ಸಂಬಂಧವನ್ನು ಅವಲಂಬಿಸಿರುತ್ತದೆ.

ಜನಶಕ್ತಿ: ಇನ್ನೊಂದು ಟೀಕೆ ಏನೆಂದರೆ, ಕೆಲವು ವಿಷಯಗಳಲ್ಲಿ ಪಕ್ಷಗಳ ನಡುವೆ ಸ್ಪಷ್ಟತೆ ಅಥವಾ ಒಮ್ಮತವಿಲ್ಲ, ವಿಶೇಷವಾಗಿ ಏಕರೂಪ ನಾಗರಿಕ ಸಂಹಿತೆ ಅಥವಾ ಆರ್ಟಿಕಲ್ 370 ಸಂಬಂಧಿತ ವಿಷಯಗಳು.

ಯೆಚೂರಿ: ಹೌದು. ಹಲವು ವಿಷಯಗಳಲ್ಲಿ ನೂರಕ್ಕೆ ನೂರು ಒಮ್ಮತಗಳು ಇರುವುದಿಲ್ಲ. ಅನೇಕ ವಿಷಯಗಳ ಬಗ್ಗೆ ಸ್ಪಷ್ಟತೆ ಇಲ್ಲ. ಆದರೆ ನಾವು ಈಗಿನ ಪರಿಸ್ಥಿತಿಯಿಂದ ಹೊರಬರಬೇಕಾಗಿದೆ. ಇಂದು ನಮ್ಮ ಆದ್ಯತೆ ಯಾವುದು? ಸಿಪಿಐಎಂ ನ ಮಹಾಧಿವೇಶನದ ರಾಜಕೀಯ ನಿರ್ಣಯದ ಪ್ರಕಾರ ಇಂದಿನ ಆದ್ಯತೆಯೆಂದರೆ, ಬಿಜೆಪಿಯನ್ನು ಅಧಿಕಾರದಿಂದ ಹೊರಹಾಕುವುದು, ಅವರನ್ನು ಸರ್ಕಾರ ಮತ್ತು ಪ್ರಭುತ್ವದ ಹಿಡಿತದಿಂದ ಬೇರ್ಪಡಿಸುವುದು. ಇದು ನಮ್ಮ ಮೊದಲ ಮತ್ತು ಪ್ರಮುಖ ಕೆಲಸ. ಸೆಕ್ಯುಲರ್ ಡೆಮಾಕ್ರಟಿಕ್ ರಿಪಬ್ಲಿಕ್ ಅನ್ನು ತಮ್ಮ ಫ್ಯಾಸಿಸ್ಟ್ ಹಿಂದೂ ರಾಷ್ಟ್ರವನ್ನಾಗಿ ಪರಿವರ್ತಿಸಲು ಬಿಜೆಪಿಯವರು ಪ್ರಯತ್ನಿಸುತ್ತಿದ್ದಾರೆ. ಅದನ್ನು ತಡೆಯುವುದೇ ನಮಗಿರುವ ಮುಖ್ಯ ಅಜೆಂಡಾ. ವಿವಾದದ ಅನೇಕ ಸಮಸ್ಯೆಗಳು ಮುಂದುವರಿಯುತ್ತದೆ. ನಮ್ಮ ದೃಷ್ಟಿಕೋನದಿಂದ ನಾವು ಅವುಗಳಿಗಾಗಿ ಹೋರಾಡುವುದನ್ನು ಮುಂದುವರಿಸುತ್ತೇವೆ. ನಮ್ಮನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಬಿಜೆಪಿ ಸರ್ಕಾರದಿಂದ ಬೇರ್ಪಡುವುದನ್ನು ಖಚಿತಪಡಿಸಿಕೊಳ್ಳುವುದು ಇಂದಿನ ಆದ್ಯತೆಯಾಗಿದೆ.

ಸೀಟು ಹಂಚಿಕೆ ಮತ್ತು ಚುನಾವಣಾ ಹೊಂದಾಣಿಕೆಯ ವಿಷಯಗಳನ್ನು ರಾಜ್ಯ ಮಟ್ಟದಲ್ಲಿ ಮಾತ್ರ ನಿರ್ಧರಿಸಬಹುದು ಎಂದು ವಿರೋಧ ಪಕ್ಷಗಳ ಸಭೆಯಲ್ಲಿ ನಿರ್ಧರಿಸಲಾಯಿತು. ಇದನ್ನೇ ನಮ್ಮ ಪಕ್ಷ ಪ್ರತಿಪಾದಿಸುತ್ತಿದ್ದು, ಇದು ಸರಿಯಾದ ವಿಧಾನವಾಗಿದೆ. ಹಾಗಾಗಿ ಈಗ ರಾಜ್ಯ ಮಟ್ಟದಲ್ಲಿ ಈ ಪ್ರಕ್ರಿಯೆ ಆರಂಭವಾಗಲಿದೆ.

ಜನಶಕ್ತಿ: ಬಿಜೆಪಿ ವಿರುದ್ಧ ಸೀಟು ಹಂಚಿಕೆ ಅಥವಾ ಸಾಮಾನ್ಯ ಅಭ್ಯರ್ಥಿ ಬಗ್ಗೆ ಏನಾದರೂ ಚರ್ಚೆ ನಡೆದಿದೆಯೇ?

ಯೆಚೂರಿ: ಬಿಜೆಪಿ ವಿರುದ್ಧ ಒಬ್ಬರೇ ವಿರೋಧಿ ಅಭ್ಯರ್ಥಿಯಿರಬೇಕು ಎಂಬ ಆಸೆ ಇದೆ. ಆದರೆ ವಿವಿಧ ರಾಜ್ಯಗಳ ಪರಿಸ್ಥಿತಿ ವಿಭಿನ್ನವಾಗಿರುವ ಕಾರಣ ಅದು ಕಾರ್ಯರೂಪಕ್ಕೆ ಬರುವುದಿಲ್ಲ ಎಂದು ಎಲ್ಲರಿಗೂ ತಿಳಿದಿದೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ನಮ್ಮ ಎಲ್‌ಡಿಎಫ್ ನಡುವೆ ನೇರ ಸ್ಪರ್ಧೆ ಇದೆ. ಇಂತಹ ಪರಿಸ್ಥಿತಿಯಿಂದಾಗಿ ➚





ಬಿಜೆಪಿಗೆ ಒಬ್ಬ ಶಾಸಕರೂ ಆಯ್ಕೆಯಾಗುವುದಿಲ್ಲ. ಬಂಗಾಳದ ಪರಿಸ್ಥಿತಿಯಲ್ಲಿ ಎಡಪಕ್ಷಗಳ ಜೊತೆಗೆ ಕಾಂಗ್ರೆಸ್ ಮತ್ತು ಜಾತ್ಯತೀತ ಶಕ್ತಿಗಳು ಬಿಜೆಪಿ ಮತ್ತು ಟಿಎಂಸಿ ವಿರುದ್ಧ ಅಣಿ ನೆರೆದಿವೆ ಮತ್ತು ಆ ಎರಡೂ ಪಕ್ಷಗಳನ್ನು ಸೋಲಿಸಲು ಹವಣಿಸುತ್ತಿವೆ. ಇನ್ನೂ ಕೆಲವು ರಾಜ್ಯಗಳಲ್ಲಿ (ತಮಿಳುನಾಡಿನ ಕೂಟ, ಮಹಾರಾಷ್ಟ್ರದಲ್ಲಿ ಮಹಾರಾಷ್ಟ್ರ ವಿಕಾಸ್ ಅಘಾಡಿ ಮತ್ತು ಬಿಹಾರದಲ್ಲಿ ಮಹಾ ಘಟಬಂಧನ್, ಇತ್ಯಾದಿ) ಸಂಪೂರ್ಣ ಒಪ್ಪಂದವಿದೆ. ತೆಲಂಗಾಣ, ಒಡಿಶಾ, ಆಂಧ್ರಪ್ರದೇಶದಂತಹ ಕೆಲವು ರಾಜ್ಯಗಳಲ್ಲಿ ಪರಿಸ್ಥಿತಿ ತುಂಬಾ ಅನಿಶ್ಚಿತವಾಗಿದೆ. ಹಾಗಾಗಿ ಸೀಟು ಹಂಚಿಕೆ ಮತ್ತು ಚುನಾವಣಾ ಹೊಂದಾಣಿಕೆಯ ವಿಷಯಗಳನ್ನು ರಾಜ್ಯ ಮಟ್ಟದಲ್ಲಿ ಮಾತ್ರ ನಿರ್ಧರಿಸಬಹುದು ಎಂದು ವಿರೋಧ ಪಕ್ಷಗಳ ಸಭೆಯಲ್ಲಿ ನಿರ್ಧರಿಸಲಾಯಿತು. ಇದನ್ನೇ ನಮ್ಮ ಪಕ್ಷ ಪ್ರತಿಪಾದಿಸುತ್ತಿದ್ದು, ಇದು ಸರಿಯಾದ ವಿಧಾನವಾಗಿದೆ. ಹಾಗಾಗಿ ಈಗ ರಾಜ್ಯ ಮಟ್ಟದಲ್ಲಿ ಈ ಪ್ರಕ್ರಿಯೆ ಆರಂಭವಾಗಲಿದೆ.

ಜನಶಕ್ತಿ: ಹಾಗಾದರೆ ಕೇರಳ, ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿ 'ಮಿತ್ರರ ನಡುವೆ ಸ್ಪರ್ಧೆ' ಗಳ ಸಾಧ್ಯತೆಯನ್ನು ನಿರೀಕ್ಷಿಸಬಹುದೇ?

ಯೆಚೂರಿ: ಹೌದು. ಆದರೆ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಸ್ಪರ್ಧೆಯು ಮಿತ್ರರ ನಡುವಿನ ಸ್ಪರ್ಧೆಯಾಗಿರುವುದಿಲ್ಲ, ಇದು ಸಾಕಷ್ಟು ಕಹಿಯಾಗಿರಬಹುದು. ಪಶ್ಚಿಮ ಬಂಗಾಳದಲ್ಲಿ ಇತ್ತೀಚಿನ ಪಂಚಾಯತ್ ಚುನಾವಣೆಗಳಲ್ಲಿ ಟಿಎಂಸಿಯಿಂದಾದ ಹಿಂಸಾಚಾರದಲ್ಲಿ ಅನೇಕರ ಜೀವಹಾನಿಯಾಗಿದೆ. ಟಿಎಂಸಿ ಯ ಇಂತಹ ದಮನವನ್ನು ವಿರೋಧಿಸಲಾಗುವುದು ಮತ್ತು ಅದರ ವಿರುದ್ಧ ಹೋರಾಡಲಾಗುವುದು.

ಜನಶಕ್ತಿ: ಈ ಸಭೆ ಪರಿವಾರದ ಹಿತಾಸಕ್ತಿ ಕಾಪಾಡಲು, ಕುಟುಂಬದ ಹಿತಾಸಕ್ತಿ ಕಾಪಾಡಲು ಎಂದು ಮೋದಿ ಅವರು ಹೇಳಿಕೆ ನೀಡಿದ್ದು, ತಮಗೆ ಹೆಚ್ಚಿನ ಸಂಖ್ಯಾಬಲವಿದೆ ಎಂದು ತೋರಿಸಲು 38 ಪಕ್ಷಗಳ ಎನ್ ಡಿಎ ಸಭೆಯನ್ನೂ ಕರೆದಿದ್ದಾರೆ. ಅದರ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ಯೆಚೂರಿ: ಮೊದಲ ಅಂಶವೆಂದರೆ NDA ಈಗ ಪುನರುತ್ಥಾನಗೊಂಡಿದೆ. ಒಂಬತ್ತು ವರ್ಷಗಳ ಕಾಲ ಎನ್‌ಡಿಎ ಇರಲಿಲ್ಲ. ಬಿಜೆಪಿಯವರು ತಮಗೆ ಬಹುಮತ ಸಿಕ್ಕಿದೆ ಎಂಬ ದುರಹಂಕಾರದಲ್ಲಿದ್ದರು. ಎನ್‌ಡಿಎಯನ್ನು ಪುನರುತ್ಥಾನಗೊಳಿಸಲು ಅವರು ಒತ್ತಾಯಿಸಲ್ಪಟ್ಟಿದ್ದಾರೆ ಎಂಬುದು ವಾಸ್ತವ. ಅದು ನಿಜವಾಗಿ ನಮ್ಮ ಗೆಲುವು. ಅವರಿಗೆ ಹಿನ್ನಡೆಯಾಗುತ್ತಿದೆ ಎಂಬುದನ್ನು ಇದು ತೋರಿಸುತ್ತದೆ. 'ನಮಗೂ ಮಿತ್ರರು ಇದ್ದಾರೆ' ಎಂಬುದನ್ನು ಜನತೆಗೆ ತೋರಿಸಬೇಕು ಎಂದು ಅವರಿಗೆ ಈಗ ಅನಿಸಿದೆ. ಈ ಮಿತ್ರಪಕ್ಷಗಳು ಯಾವುವು? ಇವುಗಳಲ್ಲಿ ಎಷ್ಟು ಪಕ್ಷಗಳು ಎಲ್ಲಿಯಾದರೂ ಪ್ರಾತಿನಿಧ್ಯವನ್ನು ಹೊಂದಿವೆಯೇ? ಇವುಗಳಲ್ಲಿ ಹೆಚ್ಚಿನ ಪಕ್ಷಗಳು ಈಶಾನ್ಯ ರಾಜ್ಯಗಳ ಸಣ್ಣ ಪಕ್ಷಗಳು. ಆದರೆ ಅವರ ಸಾಂಪ್ರದಾಯಿಕ ಮಿತ್ರಪಕ್ಷಗಳಾದ ಶಿವಸೇನೆ, ಅಕಾಲಿದಳ ಎಲ್ಲರೂ ಎನ್ ಡಿಎ ಅನ್ನು ಬಿಟ್ಟು ದೂರವಾಗಿದ್ದಾರೆ. ಆದ್ದರಿಂದ ಅವರು ತಾವು ಒಬ್ಬಂಟಿಯಾಗಿಲ್ಲ ಎಂದು ತೋರಿಸಲು ಮುಂದಾಗುವ ಮೂಲಕ ತಾವು ಹತಾಶರಾಗಿದ್ದೇವೆ ಒಪ್ಪಿಕೊಂಡಂತ್ತಾಗಿದೆ. ವಾಸ್ತವವಾಗಿ ಇದು ಪ್ರತಿಪಕ್ಷಗಳ ಗೆಲುವು. ನಾವು ಇದನ್ನು ಆರಂಭಿಕ ಗೆಲುವು ಎಂದು ಪರಿಗಣಿಸುತ್ತೇವೆ. ನಮಗೆ ಸಂಪೂರ್ಣ ಬಹುಮತವಿದೆ, ಹಾಗಾಗಿ ಯಾರೂ ನಮ್ಮನ್ನು ಮುಟ್ಟಲು ಸಾಧ್ಯವಿಲ್ಲ ಎಂದು ಬಿಜೆಪಿ ಈ ಹಿಂದೆ ಹೇಳುತ್ತಿತ್ತು. ಅದು ಬದಲಾಗಿದೆ. ಅದು ಮೊದಲನೆಯದು. ಎರಡನೆಯದು ಈ ಕುಟುಂಬ ರಾಜಕೀಯಕ್ಕೆ ಸಂಬಂಧಿಸಿದಂತೆ, ಪ್ರಧಾನಿಯವರು ಬಿಜೆಪಿಯೊಳಗೆ ಎಷ್ಟು ನಾಯಕರು ಮತ್ತು ಅವರ ಮಕ್ಕಳು ವಾಸ್ತವವಾಗಿ ಬಡ್ತಿ ಪಡೆಯುತ್ತಿದ್ದಾರೆ ಮತ್ತು ವಿವಿಧ ಜಾಗಗಳನ್ನು ಆಕ್ರಮಿಸಿಕೊಂಡಿದ್ದಾರೆ ಎಂಬುದನ್ನು ನೋಡಬೇಕು.

ಜನಶಕ್ತಿ: ಪ್ರಸ್ತುತ ಭಾರತೀಯ ರಾಜಕೀಯದಲ್ಲಿ ನಾವು ಗಮನಿಸಬಹುದಾದ ಒಂದು ವೈಶಿಷ್ಟ್ಯವೆಂದರೆ, ವಿರೋಧ ಪಕ್ಷಗಳನ್ನು ನಾಶಮಾಡಲು ಅಧಿಕಾರದ ಅಸಂವಿಧಾನಿಕ ಬಳಕೆ. ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರದಿಂದ ಇಡಿ, ಸಿಬಿಐನಂತಹ

ಪುಟ 14 ಕ್ಕೆ

2024 ರ ಚುನಾವಣೆ; ಹಿಂದುತ್ವ ಭಾರತ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಭಾರತದ ನಡುವೆ ಹೋರಾಟ

ಭಾರತವು 2024ರ ಸಾರ್ವತ್ರಿಕ ಚುನಾವಣೆಯತ್ತ ವೇಗವಾಗಿ ಸಾಗುತ್ತಿದೆ. ಇದೇ ಜುಲೈ 17 ಮತ್ತು 18 ರಂದು ಬೆಂಗಳೂರಿನಲ್ಲಿ ದೇಶದ ಪ್ರಮುಖ ವಿರೋಧ ಪಕ್ಷಗಳ ಸಭೆ ನಡೆಯಿತು. ವಿರೋಧ ಪಕ್ಷಗಳ ಮೊದಲ ಸಭೆ ಜೂನ್ 23 ರಂದು ಪಾಟ್ನಾದಲ್ಲಿ ನಡೆದಿತ್ತು. ಅಂದು ಕೇವಲ 16 ಪಕ್ಷಗಳು ಸಭೆಯಲ್ಲಿ ಭಾಗವಹಿಸಿದ್ದರೆ, ಬೆಂಗಳೂರಿನಲ್ಲಿ 26 ಪಕ್ಷಗಳು, ಸುಮಾರು ಐವತ್ತು ರಾಜಕೀಯ ಮುಖಂಡರು, ಏಳು ಮುಖ್ಯಮಂತ್ರಿಗಳು ಮತ್ತು ಆರು ಮಾಜಿ ಮುಖ್ಯಮಂತ್ರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಹಲವು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಎಲ್ಲಕ್ಕಿಂತ ಮುಖ್ಯವಾಗಿ, ವಿರೋಧ ಪಕ್ಷದ ರಾಜಕೀಯ ಒಕ್ಕೂಟಕ್ಕೆ ಹೆಸರಿಡಲಾಯಿತು. ಹೊಸ ರಾಜಕೀಯ ಮೈತ್ರಿಯ ಹೆಸರು ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟ್ ಇನ್‌ಕ್ಲೂಸಿವ್ ಅಲೈಯನ್ಸ್ ಅಥವಾ 'ಇಂಡಿಯಾ' (I.N.D.I.A). ಭಾರತದ ಪರಿಕಲ್ಪನೆಯ ವಿರುದ್ಧ ಬಿಜೆಪಿ ಮತ್ತು ಹಿಂದುತ್ವ ರಾಷ್ಟ್ರೀಯವಾದಿಗಳ ದಾಳಿಯಿಂದ ದೇಶವನ್ನು ಉಳಿಸಲು ರಾಜಕೀಯ ಪಕ್ಷಗಳು ಈ ಹೆಸರನ್ನು ತಂದವು.

ಸಂವಿಧಾನದ ಮೂಲಭೂತ ತತ್ವಗಳಾದ ಜಾತ್ಯತೀತತೆ, ಪ್ರಜಾಪ್ರಭುತ್ವ, ಆರ್ಥಿಕ ಸಾರ್ವಭೌಮತ್ವ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟದ ಮೇಲೆ ದಾಳಿ ಮಾಡುತ್ತಿರುವ ಆರ್‌ಎಸ್‌ಎಸ್–ಬಿಜೆಪಿ ಮೈತ್ರಿಯಿಂದ ಭಾರತವನ್ನು ರಕ್ಷಿಸುವುದು 'ಭಾರತ' (I.N.D.I.A) ದ ಉದ್ದೇಶವಾಗಿದೆ. ಸಮಾಜದಲ್ಲಿ ದ್ವೇಷವನ್ನು ಹರಡುತ್ತಿರುವ ಸಂಘಪರಿವಾರದಿಂದ ಈ ದೇಶವನ್ನು ಮತ್ತು ದೇಶದ ಜನರನ್ನು ರಕ್ಷಿಸಲು ವಿರೋಧ ಪಕ್ಷಗಳ ಒಕ್ಕೂಟವಾದ 'ಭಾರತ' ಒಂದು ದೊಡ್ಡ ಸಂದೇಶವನ್ನು ನೀಡುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಮೋದಿ ಮತ್ತು ಎನ್‌ಡಿಎ ವಿರುದ್ಧದ ಹೋರಾಟವು ಸೈದ್ಧಾಂತಿಕ ಮೇಲ್ಮೈಯನ್ನು ಹೊಂದಿದೆ ಎಂಬುದನ್ನು ಮೈತ್ರಿಗೆ ಇಟ್ಟಿರುವ ಹೆಸರು ಸೂಚಿಸುತ್ತದೆ. ದೇಶದಲ್ಲಿ ಹಿಂದುತ್ವ ಭಾರತ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಭಾರತದ ನಡುವೆ ಹೋರಾಟ ನಡೆಯಲಿದೆ. ಭಾರತವು ಅದಾನಿಗಳು ಮತ್ತು ಅಂಬಾನಿಗಳಿಗೆ ಮಾತ್ರವಲ್ಲ, ಕಡು ಬಡವರಿಗೂ ಸೇರಿದೆ ಎಂಬ ಸಂದೇಶವನ್ನು ಈ ಹೆಸರು ಹೊಂದಿದೆ.

ಎನ್‌ಡಿಎಯಲ್ಲಿ 38 ಪಕ್ಷಗಳಿವೆ ಎಂದು ಮೋದಿ ಅವರು ಹೇಳಿದ್ದಾರೆ. ಆದಾಗ್ಯೂ, ಅನೇಕವು ಕಾಗದದ ಮೇಲಿನ ಪಕ್ಷಗಳಷ್ಟೆ. ಪ್ರಸ್ತುತ ಲೋಕಸಭೆಯಲ್ಲಿ ಎನ್‌ಡಿಎ 329 ಸಂಸದರನ್ನು ಹೊಂದಿದೆ. ಈ ಪೈಕಿ 301 ಸಂಸದರು ಬಿಜೆಪಿಗೆ ಸೇರಿದವರು. ಅಂದರೆ 37 ಪಕ್ಷಗಳು ಕೇವಲ 28 ಸಂಸದರನ್ನು ಮಾತ್ರ ಹೊಂದಿವೆ. ಈ 37 ಪಕ್ಷಗಳಲ್ಲಿ ಏಳು ಪಕ್ಷಗಳು ಲೋಕಸಭೆಗೆ ಅಭ್ಯರ್ಥಿಗಳನ್ನೂ ಕಣಕ್ಕಿಳಿಸಿಲ್ಲ. 16 ಪಕ್ಷಗಳು ಸ್ಪರ್ಧಿಸಿದ್ದರೂ ಅವುಗಳಿಗೆ ಒಂದೇ ಒಂದು ಸ್ಥಾನ ಸಿಗಲಿಲ್ಲ. ಅಂದರೆ 38 ಪಕ್ಷಗಳ ಪೈಕಿ 27 ಪಕ್ಷಗಳಿಗೆ ಲೋಕಸಭೆಯಲ್ಲಿ ಸ್ಥಾನವಿಲ್ಲ. ಶಿವಸೇನಾ ಶಿಂಧೆ ವಿಭಾಗ, ಎಲ್‌ಜೆಪಿ, ಅಪ್ನಾದಲ್ ಮತ್ತು ಈಶಾನ್ಯ ರಾಜ್ಯಗಳಲ್ಲಿ ಕೆಲವು ಪಕ್ಷಗಳು ಕೆಲವೇ ಸಂಸದರನ್ನು ಹೊಂದಿವೆ.

ಬೆಂಗಳೂರು ಸಭೆಯು ಬಿಜೆಪಿ ಮತ್ತು ಎನ್‌ಡಿಎ ವಿರುದ್ಧ ವ್ಯವಸ್ಥಿತ ರಾಜಕೀಯ ಪ್ರಚಾರವನ್ನು ಸಹ ಕಲ್ಪಿಸಿದೆ. ಅದರ ಭಾಗವಾಗಿ 11 ಸದಸ್ಯರ ಸಮನ್ವಯ ಸಮಿತಿ ರಚಿಸಿ, ಈ ಸಮಿತಿಗೆ ಸಂಚಾಲಕರನ್ನು ಆಯ್ಕೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಮುಂಬೈನಲ್ಲಿ ನಡೆಯಲಿರುವ ಮುಂದಿನ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗುವುದು.

ಮೋದಿ ಸರ್ಕಾರದ ವಿರುದ್ಧ ಅಭಿಯಾನವನ್ನು ಯೋಜಿಸಲು ದೆಹಲಿ ಮೂಲದ ಒಂದು ಸೆಕ್ರೆಟಾರಿಯೇಟ್‌ನ್ನು ಸಹ ರಚಿಸಲಾಗುವುದು. ಎಲ್ಲಾ 26 ಪಕ್ಷಗಳು ಜಂಟಿ ಹೇಳಿಕೆಯನ್ನೂ ನೀಡಿವೆ. ಅಂದರೆ ಮೊದಲ ಸಭೆಯಿಂದ ಮುಂದೆ ಸಾಗಿ ಮತ್ತಷ್ಟು ಪಕ್ಷಗಳನ್ನು ಮೈತ್ರಿಕೂಟದತ್ತ ಸೆಳೆಯುವ ಮೂಲಕ ಬೆಂಗಳೂರಿನ ಸಭೆ ಮುಕ್ತಾಯವಾಗಿದೆ. ಈ ವಿರೋಧ ಪಕ್ಷಗಳ ನಡೆಯು 2019 ರಿಂದ ದೇಶದಲ್ಲಿ ವಿಭಿನ್ನ ರಾಜಕೀಯ ಪರಿಸ್ಥಿತಿ ಹೊರಹೊಮ್ಮುತ್ತಿದೆ ಎಂಬುದನ್ನು ತೋರಿಸುತ್ತದೆ. ಅಂದರೆ ಮೋದಿ ಮತ್ತು ಬಿಜೆಪಿಗೆ ಎದುರಾಳಿಯೇ ಇಲ್ಲ ಎಂದು ಇನ್ನು ಮುಂದೆ ಪ್ರಚಾರ ಮುಂದುವರಿಸುವಂತಿಲ್ಲ. ಮೋದಿಯನ್ನು ಎದುರಿಸಲು ಜಾತ್ಯತೀತ ಪ್ರಜಾಸತ್ತಾತ್ಮಕ ಭಾರತವಿದೆ ಎಂಬ ಬಲವಾದ ಸಂದೇಶವನ್ನು ಬೆಂಗಳೂರಿನಿಂದ ನೀಡಲಾಗಿದೆ.

ಕಳೆದ ಲೋಕಸಭೆ ಚುನಾವಣೆಗಿಂತ ಭಿನ್ನವಾದ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದನ್ನು ಮೋದಿ ಮತ್ತು ಬಿಜೆಪಿ ಅರಿತುಕೊಂಡಿದೆ. ಆದ್ದರಿಂದಲೇ ವಿರೋಧ ಪಕ್ಷಗಳನ್ನು ದುರ್ಬಲಗೊಳಿಸಲು ಮತ್ತು ಅವುಗಳನ್ನು ನಾಶಮಾಡಲು ಮೋದಿ ಚುರುಕಾಗಿ ಸಾಗಿದ್ದಾರೆ. ಅದನ್ನೇ ನಾವು ಮಹಾರಾಷ್ಟ್ರದಲ್ಲಿ ನೋಡಿದ್ದೇವೆ. ಪ್ರಮುಖ ವಿರೋಧ ಪಕ್ಷದ ನಾಯಕ ಶರದ್ ಪವಾರ್ ನೇತೃತ್ವದ ಎನ್‌ಸಿಪಿ ವಿಭಜನೆಯಾಯಿತು. ಶರದ್ ಪವಾರ್ ಅವರ ಹಿರಿಯ ಸಹೋದರನ ಮಗ ಅಜಿತ್ ಪವಾರ್ ಮತ್ತು ಮಾಜಿ ಕೇಂದ್ರ ಸಚಿವ ಮತ್ತು ಎನ್‌ಸಿಪಿ ಕಾರ್ಯಾಧ್ಯಕ್ಷ ಪ್ರಫುಲ್ ಪಟೇಲ್ 30 ಶಾಸಕರನ್ನು ತಮ್ಮೊಡನೆ ಕರೆದೊಯ್ದು ಎನ್‌ಸಿಪಿಯನ್ನು ಇಬ್ಭಾಗ ಮಾಡಿದರು. ಈ ಹಿಂದೆ ಬಿಜೆಪಿಗೆ ಸಹಕರಿಸದ ಶಿವಸೇನೆಯನ್ನು ಒಡೆದು ಹಾಕಿದ ಮೋದಿ ಮತ್ತು ಅವರ ಸಂಗಡಿಗರು ಮಹಾರಾಷ್ಟ್ರದಲ್ಲಿ ಅಧಿಕಾರ ಹಿಡಿದಿದ್ದರು. ಇದೀಗ ಉದ್ಧವ್ ಠಾಕ್ರೆ ಸರ್ಕಾರದ ಜೊತೆಯಲ್ಲಿದ್ದ ಎನ್‌ಸಿಪಿಯನ್ನೂ ಒಡೆದಿದ್ದಾರೆ. ಪ್ರತಿಪಕ್ಷಗಳ ಮೈತ್ರಿಕೂಟಕ್ಕೆ ಭಾರೀ ಹೊಡೆತ ನೀಡುವುದು ಮೋದಿ ಉದ್ದೇಶವಾಗಿತ್ತು. ಆದರೆ, ಬೆಂಗಳೂರು ಸಭೆಗೆ ಶರದ್ ಪವಾರ್ ಹಾಜರಿದ್ದುದು ಬಿಜೆಪಿ ಇದರಲ್ಲಿ ಸಂಪೂರ್ಣ ಯಶಸ್ವಿಯಾಗಲಿಲ್ಲ ಎಂಬುದು ಸಾಬೀತಾಗಿದೆ. ಶರದ್ ಪವಾರ್ ಅವರ ಪಾಲ್ಗೊಳ್ಳುವಿಕೆ, ಜನಮನ್ನಣೆ ಪಡೆಯದೆ ಅಧಿಕಾರ, ಹಣ ಕೊಟ್ಟು ಅಧಿಕಾರ ಕದಿಯುವ ಬಿಜೆಪಿಯ ಪ್ರಜಾತಂತ್ರ ವಿರೋಧಿ ನಡೆಯ ವಿರುದ್ಧದ ಎಚ್ಚರಿಕೆಯೂ ಹೌದು.

ಮಹಾರಾಷ್ಟ್ರ ಮಾದರಿಯ ತಂತ್ರವನ್ನು ಬಿಹಾರದಲ್ಲೂ ಬಿಜೆಪಿ ಅಳವಡಿಸಿಕೊಂಡಿದೆ. ಪ್ರತಿಪಕ್ಷಗಳ ಒಕ್ಕೂಟಕ್ಕಾಗಿ ಕೆಲಸ ಮಾಡುತ್ತಿದ್ದ ನಿತೀಶ್ ಕುಮಾರ್ ಅವರ ಐಕ್ಯ ಜನತಾ ದಳವನ್ನು ಒಡೆಯಲು ಮೋದಿ ಮತ್ತು ಅವರ ಸಂಗಡಿಗರು ಪ್ರಯತ್ನಿಸಿದರು. ಆದರೆ, ಜೆಡಿಯು ಶಾಸಕರು ಆ ಆಮಿಷಕ್ಕೆ ಬಲಿಯಾಗಲು ಸಿದ್ಧರಿರಲಿಲ್ಲ. ಅದೇ ರೀತಿ, ಪ್ರತಿಪಕ್ಷಗಳ ಒಕ್ಕೂಟಕ್ಕೆ ಪ್ರಬಲ ಬೆಂಬಲ ನೀಡುತ್ತಿರುವ ಡಿಎಂಕೆಯನ್ನು ದುರ್ಬಲಗೊಳಿಸುವ ಉದ್ದೇಶದಿಂದ ಇ.ಡಿ. ತಮಿಳುನಾಡು ಉನ್ನತ ಶಿಕ್ಷಣ ಸಚಿವ ಕೆ. ಪೊನ್ಮುಡಿ ಅವರ ನಿವಾಸದ ಮೇಲೆ ದಾಳಿ ನಡೆಸಿ ಬೆಂಗಳೂರು ಸಭೆಗೆ ಮುನ್ನ ಅವರನ್ನು ಬಂಧಿಸಿದೆ. ಈ ಹಿಂದೆ ಮತ್ತೊಬ್ಬ ಸಚಿವರನ್ನು ಇ.ಡಿ. ಜೈಲಿಗೆ ಹಾಕಿತ್ತು. ಆದಾಗ್ಯೂ, ಇದಕ್ಕೆ ಡಿಎಂಕೆ ಹೆದರಲಿಲ್ಲ. ಡಿಎಂಕೆ ನಾಯಕ ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಅವರು ಪ್ರತಿಕ್ರಿಯೆ ನೀಡಿ, "ಇ.ಡಿ. ದಾಳಿಗಳು ಚುನಾವಣಾ ಗೆಲುವನ್ನು ಸುಲಭಗೊಳಿಸುತ್ತದೆ. ಸರ್ಕಾರಿ ಸಂಸ್ಥೆಗಳನ್ನು ಬಳಸಿಕೊಂಡು ಪ್ರತಿಪಕ್ಷಗಳ ಒಗ್ಗಟ್ಟು ಮುರಿಯುವ ಯತ್ನ ಸಂಪೂರ್ಣ ವಿಫಲವಾಗಿದೆ ಎಂಬುದನ್ನು ಬೆಂಗಳೂರಿನ ಸಭೆ ಸಾಬೀತುಪಡಿಸಿದೆ" ಎಂದಿದ್ದಾರೆ.

ಪ್ರತಿಪಕ್ಷಗಳ ಒಗ್ಗಟ್ಟು ಬಿಜೆಪಿಗೆ ಎಷ್ಟು ನಡುಕ ಹುಟ್ಟಿಸಿದೆ ಎಂಬುದನ್ನು, ಎನ್‌ಡಿಎ ಮೈತ್ರಿಕೂಟದ ಸಭೆಗೆ ಅಸ್ತಿತ್ವವೇ ಇಲ್ಲದ ಸಣ್ಣ ಪುಟ್ಟ ಪಕ್ಷಗಳನ್ನು ತನ್ನ ಜೊತೆ ಕರೆದೊಯ್ಯುವ ಅದರ ಪ್ರಯತ್ನದಿಂದ ತಿಳಿಯಬಹುದು. ಬೆಂಗಳೂರಿನಲ್ಲಿ 'ಭಾರತ' ರಚನೆಯಾದ ದಿನವೇ ದೆಹಲಿಯಲ್ಲಿ ಪ್ರಧಾನಿ ನೇತೃತ್ವದಲ್ಲಿ ಎನ್‌ಡಿಎ ಸಭೆ ನಡೆದಿತ್ತು. 1998ರಲ್ಲಿ ವಾಜಪೇಯಿ ರಚಿಸಿದ ಈ ಮೈತ್ರಿ ಕಳೆದ ಐದು ವರ್ಷಗಳಿಂದ ಸತ್ತು ಹೋಗಿತ್ತು. ಗೆಲ್ಲಲು ಮೋದಿಯವರ ವೈಯಕ್ತಿಕ ಪ್ರಭಾವವೇ ಸಾಕು ಎಂಬ ರಾಜಕೀಯ ಅಭಿಮಾನ ಬಿಜೆಪಿಗಿತ್ತು. ಆದ್ದರಿಂದಲೇ ಮೋದಿ 2019ರಲ್ಲಿ ಬಿಜೆಪಿ ಒಂದೇ ಬಹುಮತದೊಂದಿಗೆ ಅಧಿಕಾರಕ್ಕೆ ಬಂದ ನಂತರ ಎನ್‌ಡಿಎಯ ಒಂದೇ ಒಂದು ಸಭೆ ನಡೆಯಲಿಲ್ಲ. 1998ರಲ್ಲಿ ವಾಜಪೇಯಿ ಮತ್ತು ಅಡ್ವಾಣಿ ಅವರು ರಚಿಸಿದ್ದ ಮೈತ್ರಿಕೂಟಕ್ಕೆ ಈ ವರ್ಷ 25ನೇ ವರ್ಷಾಚರಣೆ. ಆಗಲೂ ಮೋದಿ ಮತ್ತು ಬಿಜೆಪಿ 25ನೇ ವರ್ಷದ ಸಮಾರಂಭ ನಡೆಸಲು ಸಿದ್ಧರಿರಲಿಲ್ಲ. ಮೇಲಾಗಿ ಎನ್ ಡಿಎಯಲ್ಲಿ ಪ್ರಮುಖ ಪಕ್ಷಗಳಾಗಿದ್ದ ಶಿವಸೇನೆ (ಉದ್ಧವ್ ಪಕ್ಷ), ಅಕಾಲಿದಳ, ಟಿಡಿಪಿ ಇತ್ಯಾದಿಗಳು ಇಂದು ಎನ್ ಡಿಎಯಲ್ಲಿಲ್ಲ. ಪ್ರತಿಪಕ್ಷಗಳ ಒಗ್ಗಟ್ಟು ಬಲಗೊಳ್ಳುವುದನ್ನು ಕಂಡು ಮೋದಿ ನಿರ್ಲಕ್ಷಿಸಲಾಗಿದ್ದ ಎನ್‌ಡಿಎ ಸಮಾವೇಶಕ್ಕೆ ಒತ್ತಾಯಿಸಿದರು. ಇದು ಪ್ರತಿಪಕ್ಷದ ಮೊದಲ ರಾಜಕೀಯ ಗೆಲುವು ಎಂದು ಪರಿಗಣಿಸಬಹುದು.

ಎನ್‌ಡಿಎಯಲ್ಲಿ 38 ಪಕ್ಷಗಳಿವೆ ಎಂದು ಮೋದಿ ಅವರು ಹೇಳಿದ್ದಾರೆ. ಆದಾಗ್ಯೂ, ಅನೇಕವು ಕಾಗದದ ಮೇಲಿನ ಪಕ್ಷಗಳಷ್ಟೆ. ಪ್ರಸ್ತುತ ಲೋಕಸಭೆಯಲ್ಲಿ ಎನ್‌ಡಿಎ 329 ಸಂಸದರನ್ನು ಹೊಂದಿದೆ. ಈ ಪೈಕಿ 301 ಸಂಸದರು ಬಿಜೆಪಿಗೆ ಸೇರಿದವರು. ಅಂದರೆ 37 ಪಕ್ಷಗಳು ಕೇವಲ 28 ಸಂಸದರನ್ನು ಮಾತ್ರ ಹೊಂದಿವೆ. ಈ 37 ಪಕ್ಷಗಳಲ್ಲಿ ಏಳು ಪಕ್ಷಗಳು ಲೋಕಸಭೆಗೆ ಅಭ್ಯರ್ಥಿಗಳನ್ನೂ ಕಣಕ್ಕಿಳಿಸಿಲ್ಲ. 16 ಪಕ್ಷಗಳು ಸ್ಪರ್ಧಿಸಿದ್ದರೂ ಅವುಗಳಿಗೆ ಒಂದೇ ಒಂದು ಸ್ಥಾನ ಸಿಗಲಿಲ್ಲ. ಅಂದರೆ 38 ಪಕ್ಷಗಳ ಪೈಕಿ 27 ಪಕ್ಷಗಳಿಗೆ ಲೋಕಸಭೆಯಲ್ಲಿ ಸ್ಥಾನವಿಲ್ಲ. ಶಿವಸೇನಾ ಶಿಂಧೆ ವಿಭಾಗ, ಎಲ್‌ಜೆಪಿ, ಅಪ್ನಾದಲ್ ಮತ್ತು ಈಶಾನ್ಯ ರಾಜ್ಯಗಳಲ್ಲಿ ಕೆಲವು ಪಕ್ಷಗಳು ಕೆಲವೇ ಸಂಸದರನ್ನು ಹೊಂದಿವೆ. ಅಂದರೆ, ನಾನು ಹೆಚ್ಚು ಸಂಖ್ಯೆಯಲ್ಲಿ ನಟಿಸಬಹುದಾದರೂ, ನಾನು ಒಳಗೆ ಟೊಳ್ಳು. ಏನೇ ಆಗಲಿ, ಮುಂದಿನ ಲೋಕಸಭೆ ಚುನಾವಣೆ ಮೋದಿ ಮತ್ತು ಬಿಜೆಪಿ ಮೈತ್ರಿಗೆ ಹಿನ್ನಡೆಯಂತೂ ಆಗಲಿದೆ ಎಂಬ ಸ್ಪಷ್ಟ ಸಂದೇಶ ಬೆಂಗಳೂರಿನಿಂದ ಹೊರಹೊಮ್ಮಿದೆ.



ತರಕಾರಿಗಳ ಬೆಲೆಯೇರಿಕೆಗೆ 'ಮಿಯಾಂ' ಮುಸ್ಲಿಮರು ಕಾರಣ ಎಂದ ಅಸ್ಸಾಂ ಮುಖ್ಯಮಂತ್ರಿ ಹೇಳಿಕೆ ವಿರುದ್ಧ ಎಫ್‌ಐಆರ್

ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತ ಮುಖ್ಯಮಂತ್ರಿಗಳು ಅಷ್ಟಕ್ಕೇ ನಿಲ್ಲಲಿಲ್ಲ, ಅಸ್ಸಾಂನ ಯುವಜನ ಮುಂದೆ ಬರಬೇಕು ಎನ್ನುತ್ತ ಎಲ್ಲ 'ಮಿಯಾ ಮುಸ್ಲಿಮ್' ತರಕಾರಿ ಮಾರುವವರನ್ನು ನಗರದಿಂದ ಹೊಡೆದೋಡಿಸಲಾಗುವುದು ಎಂದೂ ಹೇಳಿದರು. ಕ್ಯಾಬ್ ಮತ್ತು ಬಸ್ ಸೇವೆಗಳಲ್ಲಿ ಅವರ ಸಂಖ್ಯೆ ಹೆಚ್ಚುತ್ತಿರುವುದು ಹೆಚ್ಚೆಚ್ಚು ಕಳವಳಕಾರಿ ಎಂದೂ ಅವರು ಹೇಳಿದ್ದಾರೆ. ಅವರ ಉದ್ರೇಕಕಾರಿ ಮತ್ತು ಕೋಮುವಾದಿ ಹೇಳಿಕೆಗಳ ವೀಡಿಯೋ ಮತ್ತು ಮತ್ತಿತರ ಸಾಕ್ಷ್ಯಗಳು ಸುಲಭವಾಗಿ ಸಿಗುತ್ತವೆ ಎಂದು ದೂರಿನಲ್ಲಿ ಹೇಳಲಾಗಿದೆ.

ಈ ದೂರಿನಲ್ಲಿ ಎಐಯುಡಿಎಫ್ ಮುಖ್ಯಸ್ಥ ಹಾಗೂ ಸಂಸದ ಬದ್ರುದ್ದೀನ್ ಅಜ್ಮಲ್ ವಿರುದ್ಧವೂ ಇದೇರೀತಿಯ ಆರೋಪಗಳನ್ನು ಮಾಡಲಾಗಿದೆ. ಅವರೂ ಇದೇರೀತಿಯಲ್ಲಿ ಮೋಮುವಾದಿ ದನಿಯಲ್ಲಿ ದ್ವೇಷ ಭಾಷಣಗಳನ್ನು ಮಾಡುತ್ತಿದ್ದಾರೆ. ಜುಲೈ 12 ರಂದು ಏಕರೂಪ ನಾಗರಿಕ ಸಂಹಿತೆ ಕುರಿತು ಪ್ರತಿಕ್ರಿಯಿಸಲು ಧುಬ್ರಿಯಲ್ಲಿ ನಡೆದ ಸಭೆಯಲ್ಲಿ ಅವರು, ಮುಸ್ಲಿಮೇತರ ಧಾರ್ಮಿಕ ಸಮುದಾಯಗಳ ವಿರುದ್ಧ ಆಕ್ಷೇಪಾರ್ಹ ಟೀಕೆಗಳನ್ನು ಮಾಡಿದರು. ಹೀಗಾಗಿ ಅವರ ವಿರುದ್ಧವೂ ನಿರ್ದಿಷ್ಟ ಆರೋಪಗಳೊಂದಿಗೆ ದೂರುದಾಖಲಿಸಲಾಗಿದೆ.

ದೂರಿನಲ್ಲಿ ಏಪ್ರಿಲ್ 28 ರಂದು ದ್ವೇಷ ಭಾಷಣದ ಕುರಿತ ಸುಪ್ರೀಂಕೋರ್ಟ್ ನಿರ್ದೇಶನವನ್ನು ಉಲ್ಲೇಖಿಸಲಾಗಿದೆ. ದ್ವೇಷ ಭಾಷಣ ಸಂಭವಿಸಿದಾಗ ಅದು ಐಪಿಸಿ ಕಲಮು 153ಎ, 153ಬಿ, 295ಎ ಮತ್ತು 505 ಇವುಗಳ ಅಡಿಯಲ್ಲಿ ಅಪರಾಧವಾಗುತ್ತದೆ. ಅದು ದಾಖಲಾಗುವಂತೆ ರಾಜ್ಯಗಳಿಗೆ ಅದು ನಿರ್ದೇಶನ ನೀಡಿತ್ತು. ಈ ಬಗ್ಗೆ ದೂರು ಗಳು ಬರದಿದ್ದರೂ ತಾವಾಗಿಯೇ ದೂರುದಾಖಲಿಸಬೇಕು, ಅಪರಾಧಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದೂ ಅದು ಹೇಳಿತ್ತು.

ಆದ್ದರಿಂದ ಈ ಬಗ್ಗೆ ತನಿಖೆ ನಡೆಸಬೇಕು, ಇಬ್ಬರು ಅಪರಾಧಿಗಳ ವಿರುದ್ಧ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂದು ದೂರಿನಲ್ಲಿ ಆಗ್ರಹಿಸಲಾಗಿದೆ.

ದೂರಿಗೆ ಸಿಪಿಐ(ಎಂ) ರಾಜ್ಯ ಸಮಿತಿಯ ಪರವಾಗಿ ಪಕ್ಷದ ರಾಜ್ಯ ಕಾರ್ಯದರ್ಶಿ ಸುಪ್ರಕಾಶ ತಾಲೂಕ್ದಾರ್ ಮತ್ತು ಕೇಂದ್ರ ಸಮಿತಿ ಸದಸ್ಯ ಇಸ್ಫಾಕುರ್ ರೆಹಮಾನ್ ಜಂಟಿಯಾಗಿ ಸಹಿ ಹಾಕಿದ್ದಾರೆ. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಯನ್ ಭುಯಾನ್ ಮತ್ತು ನಿರಂಕುಶ್ ನಾಥ್ ಅವರೊಂದಿಗೆ ಇದ್ದರು.



ಲತಾಶೀಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾದ ನಂತರ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಸುಪ್ರಕಾಶ ತಾಲೂಕದಾರ್ ಸಂಜೆ ರಾಜ್ಯ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತ, ರಾಜ್ಯದಲ್ಲಿ ಸಂವಿಧಾನ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಪೊಲೀಸ್ ಆಡಳಿತವು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ಸಂಸದ ಬದ್ರುದ್ದೀನ್ ಅಜ್ಮಲ್ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದರು. ಅವರ ದ್ವೇಷಪೂರಿತ ಕೋಮುವಾದಿ ಹೇಳಿಕೆಗಳು ಅಸ್ಸಾಂನ ರಾಜಕೀಯವನ್ನು ಕಲುಷಿತಗೊಳಿಸಿವೆ ಮಾತ್ರವಲ್ಲದೆ ಸಾಮಾಜಿಕ ಜೀವನಕ್ಕೆ ಅಪಾಯವನ್ನುಂಟು ಮಾಡಿವೆ ಎಂದು ತಾಲೂಕ್ದಾರ್ ಹೇಳಿದರು. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಇಸ್ಫಾಕುರ್ ರೆಹಮಾನ್, 2024 ರ ಲೋಕಸಭೆ ಚುನಾವಣೆಗೆ ಮುನ್ನ ಈ ನಾಯಕರು ಧಾರ್ಮಿಕ ಧ್ರುವೀಕರಣ ನಡೆಸಲು ಇಂತಹ ಹೇಯ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದರು.

ರಕ್ತಹೀನತೆಯ ಸಮಸ್ಯೆಯನ್ನು ಎದುರಿಸುವ ಬದಲು ಅದನ್ನು ಅದೃಶ್ಯಗೊಳಿಸುವ ಪ್ರಯತ್ನ–ಎಐಡಿಡಬ್ಲ್ಯುಎ ಕಳವಳ

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–6 (ಎನ್‌ಎಫ್‌ಹೆಚ್‌ಎಸ್–6)ರ ಸೂಚಕಗಳಿಂದ ರಕ್ತಹೀನತೆಯನ್ನು ತೆಗೆದುಹಾಕುವ ನಿರ್ಧಾರವನ್ನು ಬಿಜೆಪಿ ಸರಕಾರ ಕೈಗೊಂಡಿದೆ ಎಂದು ತಿಳಿದುಬಂದಿದೆ. ಈ ಬಗ್ಗೆ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ (ಎಐಡಿಡಬ್ಲ್ಯುಎ) ತೀವ್ರ ಕಳವಳವನ್ನು ವ್ಯಕ್ತಪಡಿಸಿದೆ.

ರಕ್ತಹೀನತೆಯ ಬಗ್ಗೆ ದತ್ತಾಂಶಗಳು ಬಹಳ ಮಹತ್ವದ್ದಾಗಿವೆ. ಹಿಂದಿನ NFHS-5 ಸಮೀಕ್ಷೆಯು ನಮ್ಮ ದೇಶದಲ್ಲಿ 57% ಕ್ಕಿಂತ ಹೆಚ್ಚು ಮಹಿಳೆಯರು ಮತ್ತು 67% ಕ್ಕಿಂತ ಹೆಚ್ಚು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ ಎಂದು ಬಹಿರಂಗಪಡಿಸಿದೆ. ಅಂತಹ ರಕ್ತಹೀನತೆ ಕಂಡುಬಂದಿರುವುದು ಒಂದು ಗಂಭೀರ ಸಮಸ್ಯೆಯೇನಲ್ಲ ಅಥವಾ ಅದೊಂದು ಅಪರೂಪದ ಸಂಗತಿ ಎಂದು ತಳ್ಳಿಹಾಕಲಾಗುವುದಿಲ್ಲ. ತಾಯಿ ಮತ್ತು ಮಕ್ಕಳ ಮರಣಕ್ಕೆ ಇದು ಒಂದು ಪ್ರಮುಖಕಾರಣವಾಗಿದೆ ಎಂದು ವೈದ್ಯಕೀಯ ತಜ್ಞರು ಗಮನಸೆಳೆದಿದ್ದಾರೆ. ಇದು ಮಕ್ಕಳಲ್ಲಿ ಬೆಳವಣಿಗೆಯನ್ನು ತಡೆಯುತ್ತದೆ, ಅವರ ಆರೋಗ್ಯ ಮತ್ತು ಯೋಗಕ್ಷೇಮದ ಮೇಲೆ ದೀರ್ಘಕಾಲೀನ ಪರಿಣಾಮಗಳಿಗೆ ಕಾರಣವಾಗುತ್ತದೆ. ರಕ್ತಹೀನತೆಯು ಮಹಿಳೆಯರು ಮತ್ತು ಮಕ್ಕಳಲ್ಲಿ ಸೋಂಕುಗಳಿಗೆ ಪ್ರತಿರೋಧವನ್ನು ಕಡಿಮೆ ಮಾಡುತ್ತದೆ. ಹದಿಹರೆಯದ ಹೆಣ್ಣುಮಕ್ಕಳು ಮತ್ತು ಗರ್ಭಿಣಿಯರ ಮೇಲೆ ಇದರ ಪರಿಣಾಮ ಬೀರುವುದು ತೀವ್ರ ಕಳವಳಕಾರಿ ವಿಷಯವಾಗಿದೆ ಎಂದು ಸಾರ್ವಜನಿಕ ಆರೋಗ್ಯತಜ್ಞರು ಹೇಳುತ್ತಾರೆ.

ಹೀಗಿರುವಾಗ ಸರ್ಕಾರವು ತನ್ನ ಸಮೀಕ್ಷೆಯಿಂದ ಈ ದತ್ತಾಂಶವನ್ನು ಹೊರಗಿಡುವ ನಿರ್ಧಾರ ಪ್ರಶ್ನಾರ್ಹ. ರಕ್ತಹೀನತೆಯ ಅಂದಾಜುಗಳು ವಿಶ್ವಾಸಾರ್ಹವಾಗಿಲ್ಲ ಎಂಬುದು ಸರಕಾರ ಕೊಡುವ ಕಾರಣ. ಆದರೆ ಸಾರ್ವಜನಿಕ ಆರೋಗ್ಯತಜ್ಞರು ಹಾಗೆ ಭಾವಿಸುತ್ತಿಲ್ಲ. ಏಕೆಂದರೆ ಹಿಂದಿನ ದತ್ತಾಂಶಗಳನ್ನು ಅದೇ ಆಧಾರದಲ್ಲಿ ಸಂಗ್ರಹಿಸಿರುವುದರಿಂದ ಅವನ್ನು ಪರಸ್ಪರ ಹೋಲಿಸಿ, ಆ ಮೂಲಕ ಸಮಸ್ಯೆಯನ್ನು ಎದುರಿಸಬಹುದಾಗಿದೆ ಎಂದು ಅವರು ಹೇಳುತ್ತಾರೆ.

ಹಲವಾರು ಪ್ರಾದೇಶಿಕ ವ್ಯತ್ಯಾಸಗಳನ್ನು ಹೊಂದಿರುವ ನಮ್ಮ ದೇಶದಲ್ಲಿ, ರಕ್ತಹೀನತೆಯ ಪ್ರಮಾಣವು ರಾಜ್ಯಗಳು ಮತ್ತು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಭಿನ್ನವಾಗಿರುತ್ತದೆ. ಎನ್‌ಎಫ್‌ಹೆಚ್‌ಎಸ್ ಜಿಲ್ಲಾ ಮಟ್ಟದಲ್ಲಿ ಈ ಮೌಲ್ಯಯುತ ಮಾಹಿತಿಯನ್ನು ಒಳಗೊಂಡಿರುವ ದತ್ತಾಂಶಗಳನ್ನು ಒದಗಿಸುವ ಏಕೈಕ ಸಮೀಕ್ಷೆ. ಇಂತಹ ದತ್ತಾಂಶಗಳಿಲ್ಲದೆ, ಎಲ್ಲಿ ಸರಕಾರದ ಮಧ್ಯಪ್ರವೇಶದ ಅಗತ್ಯವಿದೆ ಎಂದು ವೈಜ್ಞಾನಿಕವಾಗಿ ನಿರ್ಣಯಿಸಲು ಯಾವುದೇ ಮಾರ್ಗವಿರುವುದಿಲ್ಲ.

ಬಹುಶಃ ಸರಕಾರ ಈ ಮೊದಲು ರಕ್ತಹೀನತೆಯ ಈ ಪ್ರಶ್ನೆಯನ್ನು ನಿಭಾಯಿಸುವಲ್ಲಿ ವಿಫಲಗೊಂಡಿದ್ದು, ಭವಿಷ್ಯದಲ್ಲಿಯೂ ಅಗತ್ಯಕ್ರಮಗಳನ್ನು ಕೈಗೊಳ್ಳುವ ಇಚ್ಛೆ ಅದಕ್ಕಿಲ್ಲವಾದ್ದರಿಂದ, ಆ ಬಗ್ಗೆ ದತ್ತಾಂಶವೇ ಇಲ್ಲದಿದ್ದರೆ ರಕ್ತಹೀನತೆಯ ಸಮಸ್ಯೆಯೇ ಕಾಣುವುದಿಲ್ಲ ಎಂದು ಅದು ಭಾವಿಸಿದಂತಿದೆ ಎಂದಿರುವ ಎಐಡಿಡಬ್ಲ್ಯುಎ, ಸಾರ್ವಜನಿಕ ಆರೋಗ್ಯ ನಿರ್ವಹಣೆಯ ಬದಲು ಅದು ಸಾರ್ವಜನಿಕ ಸಂಪರ್ಕ ನಿರ್ವಹಣೆಯದಾರಿ ಹಿಡಿದಿದೆ ಎಂದು ವ್ಯಂಗ್ಯ ಮಾಡಿದೆ.

ಹೀಗೆ ಒಂದೆಡೆಯಲ್ಲಿ ರಕ್ತಹೀನತೆಯ ದತ್ತಾಂಶವನ್ನು ತೊಡೆದುಹಾಕಲು ಪ್ರಯತ್ನಿಸುತ್ತಿರುವ ಸರಕಾರ, ಅದೇ ಸಮಯದಲ್ಲಿ ರಾಷ್ಟ್ರವ್ಯಾಪಿಯಾಗಿ ಕಬ್ಬಿಣಾಂಶಗಳಿಂದ ಬಲವರ್ಧಿತವಾಗಿದೆ ಎನ್ನುವ ಅಕ್ಕಿಯನ್ನು, ಇದರ ಪೌಷ್ಟಿಕತೆ ಇನ್ನೂ ಸಾಬೀತಾಗಿರದಿದ್ದರೂ, ವಿತರಿಸಲು ಸಿದ್ಧವಾಗಿದೆ. ಈ ಸರಕಾರಕ್ಕೆ ರಕ್ತಹೀನತೆಯ ಮತ್ತು ಅಪೌಷ್ಟಿಕತೆಯ ಪ್ರಶ್ನೆಗಳನ್ನು ನಿಭಾಯಿಸುವುದಕ್ಕಿಂತ, ಉದ್ದಿಮೆಗಳಿಗೆ ಬೆಂಬಲ ನೀಡುವ ಕಾತುರವೇ ಹೆಚ್ಚಿದೆ ಎಂದೇ ಹೇಳಬೇಕಾಗುತ್ತದೆ ಎಂದು ಎಐಡಿಡಬ್ಲ್ಯುಎ ಖೇದ ವ್ಯಕ್ತಪಡಿಸಿದೆ.

ಆದ್ದರಿಂದ, ಎನ್‌ಎಫ್‌ಹೆಚ್‌ಎಸ್–6 ಸಮೀಕ್ಷೆಯಿಂದ ರಕ್ತಹೀನತೆಯನ್ನು ಹೊರಗಿಡುವ ನಿರ್ಧಾರವನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಮತ್ತು ಅದರ ಮಾಪನವನ್ನು ಯಾವುದೇ ವಿಳಂಬವಿಲ್ಲದೆ ಮರುಸ್ಥಾಪಿಸಬೇಕು ಎಂದು ಒತ್ತಾಯಿಸುತ್ತ, ಎಐಡಿಡಬ್ಲ್ಯುಎ, ಸರಕಾರ ಆಹಾರ ಭದ್ರತೆಯ ಕಾರ್ಯತಂತ್ರಗಳಲ್ಲಿ ಇಷ್ಟೊಂದು ಅನಪೇಕ್ಷಿತ ತರಾತುರಿಯಲ್ಲಿ ಕಬ್ಬಿಣಾಂಶ ಬಲವರ್ಧಿತ ಅಕ್ಕಿಯ ವಿತರಣೆಯನ್ನು ಆರಂಭಿಸಬಾರದು, ಬದಲಿಗೆ, ನಮ್ಮ ಬಹಳಷ್ಟು ಜನವಿಭಾಗಗಳನ್ನು, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳನ್ನು ಬಾಧಿಸುತ್ತಿರುವ ರಕ್ತಹೀನತೆ ಮತ್ತು ಅಪೌಷ್ಟಿಕತೆಯನ್ನು ಪರಿಹರಿಸಲು ಸಮಗ್ರ ಕ್ರಮಗಳನ್ನು ಕೈಗೊಳ್ಳಬೇಕು, ಇದರಲ್ಲಿ ಅಗತ್ಯ ವಸ್ತುಗಳ ಗಗನಕ್ಕೇರುತ್ತಿರುವ ಬೆಲೆಗಳನ್ನು ನಿಯಂತ್ರಿಸಲು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಕ್ರಮಗಳೂ ಸೇರಿರಬೇಕು ಎಂದು ಆಗ್ರಹಿಸಿದೆ.

ಏಕರೂಪ ನಾಗರೀಕ ಕಾನೂನಿನಿಂದ ಲಿಂಗ ಸಮಾನತೆ.......

ಪುಟ 7 ರಿಂದ

ಆದರೆ, ಮುಸ್ಲಿಂ ಹೆಣ್ಣು ಮಕ್ಕಳನ್ನು ಪದೇ ಪದೇ ಬಳಸುವುದರಿಂದ ಸರಕಾರ ಮುಸ್ಲಿಮರನ್ನು ಮಾತ್ರ ಗುರಿಯಾಗಿಸಿಕೊಳ್ಳುತ್ತಿದೆ ಎಂಬುದು ಸ್ಪಷ್ಟವಾಗಿದೆ. ವಿವಿಧ ಧಾರ್ಮಿಕ ಗುಂಪುಗಳ ಆಚರಣೆಗಳಿಗೆ ಅವಕಾಶ ನೀಡುವ ಈ 'ವೈವಿಧ್ಯ'ತೆಗೆ ಭಾರತದ ಸಂವಿಧಾನವೇ ಅವಕಾಶ ಕಲ್ಪಿಸಿರುವುದು ಪ್ರಧಾನಿಗೆ ಗೊತ್ತಿಲ್ಲವೇ? ದುರದೃಷ್ಟವಶಾತ್, ಇಂದು ನಾವು ಭಾರತವನ್ನು ಸಂಘಪರಿವಾರದ ಕೋಮು ದೃಷ್ಟಿಯಲ್ಲಿ ನೋಡುವ ಪ್ರಧಾನ ಮಂತ್ರಿಯನ್ನು ಹೊಂದಿದ್ದೇವೆಯೇ ಹೊರತು ಸಂವಿಧಾನದ ದೃಷ್ಟಿಯಿಂದ ನೋಡುವ ಪ್ರಧಾನ ಮಂತ್ರಿಯನ್ನಲ್ಲ.

ಏಕರೂಪ ನಾಗರಿಕ ಸಂಹಿತೆಯ ಅನುಷ್ಠಾನದಲ್ಲಿನ ಪ್ರಮುಖ ಸಮಸ್ಯೆಯು ಸಂವಿಧಾನದ ಆರನೇ ಶೆಡ್ಯೂಲ್‌ಗೆ ಸಂಬಂಧಿಸಿದೆ ಎಂದು ಕಾನೂನು ಆಯೋಗದ ವರದಿಯು ಹೈಲೈಟ್ ಮಾಡುತ್ತದೆ (ಪ್ಯಾರಾ 1.23). ಆರ್ಟಿಕಲ್ 244 ರ ಅಡಿಯಲ್ಲಿ ಆರನೇ ಶೆಡ್ಯೂಲ್ ತ್ರಿಪುರಾ, ಅಸ್ಸಾಂ, ಮಿಜೋರಾಂ ಮತ್ತು ಮೇಘಾಲಯ ರಾಜ್ಯಗಳ ಕೆಲವು ಪ್ರದೇಶಗಳೊಂದಿಗೆ ವ್ಯವಹರಿಸುತ್ತದೆ. ಸ್ಥಳೀಯ ಮತ್ತು ಜಿಲ್ಲಾ ಮಂಡಳಿಗಳು ರಾಜ್ಯಪಾಲರ ಅನುಮೋದನೆಯೊಂದಿಗೆ ಕೌಟುಂಬಿಕ ಕಾನೂನುಗಳನ್ನು ಮಾಡಬಹುದು. ಆರ್ಟಿಕಲ್ 371 ರ ಎ, ಬಿ, ಸಿ, ಎಫ್, ಜಿ ಮತ್ತು ಎಚ್ ವಿಭಾಗಗಳು ಆರು ಈಶಾನ್ಯ ರಾಜ್ಯಗಳಿಗೆ ವಿಶೇಷ ಹಕ್ಕುಗಳು ಮತ್ತು ವಿನಾಯಿತಿಗಳನ್ನು ಒದಗಿಸುತ್ತವೆ. ತಮ್ಮ ಸಾಂವಿಧಾನಿಕ ಹಕ್ಕುಗಳ ಮೇಲೆ ಪರಿಣಾಮ ಬೀರುವ ಈ ಕ್ರಮಕ್ಕೆ ಮಣಿಪುರ ಸೇರಿದಂತೆ ಐತಿಹಾಸಿಕವಾಗಿ ಹಿಂದುಳಿದ ರಾಜ್ಯಗಳು ಹೇಗೆ ಪ್ರತಿಕ್ರಿಯಿಸುತ್ತವೆ? ಮಧ್ಯ ಮತ್ತು ಪೂರ್ವ ಭಾರತದಲ್ಲಿ ಬುಡಕಟ್ಟು ಸಮುದಾಯಗಳು ಈಗಾಗಲೇ ವಿವಿಧ ಆರ್ಥಿಕ ನೀತಿಗಳಿಂದ ದಾಳಿಗೊಳಗಾಗುತ್ತಿವೆ. ಅವರ ಅರಣ್ಯ ಮತ್ತು ಕೃಷಿ ಭೂಮಿಯನ್ನು ಕಸಿದುಕೊಳ್ಳಲಾಗುತ್ತಿದೆ.

ಏಕರೂಪ ನಾಗರಿಕ ಸಂಹಿತೆಯು ಬುಡಕಟ್ಟು ಜನಾಂಗದವರಿಗೆ ಸಂವಿಧಾನವು ನೀಡಿರುವ ಎಲ್ಲಾ ವಿಶೇಷ ಹಕ್ಕುಗಳು ಮತ್ತು ಸವಲತ್ತುಗಳಿಗೆ ವಿರುದ್ಧವಾಗಿದೆ. ಆದಿವಾಸಿಗಳಿಗೆ ಸಂವಿಧಾನ ನೀಡಿರುವ ಈ ವಿಶೇಷ ಹಕ್ಕುಗಳ ವಿರುದ್ಧ ಕೇಂದ್ರ ಸರಕಾರ ಇದೆಯೇ? ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ಅವೆಲ್ಲವನ್ನೂ ರದ್ದುಗೊಳಿಸಲಾಗುತ್ತದೆಯೇ? ಅಥವಾ ಏಕ ನಾಗರಿಕ ಸಂಹಿತೆ ಅವರಿಗೆ ಅನ್ವಯಿಸುವುದಿಲ್ಲವೇ? ಮುಸ್ಲಿಮರು ಮಾತ್ರ ಇದರ ಗುರಿಯೇ? ಪ್ರಧಾನಿ ಉತ್ತರಿಸಬೇಕು.

ಸುಕನ್ಯಾ ಸಮೃದ್ಧಿ ಯೋಜನೆ

ಶಿಕ್ಷಣವನ್ನು ಸಂಪೂರ್ಣವಾಗಿ ಮುಕ್ತ ಮಾರುಕಟ್ಟೆಗೆ ತೆರೆದಿಡುವ ಒಂದು ಯೋಜನೆ

ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಮೇ 30 ಕ್ಕೆ 9 ವರ್ಷಗಳು ಕಳೆದಿವೆ. ಮೋದಿ ಆಡಳಿತದ ಸಾಧನೆಗಳ ಬಗ್ಗೆ ಬಿಜೆಪಿ, ಸಂಘಪರಿವಾರ ಹಾಗೂ ಕಾರ್ಪೊರೇಟ್ ಒಡೆತನದ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಪ್ರಚಾರ ಮಾಡುತ್ತಿದ್ದಾರೆ. ಅವರು ಸಾಧನೆಗಳೆಂದು ಹೇಳುತ್ತಿರುವುದೆಲ್ಲಾ ನಿಜವಾಗಿಯೂ ಸಾಧನೆಗಳೇ? ಅವುಗಳು ಜನಪರವಾಗಿವೆಯೇ? ರಾಷ್ಟ್ರದ ಹಿತ ರಕ್ಷಿಸುವಂಥವೇ? ಸರ್ಕಾರದ ಈ ಎಲ್ಲಾ ಯೋಜನೆಗಳ ನಿಜವಾದ ಉದ್ದೇಶಗಳೇನು? ನವ ಉದಾರೀಕರಣ ನೀತಿಗಳ ಜಾರಿಗೆ ಈ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆಯೇ? ಭಾರತದ ಪ್ರತಿಯೊಂದು ವಲಯಗಳನ್ನು ಕಾರ್ಪೊರೇಟ್ ಸಂಸ್ಥೆಗಳಿಗೆ ಒಪ್ಪಿಸಲು ಏನೆಲ್ಲಾ ಯೋಜನೆಗಳನ್ನು ಜಾರಿಗೆ ತರಲಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ (FDI)ಗೆ ಮುಕ್ತ ಅವಕಾಶದ ಕಾರಣದಿಂದ ದೇಶದ ಹಲವು ವಲಯಗಳ ಮೇಲೆ ವಿದೇಶಿ ಹಣಕಾಸು ಸಂಸ್ಥೆಗಳು ಹೇಗೆಲ್ಲಾ ಹಿಡಿತ ಸಾಧಿಸಿವೆ. ಖಾಸಗೀಕರಣ ನೀತಿಗೆ ಅನುಗುಣವಾಗಿ ರೂಪಿಸಲಾಗಿರುವ ಯೋಜನೆಗಳನ್ನು 'ಜನಪರ ಯೋಜನೆಗಳು' ಎಂದು ಹೇಗೆಲ್ಲಾ ನಂಬಿಸ ತೊಡಗಿದ್ದಾರೆ. ಈ ಕುರಿತು, ಬಿಜೆಪಿ ಹೇಳುತ್ತಿರುವ ಒಂದೊಂದೇ "ಸಾಧನೆಗಳ" ವಿಮರ್ಶಾತ್ಮಕ ಲೇಖನಗಳ ಸರಣಿ.

ಮೋದಿ 9 ವರ್ಷಗಳು ಸಾಧನೆಗಳೆಂಬ ಸುಳ್ಳಿನ ಕಂತೆ! ಭಾಗ – 8

ಸಿದ್ದಯ್ಯ ಸಿ.

'ಬೇಟಿ ಬಚಾವೋ ಬೇಟಿ ಪಢಾವೋ' (ಮಗಳನ್ನು ಉಳಿಸಿ, ಮಗಳಿಗೆ ಕಲಿಸಿ) ಎಂಬ ಪ್ರಧಾನಿ ನರೇಂದ್ರ ಮೋದಿಯವರ ಒಂದು ಘೋಷಣೆ ನೆನಪಿದೆ ತಾನೆ? ಈ ಅಭಿಯಾನದ ಒಂದು ಭಾಗವೇ 'ಸುಕನ್ಯಾ ಸಮೃದ್ಧಿ ಯೋಜನೆ' (SSY). ಅಂದರೆ, ನಿಮ್ಮ ಮಗಳನ್ನು ಉಳಿಸುವ ಹಾಗೂ ನಿಮ್ಮ ಮಗಳಿಗೆ ಶಿಕ್ಷಣ ಕೊಡಿಸುವ, ಆಕೆಯ ಮದುವೆಯ ವೆಚ್ಚಕ್ಕೆ ಹಣ ಕೂಡಿಡುವ ಜವಾಬ್ದಾರಿ ನಿಮ್ಮ ಮೇಲೆಯೇ ಹೊರಿಸಲಾಗಿದೆ. ಇದಕ್ಕಾಗಿ ನೀವು ಮಾಡಬೇಕಾದುದು ಇಷ್ಟೇ, SSY ಖಾತೆ ತೆರೆದು, ಪ್ರತಿ ವರ್ಷ ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ವಂತೆಗೆ ಕಟ್ಟಿ ಹಣ ಉಳಿತಾಯ ಮಾಡಿ. ಮಗಳಿಗೆ 21 ವರ್ಷ ತುಂಬಿದ ನಂತರ ಅದರ ಬಡ್ಡಿ ಸಮೇತ ಹಿಂಪಡೆದು ನಿಮ್ಮ ಮಗಳ ಶಿಕ್ಷಣಕ್ಕೋ, ಮದುವೆಗೋ ಬಳಸಿಕೊಳ್ಳಿ. ಬ್ಯಾಂಕುಗಳು ಈ ಉಳಿತಾಯ ಹಣದ ಮೇಲೆ ಶೇ. 8ರಷ್ಟು ವಾರ್ಷಿಕ ಬಡ್ಡಿ ಸಿಗುತ್ತದೆ. ಇದು ಹೇಗಿದೆ ಎಂದರೆ, ವಿಮಾ ಕಂಪನಿಯ ಏಜೆಂಟನೊಬ್ಬ ನಮ್ಮ ಬಳಿ ಬಂದು ವಿಮೆ ಮಾಡಿಸಿದರೆ ಭವಿಷ್ಯದಲ್ಲಿ ಏನೆಲ್ಲಾ ಸೌಲಭ್ಯಗಳು ಸಿಗುತ್ತವೆ ಎಂದು ನಮಗೆ ತಿಳಿಸಿ ಹೇಳಿದಂತಿದೆ.

ಬಡವ, ಬಲ್ಲಿದ ಎನ್ನದೆ ಎಲ್ಲರಿಗೂ ಪ್ರಾಥಮಿಕ ಶಿಕ್ಷಣದಿಂದ, ಉನ್ನತ ಮಟ್ಟದ ವರೆಗೂ ಉಚಿತ ಶಿಕ್ಷಣ ನೀಡಬೇಕು, ಶಿಕ್ಷಣಕ್ಕೆ ಬಜೆಟ್ ನಲ್ಲಿ ಹೆಚ್ಚಿನ ಹಣ ತೆಗೆದಿರಿಸಬೇಕು ಎಂಬುದು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗಿನಿಂದಲೂ ಕಮ್ಯುನಿಸ್ಟರ ಒಂದು ಘೋಷಣೆ. ಕಮ್ಯುನಿಸ್ಟ್ ಪಕ್ಷಗಳ ವಿಧ್ಯಾರ್ಥಿ–ಯುವಜನ ಸಂಘಟನೆಗಳು ಇಂದಿಗೂ ಈ ಘೋಷಣೆಗಳನ್ನು ಇಟ್ಟುಕೊಂಡಿವೆ ಮಾತ್ರವಲ್ಲ, ಇದರ ಜಾರಿಗಾಗಿ ಇಂದಿಗೂ ಹೋರಾಟ ನಡೆಸುತ್ತಲೇ ಇವೆ. ಆದರೆ, ಆಳುವವರು ಶಿಕ್ಷಣವನ್ನೂ ಮುಕ್ತ ಮಾರುಕಟ್ಟೆಗೆ ತೆರೆದಿಟ್ಟು ಅದನ್ನು ಒಂದು ವ್ಯಾಪಾರದ ಸರಕನ್ನಾಗಿ ಮಾಡಿದ್ದಾರೆ. ಸರ್ಕಾರ ಶಿಕ್ಷಣ ನೀಡುವ ತನ್ನ ಜವಾಬ್ದಾರಿಯಿಂದ ನಿಧಾನವಾಗಿ ಹಿಂದೆ ಸರಿಯತೊಡಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ನಾಯಿ ಕೊಡೆಗಳಂತೆ ತಲೆಎತ್ತತೊಡಗಿವೆ. ವಿಧ್ಯಾರ್ಥಿಗಳ ಪೋಷಕರಿಂದ ದೊಡ್ಡ ಮಟ್ಟದ ಸುಲಿಗೆ ಮಾಡತೊಡಗಿವೆ. ಹಣ ಉಳ್ಳವರಿಗೆ ಮಾತ್ರ ಶಿಕ್ಷಣ ಎಂಬತ್ತಾಗಿದೆ. ಶಿಕ್ಷಣದ ಹಕ್ಕುಗಳನ್ನು ಪೂರೈಸಲು ಅಗತ್ಯವಾದಷ್ಟು ಸರ್ಕಾರಿ ಶಾಲಾ–ಕಾಲೇಜುಗಳ ಸ್ಥಾಪನೆ ಮತ್ತು ಇರುವ ಶಾಲಾ ಕಾಲೇಜುಗಳಿಗೆ ಮೂಲ ಸೌಕರ್ಯ ಹೆಚ್ಚಳ ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸರ್ಕಾರ ಹೆಚ್ಚು ಅನುಧಾನ ಒದಗಿಸುವ ಬದಲಾಗಿ, ಶಿಕ್ಷಣದ ಹಕ್ಕು (ರೈಟ್ ಟು ಎಜುಕೇಶನ್) ಎಂಬುದು ಈಗ ಸರ್ಕಾರದ ಹಣ ಖಾಸಗೀ ಶಿಕ್ಷಣ ಸಂಸ್ಥೆಗಳ ಪಾಲಾಗುತ್ತಿದೆ. ಸುಖನ್ಯಾ ಸಮೃದ್ಧಿ ಯೋಜನೆ ಮೂಲಕ, ಹೆಣ್ಣು ಮಕ್ಕಳ ಶಿಕ್ಷಣದ ಜವಾಬ್ಧಾರಿ ಅವರ ತಂದೆ ತಾಯಿಗಳದೇ ವಿನಃ, ಅದು ಸರ್ಕಾರದ ಜವಾಬ್ದಾರಿಯಲ್ಲ ಎಂದು ನೇರವಾಗಿ ಹೇಳಿದಂತಿದೆ. ಇದು ಮುಕ್ತ ಆರ್ಥಿಕ ನೀತಿಗಳಿಗೆ ಅನುಗುಣವಾಗಿ ರೂಪಿಸಿದ ಮತ್ತೊಂದು ಯೋಜನೆಯಷ್ಟೆ.

'ಸುಕನ್ಯಾ ಸಮೃದ್ಧಿ ಯೋಜನೆ' (SSY) ಯನ್ನು ನರೇಂದ್ರ ಮೋದಿಯವರ ಸರ್ಕಾರ 22ನೇ ಜನವರಿ 2015 ರಂದು ಪ್ರಾರಂಭಿಸಿತು. ಈ ಯೋಜನೆಗೆ ಒಂದು ನಿರ್ಧಿಷ್ಟ ಮೊತ್ತದ ವರೆಗೆ ತೆರಿಗೆ ವಿನಾಯಿತಿ ಕೊಡುವುದನ್ನು ಬಿಟ್ಟರೆ, ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಕೊಡುಗೆ ಏನೂ ಇರುವುದಿಲ್ಲ. ಇದು ಹೆಣ್ಣು ಮಗುವಿನ ಪೋಷಕರು ತಮ್ಮ ಮಗುವಿನ ಹೆಸರಿನಲ್ಲಿ ಖಾತೆ ತೆರೆದು, ಆ ಮಗುವಿಗೆ 21 ವರ್ಷ ತುಂಬುವವರೆಗೆ ನಿರ್ಧಿಷ್ಟ ಮೊತ್ತದ ವಾರ್ಷಿಕ ವಂತಿಗೆ ಕಟ್ಟಿ, ನಂತರ ಅದರ ಬಡ್ಡಿ ಸೇರಿ ಹಿಂಪಡೆಯುವ ಒಂದು ಉಳಿತಾಯ ಯೋಜನೆ. ಆದರೂ, ಇದು 'ಬೇಟಿ ಬಚಾವೋ ಬೇಟಿ ಪಢಾವೋ' (ಮಗಳನ್ನು ಉಳಿಸಿ ಮಗಳಿಗೆ ಕಲಿಸಿ) ಎಂಬ ಘೋಷಣೆಯೊಂದಿಗೆ, ಮೋದಿ ತಮ್ಮ ಸರ್ಕಾರ ಹೆಣ್ಣು ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸುತ್ತಿದೆ ಎಂಬಂತೆ ಹೇಳಿಕೊಳ್ಳುತ್ತಾರೆ.

ಬಡವರು ಭವಿಷ್ಯದ ದಿನಗಳಿಗಾಗಿ ಉಳಿತಾಯ ಮಾಡಲಾದೀತೇ?

ನಿರುದ್ಯೋಗ, ನಿಕೃಷ್ಟ ಕೂಲಿ, ಜೀವನ ವೆಚ್ಚಗಳ ದುಬಾರಿ, ಕೈಗೆಟುಕದ ಶಿಕ್ಷಣ ಮತ್ತು ಆರೋಗ್ಯ ಹೀಗೆ ಇನ್ನೂ ಹಲವು ಕಾರಣಗಳಿಂದಾಗಿ ದಿನನಿತ್ಯದ ಜೀವನಕ್ಕೆ ಹಣಕಾಸು ಒದಗಿಸಲಾಗದ, ಪೌಷ್ಠಿಕಾಂಶ ಉಳ್ಳ ಆಹಾರ ಕೊಂಡು ಸೇವಿಸುವಷ್ಟು ಆದಾಯವೂ ಇಲ್ಲದ ಬಡ ಕುಟುಂಬಗಳು, ತಮ್ಮ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನೂ ಕೊಡಿಸಲು ಸಾಧ್ಯವಾಗದಿರುವಾಗ, ತಮ್ಮ ಜೀವನದ ಅಗತ್ಯತೆಗಳಿಗಾಗಿ ಸಾಲ ಮಾಡಿ, ಬಡ್ಡಿ ಕಟ್ಟಲಾಗದೆ, ಸಾಲದ ಸುಳಿಯಲ್ಲಿ ಸಿಲುಕಿರುವಾಗ, ತಮ್ಮ ಮಕ್ಕಳ ಭವಿಷ್ಯದ ಶಿಕ್ಷಣಕ್ಕೆ ಎಸ್.ಎಸ್.ವೈ. ಯೋಜನೆಯಲ್ಲಿ ಉಳಿತಾಯ ಮಾಡಲು ಸಾಧ್ಯವೇ? ಬಡ ತಂದೆ ತಾಯಿಗಳಿಗೆ ಇದು ಖಂಡಿತಾ ಸಾಧ್ಯವಿಲ್ಲ. ಅಂದರೆ, ಈ ಯೋಜನೆಯೂ ಉಳ್ಳವರಿಗಾಗಿ ರೂಪಿಸಲಾದ ಯೋಜನೆಯಾಗಿದೆ. 2021ರ ವರೆಗೆ 2.73 ಕೋಟಿ ಹೆಣ್ಣು ಮಕ್ಕಳ ಹೆಸರಿನಲ್ಲಿ ಮಾತ್ರ ಎಸ್.ಎಸ್.ವೈ. ಯೋಜನೆಯಲ್ಲಿ ಖಾತೆ ತೆರೆಯಲು ಸಾಧ್ಯವಾಗಿದೆ. 10 ವರ್ಷದ ಒಳಗಿನ ಹೆಣ್ಣು ಮಕ್ಕಳ ಸಂಖ್ಯೆ ಅಂದಾಜು 63 ಲಕ್ಷ (ಜನಸಂಖ್ಯೆಯ ಶೇ. 9ರಷ್ಟು) ಇರುವ ಕರ್ನಾಟಕ ರಾಜ್ಯದಲ್ಲಿ 2021ರ ಅಕ್ಟೋಬರ್ ಅಂತ್ಯದಲ್ಲಿ 21,08,078 ಖಾತೆಗಳನ್ನು ಮಾತ್ರ ತೆರೆಯಲಾಗಿತ್ತು. ಈ ಅಂಕಿ ಅಂಶಗಳು ಈ ನನ್ನ ಹೇಳಿಕೆಗೆ ಪುಷ್ಠಿ ನೀಡುತ್ತದೆ.



ಯೋಜನೆಯ ಸಂಕ್ಷಿಪ್ತ ಪರಿಚಯ

ಸುಕನ್ಯಾ ಸಮೃದ್ಧಿ ಯೋಜನೆ (SSY) ಒಂದು ಹೆಣ್ಣು ಮಗುವಿಗೆ ವಿಶೇಷವಾಗಿ ಹಣಕಾಸು ಸಚಿವಾಲಯದ ಒಂದು ಸಣ್ಣ ಠೇವಣಿ ಯೋಜನೆಯಾಗಿದೆ. ಈ ಯೋಜನೆಯು ಹೆಣ್ಣು ಮಗುವಿನ ಶಿಕ್ಷಣ ಮತ್ತು ಮದುವೆ ವೆಚ್ಚವನ್ನು ಭರಿಸಲು ಉದ್ದೇಶಿಸಲಾಗಿದೆ. 14ನೇ ಡಿಸೆಂಬರ್ 2014 ರಂದು ಭಾರತ ಸರ್ಕಾರದಿಂದ ಸೂಚಿಸಲ್ಪಟ್ಟ ಈ ಯೋಜನೆಯು ತಮ್ಮ ಹೆಣ್ಣು ಮಗುವಿನ ಭವಿಷ್ಯದ ಶಿಕ್ಷಣ ಮತ್ತು ಮದುವೆಯ ವೆಚ್ಚಗಳಿಗಾಗಿ ನಿಧಿಯನ್ನು ನಿರ್ಮಿಸಲು ಪೋಷಕರನ್ನು ಉತ್ತೇಜಿಸುತ್ತದೆ. ಅಂಚೆ ಕಛೇರಿಗಳ ಮೂಲಕ ಅಥವಾ ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಮೂರು ಖಾಸಗಿ ವಲಯದ ಬ್ಯಾಂಕುಗಳಾದ HDFC ಬ್ಯಾಂಕ್, ಆಕ್ಸಿಸ್ ಬ್ಯಾಂಕ್ ಮತ್ತು ICICI ಬ್ಯಾಂಕ್ ಶಾಖೆಗಳ ಮೂಲಕ SSY ಗೆ ಅರ್ಜಿ ಸಲ್ಲಿಸಬಹುದು. ಖಾತೆಯನ್ನು ಹೆಣ್ಣು ಮಗುವಿನ ಪೋಷಕರು ಅಥವಾ ಕಾನೂನು ಪಾಲಕರು ತೆರೆಯಬಹುದು. ಹೆಣ್ಣು ಮಗು 10 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. ಹೆಣ್ಣು ಮಗುವಿಗೆ ಒಂದು ಖಾತೆಯನ್ನು ಮಾತ್ರ ಅನುಮತಿಸಲಾಗಿದೆ. ಒಂದು ಕುಟುಂಬವು ಕೇವಲ ಎರಡು SSY ಖಾತೆಗಳನ್ನು ತೆರೆಯಬಹುದು. ಕನಿಷ್ಠ ಹೂಡಿಕೆಯು ವಾರ್ಷಿಕ ರೂ. 250; ಗರಿಷ್ಠ ಹೂಡಿಕೆಯು ವಾರ್ಷಿಕ ರೂ. 1,50,000. ಮೆಚುರಿಟಿ ಅವಧಿಯು 21 ವರ್ಷಗಳು. ಪ್ರಸ್ತುತ, SSY ಹಲವಾರು ತೆರಿಗೆ ಪ್ರಯೋಜನಗಳನ್ನು ಹೊಂದಿದೆ ಮತ್ತು ಎಲ್ಲಾ ಸಣ್ಣ ಉಳಿತಾಯ ಯೋಜನೆಗಳಲ್ಲಿ ಹೆಚ್ಚಿನ ಬಡ್ಡಿದರವನ್ನು ಅಂದರೆ ಶೇ. 7.6 ಹೊಂದಿತ್ತು. 2023ರ ಮೇ ತಿಂಗಳಿನಿಂದ ಬಡ್ಡಿ ದರವನ್ನು ಶೇ. 8ಕ್ಕೆ ಹೆಚ್ಚಿಸಲಾಗಿದೆ. ಠೇವಣಿ ಮಾಡಿದ ಅಸಲು ಮೊತ್ತ, ಸಂಪೂರ್ಣ ಅಧಿಕಾರಾವಧಿಯಲ್ಲಿ ಗಳಿಸಿದ ಬಡ್ಡಿ ಮತ್ತು ಮೆಚ್ಯೂರಿಟಿ ಪ್ರಯೋಜನಗಳು ತೆರಿಗೆ–ವಿನಾಯತಿಯನ್ನು ಹೊಂದಿವೆ. ಒಂದೂವರೆ ಲಕ್ಷದ ವರೆಗಿನ ಠೇವಣಿಗೆ ಬರುವ ಬಡ್ಡಿಯ ಮೇಲಿನ ತೆರಿಗೆಗೆ ವಿನಾಯ್ತಿ ಇರುತ್ತದೆ. ಅಸಲು ಮೊತ್ತವನ್ನು ಸೆಕ್ಷನ್ 80C ಅಡಿಯಲ್ಲಿ ರೂ.1,50,000 ವರೆಗೆ ಕಳೆಯಲಾಗುತ್ತದೆ. ವಾರ್ಷಿಕವಾಗಿ ಸಂಯೋಜಿತವಾಗುವ ಈ ಖಾತೆಯ ಠೇವಣಿಗೆ ಬರುವ ಬಡ್ಡಿಯು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 10 ರ ಅಡಿಯಲ್ಲಿ ತೆರಿಗೆಯಿಂದ ವಿನಾಯಿತಿ ಪಡೆದಿದೆ.

1.19 ಲಕ್ಷ ಕೋಟಿ ಠೇವಣಿ

2021ರ ವರೆಗೆ ಎಸ್.ಎಸ್.ವೈ. ಖಾತೆಗಳಲ್ಲಿ ಸುಮಾರು ರೂ.1.19 ಲಕ್ಷ ಕೋಟಿ ಠೇವಣಿ ಶೇಖರಣೆ ಆಗಿತ್ತು ಎಂದು ಸರ್ಕಾರ ನೀಡಿರುವ ಮಾಹಿತಿಯಿಂದ ತಿಳಿದುಬಂದಿದೆ. ಮೋದಿಯವರ ಒಂದೇ ಒಂದು ಕರೆಯಿಂದ ಬ್ಯಾಂಕುಗಳಿಗೆ ಇಷ್ಟು ದೊಡ್ಡ ಪ್ರಮಾಣದ ಬಂಡವಾಳ ಹರಿದುಬಂದಿದೆ. ದೊಡ್ಡ ಉದ್ಯಮಿಗಳಿಗೆ ಸಾಲ ಕೊಟ್ಟು, ಸಾಲ ವಸೂಲಿ ಮಾಡಲು ಮುಂದಾಗದೆ, ರೈಟ್ ಆಫ್ ಮತ್ತು ಸಾಲ ಮನ್ನಾ ಮಾಡುವುದರಿಂದಾಗಿ, ಬ್ಯಾಂಕುಗಳು ದಿವಾಳಿ ಆಗುವುದನ್ನು ತಪ್ಪಿಸಲು ಅಥವಾ ದಿವಾಳಿ ಆಗುವುದನ್ನು ಮುಂದೂಡಲು ದೊಡ್ಡ ಪ್ರಮಾಣದ ಈ ಠೇವಣಿ ಮೊತ್ತ ನೆರವಿಗೆ ಬಂದಿದೆ.

ಕಾರ್ಮಿಕ ಸಂಘಟನೆಗಳ ತೀವ್ರ ಪ್ರತಿರೋಧದಿಂದಾಗಿ ಬ್ಯಾಂಕುಗಳ ಖಾಸಗೀಕರಣ ತಡವಾಗಿರುವುದರ ಕುರಿತಾಗಿ ನೀಡಿರುವ ಒಂದು ಪ್ರತಿಕ್ರಿಯೆ ಹೀಗಿದೆ, "ಸರ್ಕಾರವು ಮೊದಲೇ ಖಾಸಗೀಕರಣಕ್ಕೆ ಹೋಗಿದ್ದರೆ ಅದು ಉತ್ತಮ ಮೌಲ್ಯವನ್ನು ಪಡೆಯುತ್ತಿರಲಿಲ್ಲ, ಏಕೆಂದರೆ ಬ್ಯಾಂಕುಗಳು ಕೆಟ್ಟ ಸ್ಥಿತಿಯಲ್ಲಿದ್ದವು. ಈಗ, ಬಂಡವಾಳದ ಸಾಕಷ್ಟು ಇಂಜೆಕ್ಷನ್ ನಂತರ, ಬ್ಯಾಂಕ್‌ಗಳ ಬ್ಯಾಲೆನ್ಸ್ ಶೀಟ್‌ಗಳು ಉತ್ತಮ ಸ್ಥಿತಿಯಲ್ಲಿವೆ" ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮಾಜಿ ಹಿರಿಯ ಅಧಿಕಾರಿ ನರೇಶ್ ಮಲ್ಹೋತ್ರಾ ಹೇಳಿದ್ದಾರೆ ಎಂದು ವರದಿಯಾಗಿದೆ. ಇಂತಹ ಹೇಳಿಕೆಗೆ ಎಸ್.ಎಸ್.ವೈ. ಯೋಜನೆಯ ಮೂಲಕ ಬ್ಯಾಂಕುಗಳಿಗೆ ಹರಿದು ಬಂದಿರುವ ಲಕ್ಷಾಂತರ ಕೋಟಿ ಹಣವೂ ಒಂದು ಕಾರಣ ಎಂದರೆ ತಪ್ಪಾಗಲಾರದು. ಒಟ್ಟಿನಲ್ಲಿ ಹೇಳುವುದಾದರೆ. ಮೋದಿ ನೇತೃತ್ವದ ಸರ್ಕಾರ ವಿವಿಧ ರೀತಿಯ ಯೋಜನೆಗಳನ್ನು ರೂಪಿಸಿ, ಅವುಗಳು ಜನಪರ ಯೋಜನೆಗಳು ಎಂಬಂತೆ ಬಿಂಬಿಸುತ್ತಾ, ಬಿಜೆಪಿಗೆ ರಾಜಕೀಯ ಲಾಭ ತಂದುಕೊಡುತ್ತಾ, ನವ ಉದಾರವಾದಿ ನೀತಿಗಳ ಜಾರಿಯ ಕಡೆ ಹೆಜ್ಜೆ ಹಾಕತೊಡಗಿದೆ.

ತೆಂಗು ಬೆಳೆಗಾರರ ವಿಧಾನ ಸೌಧ ಚಲೋ.... ಪುಟ 5 ರಿಂದ

ಬೃಹತ್ ಪ್ರತಿಭಟನಾ ಸಭೆ ನಡೆಸಿದರು. ಹೀಗೆ ಕೊಬ್ಬರಿ ಬೆಳೆಗಾರರ ಕೂಗು ವಿಧಾನ ಸಭೆಯಲ್ಲಿ ಪ್ರತಿಧ್ವನಿಸಿತು. ರಾಜ್ಯ ಸರ್ಕಾರ ಕ್ವಿಂಟಾಲ್ ಕೊಬ್ಬರಿಗೆ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಜೊತೆಗೆ 1,250 ರೂ. ಗಳ ಪ್ರೋತ್ಸಾಹ ಧನ ಪ್ರಕಟಿಸಿತು.

ಅದರೆ, ರಾಜ್ಯ ಸರ್ಕಾರ ಘೋಷಿಸಿದ ಈ ಪ್ರೋತ್ಸಾಹ ಧನ ರೈತರ ಕೈಗೆ ದಕ್ಕುವಂತಿರಲಿಲ್ಲ. ಏಕೆಂದರೆ, ಕೊಬ್ಬರಿ ಖರೀದಿ ಏಜೆನ್ಸಿ ನಫೇಡ್ ಅಧಿಕಾರಿಗಳು ಜುಲೈ 26, 2023 ಕ್ಕೆ ಈ ವರ್ಷದ ಖರೀದಿ ಮುಕ್ತಾಯಗೊಳಿಸಲಾಗುವುದು ಎಂದು ಪ್ರಕಟಿಸಿದ್ದರು. ಈ ವರ್ಷದ ಕೊಬ್ಬರಿ ಉತ್ಪಾದನೆ 2.18 ಲಕ್ಷ ಮೆಟ್ರಿಕ್ ಟನ್ ನಲ್ಲಿ ಕೇವಲ 47,000 ಟನ್ ಅಂದರೆ ಸುಮಾರು ಕಾಲುಬಾಗ ಕೊಬ್ಬರಿಯನ್ನು ಮಾತ್ರ ನಫೇಡ್ ಖರೀದಿಸಿತ್ತು. ಇನ್ನೂ ನಾಲ್ಕನೇ ಮೂರರಷ್ಟು ಕೊಬ್ಬರಿ ರೈತರ ಬಳಿಯೇ ಮಾರಾಟ ಆಗದೇ ಉಳಿದಿತ್ತು. ಈ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (KPRS) ರಾಜ್ಯ ಸಮಿತಿ ಹಲವು ಬೇಡಿಕೆಗಳಿಗಾಗಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ತೆಂಗು ಬೆಳೆಗಾರರ ವಿಧಾನ ಸೌಧ ಚಲೋ ಪ್ರತಿಭಟನೆ ನಡೆಸಿತು.

ರೈತ ಮುಖಂಡರೊಂದಿಗೆ ಕೃಷಿ ಮಾರುಕಟ್ಟೆ ಸಚಿವರ ಜಂಟಿ ಪತ್ರಿಕಾಗೋಷ್ಠಿ

ರೈತರ ಹೋರಾಟಕ್ಕೆ ಮಣಿದ ಕೃಷಿ ಮಾರುಕಟ್ಟೆ ಸಚಿವರು, KPRS ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ, ಸಂಘದ ಹಣಕಾಸು ಕಾರ್ಯದರ್ಶಿ ಹೆಚ್.ಆರ್. ನವೀನ್ ಕುಮಾರ್ ನೇತೃತ್ವದ ರೈತ ಮುಖಂಡರೊಂದಿಗೆ ತಮ್ಮ ಕೊಠಡಿಯಲ್ಲಿ ಸಭೆ ನಡೆಸಿ, ರೈತ ಸಂಘದ ಆಹವಾಲುಗಳನ್ನು ಕೇಳಿದರು. ಸಂಘದ ಎಲ್ಲಾ ಬೇಡಿಕೆಗಳು ನ್ಯಾಯಯುತವಾಗಿವೆ ಎಂದು ಸಚಿವರು ಒಪ್ಪಿಕೊಂಡರು. ರೈತ ಸಂಘದ ಆಗ್ರಹದಂತೆ ಕೇಂದ್ರಕ್ಕೆ ಪತ್ರ ಬರೆಯುವುದಾಗಿ ತಿಳಿಸಿ, ಈ ಬಗ್ಗೆ ಮಾಹಿತಿ ನೀಡಲು ಮರು ದಿನವೇ ಅಂದರೆ, ಜುಲೈ 20, 2023 ರಂದು ವಿಧಾನ ಸೌಧದಲ್ಲಿ ರೈತ ಮುಖಂಡರೊಂದಿಗೆ ಜಂಟಿ ಪತ್ರಿಕಾಗೋಷ್ಠಿ ನಡೆಸಿ, ಕ್ವಿಂಟಾಲ್ ಕೊಬ್ಬರಿಗೆ ಬೆಂಬಲ ಬೆಲೆ 16,730 ರೂ. ಗೆ ಹೆಚ್ಚಳ ಮಾಡುವಂತೆ, ಖರೀದಿ ಕೇಂದ್ರದ ಅವಧಿ ವಿಸ್ತರಿಸುವಂತೆ, ಹೊಸದಾಗಿ ರೈತರ ನೊಂದಣಿಗೆ ಅವಕಾಶ ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಈ ಪತ್ರಿಕಾಗೋಷ್ಠಿ ಯಲ್ಲಿ KPRS ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ, ಹಣಕಾಸು ಕಾರ್ಯದರ್ಶಿ ಹೆಚ್.ಆರ್. ನವೀನ್ ಕುಮಾರ್, ತುಮಕೂರು ಜಿಲ್ಲೆಯ ಆರ್.ಎಸ್. ಚನ್ನಬಸವಣ್ಣ, ಹಾಸನ ಜಿಲ್ಲೆಯ ಹೆಚ್.ಎಸ್. ಮಂಜುನಾಥ್, ರಾಮಚಂದ್ರ ರವರು ರೈತ ಸಂಘದ ಪರವಾಗಿ ಇದ್ದರು.

ಜನಗಳ ಕೊಳ್ಳುವ ಶಕ್ತಿ ಇಳಿಯುತ್ತಿದೆ, ಕಾರ್ಪೊರೇಟ್‌ಗಳ ಲಾಭ ಏರುತ್ತಿದೆ

2022–23ರ ಕೊನೆಯ ತ್ರೈಮಾಸಿಕದ (ಜನವರಿಯಿಂದ ಮಾರ್ಚ್) ರಾಷ್ಟ್ರೀಯ ಆದಾಯದ ತಾತ್ಕಾಲಿಕ ಅಂದಾಜುಗಳು ಮತ್ತು ಅದರ ಆಧಾರದಲ್ಲಿ 2022–23ರ ಒಟ್ಟು ತಾತ್ಕಾಲಿಕ ಅಂದಾಜುಗಳನ್ನು ಪ್ರಕಟಿಸಿದ ಇತ್ತೀಚೆನ 'ರಾಷ್ಟ್ರೀಯ ಅಂಕಿ–ಅಂಶ ಕಚೇರಿ'(ಎನ್‌ಎಸ್‌ಒ)ಯ ಪತ್ರಿಕಾ ಪ್ರಕಟಣೆಯ ಇತರ ಕೆಲವು ಅಂಕಿ–ಅಂಶಗಳು ಪ್ರಸಕ್ತ ಆರ್ಥಿಕ ಸನ್ನಿವೇಶದ ಕೆಲವು ಗಮನಾರ್ಹ ಅಂಶಗಳ ಮೇಲೆ ಬೆಳಕು ಚೆಲ್ಲಿದೆ.

ಈ ಪತ್ರಿಕಾ ಪ್ರಕಟಣೆಯ ಅಂಕಿ–ಅಂಶಗಳ ಮುಖ್ಯಾಂಶಗಳು ಈ ಕೆಳಗಿನಂತಿವೆ.

- ಅಂದಾಜು ಬೆಳವಣಿಗೆ ದರವು 2021–22 ರಲ್ಲಿ 9.1% 2022–23 ರಲ್ಲಿ 7.2% ಕ್ಕೆ ಇಳಿದಿದೆ.
- ತಲಾ ಆದಾಯದ ಬೆಳವಣಿಗೆಯ ದರವು 2021–22 ರಲ್ಲಿ 7.6% ರಿಂದ 2022–23 ರಲ್ಲಿ 6.3% ಕ್ಕೆ ಇಳಿಕೆಯಾಗಿದೆ.
- ವಲಯವಾರು ಬೆಳವಣಿಗೆಗೆ ಸಂಬಂಧಿಸಿದಂತೆ ಉತ್ಪಾದನಾ ವಲಯವು 2021–22 ರಲ್ಲಿ 11.1% ದಿಂದ 2022–23 ರಲ್ಲಿ 1.3% ಕ್ಕೆ ಭಾರಿ ಕುಸಿತವನ್ನು ದಾಖಲಿಸಿದೆ.
- ಖಾಸಗಿ ಅಂತಿಮ ಬಳಕೆಯ ವೆಚ್ಚದ ಬೆಳವಣಿಗೆಯು 2021–22 ರಲ್ಲಿ 11.2% ರಿಂದ 22–23 ರಲ್ಲಿ 7.5% ಕ್ಕೆ ಇಳಿದಿದೆ.
- ರಫ್ತು ಬೆಳವಣಿಗೆಯು ಹಿಂದಿನ ವರ್ಷದಲ್ಲಿ ದಾಖಲಾದ 29.3% ದಿಂದ 2022–23 ರಲ್ಲಿ 13.6% ಕ್ಕೆ ಇಳಿಕೆಯಾಗಿದೆ.

ಪ್ರಸ್ತುತ ಸರ್ಕಾರವು 'ಮೇಕ್ ಇನ್ ಇಂಡಿಯಾ' ದಂತಹ ನೀತಿಗಳ ಮೂಲಕ ಅಥವಾ ವಿವಿಧ ಕ್ಷೇತ್ರಗಳಿಗೆ ಘೋಷಿಸಲಾದ ಉತ್ಪಾದನಾ ಸಂಬಂಧಿತ ಪ್ರೋತ್ಸಾಹಕಗಳ ಮೂಲಕ ಔದ್ಯಮಿಕ ಉತ್ಪಾದನೆಯ ಬೆಳವಣಿಗೆ ದರದಲ್ಲಿ ತೀವ್ರ ಇಳಿಕೆಯ ಸಮಸ್ಯೆಯನ್ನು ನಿಭಾಯಿಸಲು ಮಾಡಿರುವ ಪ್ರಯತ್ನಗಳು ಸಂಪೂರ್ಣವಾಗಿ ವಿಫಲವಾಗಿವೆ ಎಂಬುದನ್ನು ಈ ಅಂಕಿ–ಅಂಶಗಳು ತೋರಿಸುತ್ತವೆ ಎನ್ನುತ್ತಾರೆ ಅರ್ಥಶಾಸ್ತ್ರಜ್ಞರು (ಸಂಜಯ್ ರಾಯ್, ಪೀಪಲ್ಸ್ ಡೆಮಾಕ್ರಸಿ, ಜುಲೈ 16).

ಇದರೊಂದಿಗೆ ಮಾರ್ಚ್ 2023ಕ್ಕೆ ಕೊನೆಗೊಳ್ಳುವ ತ್ರೈಮಾಸಿಕದಲ್ಲಿ ಶೇರು ಮಾರುಕಟ್ಟೆಯಲ್ಲಿ ಪಟ್ಟಿಯಾಗಿರುವ ಅಂದರೆ ದೊಡ್ಡ ಕಾರ್ಪೊರೇಟ್‌ಗಳ ಲಾಭವು 2388 ಕೋಟಿ ರೂ.ಗಳು, ಅಂದರೆ 2017–19ರ ಸಾಂಕ್ರಾಮಿಕ ಪೂರ್ವ ಅವಧಿಯಲ್ಲಿ ಅವು ಗಳಿಸಿದ ಸರಾಸರಿ ತ್ರೈಮಾಸಿಕ ಲಾಭಗಳ ಮೂರೂವರೆ ಪಟ್ಟು ಎಂಬುದನ್ನು ಹೋಲಿಸಿ ನೋಡಬೇಕಾಗಿದೆ ಎನ್ನುತ್ತಾರೆ ಅವರು.

ಬೆಳವಣಿಗೆಯ ವಿಧಾನ ಕ್ರಮೇಣ ಲಾಭ ಗಳಿಸುವವರ ಪರವಾಗಿ ಮತ್ತು ಕೂಲಿ/ಸಂಬಳದಾರರ ವಿರುದ್ಧ ತಿರುಗುತ್ತಿದೆ ಎಂಬುದನ್ನು ಇದು ತೋರಿಸುತ್ತದೆ, ಇದೀಗ ಭಾರತದಲ್ಲಿ ಬೆಳವಣಿಗೆಯ ವಿಧಾನ ಎದುರಿಸುತ್ತಿರುವ ಪ್ರಶ್ನೆ, ಇದು ಸಾಮೂಹಿಕ ಬಳಕೆಯ ಸರಕುಗಳ, ಅದರಲ್ಲೂ ಬಾಳಿಕೆ ಬರುವ ಗ್ರಾಹಕ ಸರಕುಗಳ ಬೇಡಿಕೆಯನ್ನು ನಿರ್ಬಂಧಿಸಿದೆ ಮತ್ತು ಶ್ರೀಮಂತರು ಆದ್ಯತೆ ನೀಡುವ ಉನ್ನತ–ಮಟ್ಟದ ಆಮದು ಉತ್ಪನ್ನಗಳು ಮತ್ತು ಹಣಕಾಸಿನ ಸ್ವತ್ತುಗಳ ಬೇಡಿಕೆಯನ್ನು ಹೆಚ್ಚಿಸಿದೆ.

ಖಾಸಗಿ ಅಂತಿಮ ಬಳಕೆಯ ವೆಚ್ಚದ ಬೆಳವಣಿಗೆಯು 7.5% ಕ್ಕೆ ಇಳಿದಿರುವುದು ಸ್ಥಿರ ಬೆಲೆಗಳಲ್ಲಿ, ಅಂದರೆ 2011–12ರ ಬೆಲೆಗಳಲ್ಲಿ. ಪ್ರಸ್ತುತ ಬೆಲೆಗಳಲ್ಲಿ ಅದು 15%. ಅದೇ ರೀತಿಯಲ್ಲಿ ಕೊನೆಯ ತ್ರೈಮಾಸಿಕದಲ್ಲಿ ಪ್ರಸ್ತುತ ಬೆಲೆಗಳಲ್ಲಿ 7% ಮತ್ತು ಸ್ಥಿರಬೆಲೆಗಳಲ್ಲಿ ಕೇವಲ 2.8% ಏರಿಕೆ.

ಅಂದರೆ ಇತ್ತೀಚಿನ ದಿನಗಳಲ್ಲಿ ಕಾರ್ಪೊರೇಟ್‌ಗಳ ಲಾಭದ ಬೆಳವಣಿಗೆಯು ಮಾರಾಟದ ಪ್ರಮಾಣದಲ್ಲಿ ಹೆಚ್ಚಳಕ್ಕಿಂತ ಹೆಚ್ಚಾಗಿ ಬೆಲೆಗಳ ಏರಿಕೆಯಿಂದ ಹೆಚ್ಚಾಗಿದೆ.

ಬೇರೆ ರೀತಿಯಲ್ಲಿ ಹೇಳುವುದಾದರೆ, ಹಣದುಬ್ಬರ ಮತ್ತು ಇತರ ಆರ್ಥಿಕ ನೀತಿಗಳು ದೊಡ್ಡ ಸಂಖ್ಯೆಯಲ್ಲಿರುವ ಭಾರತದಲ್ಲಿನ ಬಡ ಜನರ ನೈಜ ಆದಾಯವನ್ನು ಕುಗ್ಗಿಸಿವೆ, ಅದೇ ವೇಳೆಗೆ ಕಾರ್ಪೊರೇಟ್‌ಗಳಿಗೆ ನಿಜವಾಗಿಯೂ ಸುಗ್ಗಿಯನ್ನು ತಂದು ಕೊಟ್ಟಿವೆ ಎನ್ನುತ್ತಾರೆ ಆರ್ಥಿಕ ತಜ್ಞರು.

ಇದು ಒಟ್ಟು ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಕಳವಳಕಾರಿ ಸಂಗತಿ. ಆದರೆ ಇದು ಆಳುವ ನೀತಿ–ನಿರೂಪಕರನ್ನು ಬಾಧಿಸಿದಂತಿಲ್ಲ.

ಇದು ಅಮೃತ ಕಾಲ



(120 ವಂದೇಭಾರತ್ ರೈಲುಗಳನ್ನು ತಯಾರಿಸಲು ರಷ್ಯಾದೊಂದಿಗೆ 6.5 ಬಿಲಿಯನ್ ಡಾಲರುಗಳ ವ್ಯವಹಾರ–ಸುದ್ದಿ)

ನಾವು ವಂದೇ ಭಾರತ್ ರೈಲುಗಳನ್ನು ಸ್ವತಃ ತಯಾರಿಸಿದ್ದೇವೆ!

(ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್)

ಇದು 2 ತಿಂಗಳು ಹಿಂದಿನ ವ್ಯಂಗ್ಯಚಿತ್ರ (19–5–23)
ರೈಲ್ ವಿಕಾಸ್ ನಿಗಮ್ ಲಿ(ಆರ್‌ವಿಎನ್‌ಎಲ್) ಈ ವ್ಯವಹಾರದಲ್ಲಿ 69% ಪಾಲು ಕೇಳಿದ್ದರಿಂದ ಮತ್ತು ರಷ್ಯಾದ ಕಂಪನಿ ಅದಕ್ಕೆ ಒಪ್ಪದ್ದರಿಂದ ಅದು ಹಳಿ ತಪ್ಪಿದೆ ಎಂದು ಜೂನ್ 1 ರಂದು ವರದಿಯಾಗಿತ್ತು. ಆದರೆ ಈಗ ಆರ್‌ವಿಎನ್‌ಎಲ್ 25% ಪಾಲಿಗೆ ಮತ್ತು ರಷ್ಯಾದ ಮೆಟ್ರೊವಾಗನ್‌ವಾಷ್ ಕಂಪನಿಯು 70% ಪಾಲಿಗೆ ಒಪ್ಪಿರುವುದರಿಂದ ಈ ವ್ಯವಹಾರ ಮುಂದುವರೆಯುತ್ತದೆ ಎಂದು ವರದಿಯಾಗಿದೆ (ದಿ ಹಿಂದು, ಜುಲೈ 19). ಈ ಜಂಟಿ ಉದ್ಯಮದಲ್ಲಿ ರಷ್ಯಾ ಮತ್ತು ಭಾರತ ತಲಾ 120 ರೈಲುಗಳನ್ನು ಪ್ರತಿಯೊಂದನ್ನು 120 ಕೋಟಿ ರೂ.ವೆಚ್ಚದಲ್ಲಿ ತಯಾರಿಸುತ್ತವೆ ಎಂದು ಹೇಳಲಾಗಿದೆ.

'ವಂದೇ ಭಾರತ್'ಗಳೂ ದುಬಾರಿ ಉದ್ಘಾಟನೆಗಳೂ

ಕೇರಳ ಮತ್ತು ತಮಿಳುನಾಡಿನಲ್ಲಿ ಎರಡು 'ವಂದೇ ಭಾರತ್' ರೈಲುಗಳನ್ನು ಉದ್ಘಾಟಿಸಲು ದಕ್ಷಿಣ ರೈಲ್ವೆ 2.63 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಇದು ಆರ್‌ಟಿಐ ಅರ್ಜಿಯೊಂದರರಿಂದ ಬೆಳಕಿಗೆ ಬಂದಿರುವ ಮಾಹಿತಿ. ಆರ್.ಟಿ.ಐ. ಕಾರ್ಯಕರ್ತ ಮತ್ತು ಮಾಜಿ ರೈಲ್ವೆ ಉದ್ಯೋಗಿ ಅಜಯ್ ಬಸುದೇವ್ ಬೋಸ್ ಸಲ್ಲಿಸಿದ ಮಾಹಿತಿ ಹಕ್ಕು (ಆರ್‌ಟಿಐ) ಅರ್ಜಿಗಳ ಮೂಲಕ ಇದು ಬಹಿರಂಗವಾಗಿದೆ. ದಕ್ಷಿಣ ರೈಲ್ವೇಯ ಚೆನ್ನೈ ವಿಭಾಗದ ಚೆನ್ನೈ–ಕೊಯಂಬತ್ತೂರು ವಂದೇ ಭಾರತ್ ಎಕ್ಸ್‌ಪ್ರೆಸ್ ಅನ್ನು ಪ್ರಾರಂಭಿಸಲು ಒಟ್ಟು 1,14,42,108 ರೂ. ಖರ್ಚಾಗಿದೆ. ಎಪ್ರಿಲ್ 8 ರಂದು ಪ್ರಧಾನಿಗಳು ಈ ರೈಲಿಗೆ ಚಾಲನೆ ನೀಡಿದರು. ಈ ಪೈಕಿ 1,05,03,624 ರೂ.ಗಳನ್ನು ಚೆನ್ನೈ ಮೂಲದ ಇವೋಕ್ ಮೀಡಿಯಾ ಎಂಬ ಖಾಸಗಿ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗೆ ಪಾವತಿಸಲಾಗಿದೆಯಂತೆ.

ಮತ್ತೊಂದೆಡೆ, ತಿರುವನಂತಪುರ–ಕಾಸರಗೋಡು ರೈಲಿನ ಉದ್ಘಾಟನೆಯನ್ನು ಆಯೋಜಿಸಲು ಮೈತ್ರಿ ಅಡ್ವರ್ಟೈಸಿಂಗ್ ವರ್ಕ್ಸ್ ಪ್ರೈವೇಟ್ ಎಂಬ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗೆ ಒಟ್ಟು 1,48,18,259 ರೂ.ಗಳನ್ನು ಪಾವತಿಸಲಾಗಿದೆ ಎಂದು ದಕ್ಷಿಣ ರೈಲ್ವೆಯ ತಿರುವನಂತಪುರಂ ವಿಭಾಗವು ಉತ್ತರ ನೀಡಿದೆ. ಏಪ್ರಿಲ್ 25 ರಂದು ಪ್ರಧಾನಿಗಳಿಂದ ಈ ಉದ್ಘಾಟನೆ ನಡೆಯಿತು.

"ನಾನು ಆರ್‌ಟಿಐ ಮೂಲಕ ಪಡೆಯುತ್ತಿರುವ ಮಾಹಿತಿಯ ಪ್ರಕಾರ, ಅಂತಹ ಕಾರ್ಯಕ್ರಮಗಳಿಗೆ ಸಾಕಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ ಎಂದು ತಿಳಿದುಬಂದಿದೆ. ಈ ಎಲ್ಲಾ ಹಣವನ್ನು ರೈಲ್ವೇಯಲ್ಲಿನ ಸುರಕ್ಷತಾ ಸೌಲಭ್ಯಗಳನ್ನು ಸುಧಾರಿಸಲು ಬಳಸಬಹುದಿತ್ತು. ರೈಲ್ವೇ ತನ್ನದೇ ಆದ ಸಾರ್ವಜನಿಕ ಸಂಪರ್ಕ ವಿಭಾಗವನ್ನು ಹೊಂದಿದ್ದರೂ, ಇವುಗಳಲ್ಲಿ ಹೆಚ್ಚಿನ ಕೆಲಸಗಳನ್ನು ಖಾಸಗಿ ಏಜೆನ್ಸಿಗಳಿಗೆ ಹೊರಗುತ್ತಿಗೆ ನೀಡಲಾಗಿದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ "ಎಂದು ಬೋಸ್ ಹೇಳಿದ್ದಾರೆ.

ಅಲ್ಲದೆ ನವಂಬರ್ 2022ರಲ್ಲಿ ಆರಂಭವಾದ ಮೈಸೂರು –ಚೆನ್ನೈ ವಂದೇ ಭಾರತ್‌ನ ಉದ್ಘಾಟನೆಗೆ ತಗುಲಿದ ವೆಚ್ಚದ ಬಗ್ಗೆಯೂ ಬೋಸ್ ಕೇಳಿದ್ದರಂತೆ. ಅದಕ್ಕೆ ಉತ್ತರ ಸಿಕ್ಕಿಲ್ಲ.

ವಂದೇ ಭಾರತ್ ರೈಲುಗಳ 'ಯಶಸ್ಸಿನ' ಬಗ್ಗೆ ಹಾಡಿ ಹೊಗಳುತ್ತಿರುವ ಮುಖ್ಯಧಾರೆಯ ಪತ್ರಿಕೆಗಳು ಕೂಡ ಇದು ಭಾರೀ ದುಬಾರಿಯಾಯಿತು ಎಂದಿವೆ.

ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗಳಿಗೆ ಪಾವತಿಸಿದ ಮೊತ್ತವನ್ನು ರೈಲ್ವೆ ನಿಲ್ದಾಣಗಳನ್ನು ಅಲಂಕರಿಸಲು, ಸ್ಥಳವನ್ನು ಹೊಳಪು ಮಾಡಲು ಮತ್ತು ಸ್ವಚ್ಛಗೊಳಿಸಲು ಮತ್ತು ಸಾಮಗ್ರಿಗಳ ಮುದ್ರಣ, ಕಾರ್ಯಕ್ರಮದ ಪ್ರಚಾರ ಮತ್ತು ಇತರ ಕೆಲಸಗಳಿಗೆ ಬಳಸಲಾಗಿದೆ ಎಂದು ದಕ್ಷಿಣ ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ ಎಂದು ವರದಿಯಾಗಿದೆ. ಅಂದರೆ ಈ ಹಣ ಸಾರ್ವಜನಿಕ ಸೌಲಭ್ಯಗಳನ್ನು ಹೆಚ್ಚಿಸಲು ಮಾಡಿರುವ ವೆಚ್ಚ ಅಲ್ಲ ಎಂಬುದು ಸ್ಪಷ್ಟ.

ಈ ದುಬಾರಿ ವೆಚ್ಚ ಕೇಂದ್ರ ಸರ್ಕಾರವು ಪರಿಹರಿಸಲು ವಿಫಲವಾಗಿರುವ ರೈಲ್ವೇಯನ್ನು ಕಾಡುತ್ತಿರುವ ಇತರ ಸಮಸ್ಯೆಗಳಿಂದ ಗಮನವನ್ನು ಬೇರೆಡೆಗೆ ತಿರುಗಿಸುವ ಕಸರತ್ತು ಎಂದು ಬೋಸ್ ಹೇಳಿದ್ದಾರೆ. ಹಾಗೆ ನೋಡಿದರೆ ಒಟ್ಟಾರೆಯಾಗಿ ಪ್ರತಿದಿನ ಭಾರತೀಯ ರೈಲುಗಳು ಹೊತ್ತೊಯ್ಯುವ ಸುಮಾರು 3 ಕೋಟಿ ಪ್ರಯಾಣಿಕರಲ್ಲಿ ಗರಿಷ್ಟ ಸುಮಾರು 2ಲಕ್ಷ ಮಂದಿಯಷ್ಟೇ ಬಳಸಬಲ್ಲ ವಂದೇ ಭಾರತ್ ಬಗ್ಗೆ ಇಷ್ಟೊಂದು ಪ್ರಚಾರವೇ ಏನನ್ನು ತೋರಿಸುತ್ತದೆ ಎಂಬ ಪ್ರಶ್ನೆಯನ್ನೂ ಕೇಳಲಾಗುತ್ತಿದೆ. ಈಗ ಅದರ ಬಣ್ಣವನ್ನೂ ಬದಲಾಯಿಸಲಾಗುತ್ತಿದೆಯೆಂಬ ವರದಿಗಳೂ ಇವೆ.

ಇದುವರೆಗೆ 25 ವಂದೇ ಭಾರತ್ ರೈಲುಗಳ ಉದ್ಘಾಟನೆಯಾಗಿದೆ. ಎಲ್ಲದಕ್ಕೂ ಹಸಿರು ಬಾವುಟ ತೋರಿಸಿದವರು ಪ್ರಧಾನಿಗಳೇ ಎಂದು ಬೇರೆ ಹೇಳಬೇಕಾಗಿಲ್ಲ. ಇತ್ತೀಚೆಗೆ ಸದ್ಯದಲ್ಲೇ ಚುನಾವಣೆ ನಡೆಯಲಿರುವ ಮಧ್ಯಪ್ರದೇಶದ ಭೋಪಾಲ್ ನಿಂದ 2 ವಂದೇಭಾರತ್‌ಗಳು ಸೇರಿದಂತೆ 5 ರೈಲುಗಳ ಉದ್ಘಾಟನೆ ಒಟ್ಟಿಗೇ ನಡೆಯಿತು. ಅದರಲ್ಲಿ ಕರ್ನಾಟಕದ ಬೆಂಗಳೂರು–ಹುಬ್ಬಳ್ಳಿ ವಂದೇ ಭಾರತ್‌ಕೂಡ ಸೇರಿತ್ತು.

ಕಳೆದ ವರ್ಷ ಸ್ವಾತಂತ್ರ್ಯ ದಿನದಂದು ಪ್ರಧಾನಿಗಳು ಮುಂದಿನ ಸ್ವಾತಂತ್ರ್ಯ ದಿನಾಚರಣೆಯ ಮೊದಲು 75 ವಂದೇ ಭಾರತ್ ರೈಲುಗಳು ಓಡಾಡುತ್ತವೆ ಎಂದಿದ್ದರು. ಅದು ಈಡೇರುವಂತೆ ಕಾಣದಿದ್ದರೂ ಮುಂದಿನ ಲೋಕಸಭಾ ಚುನಾವಣೆಯ ಮೊದಲು ಅದನ್ನು ಈಡೇರಿಸಲು ಪ್ರತಿತಿಂಗಳು 6–7 ವಂದೇ ಭಾರತ್ ರೈಲುಗಳ ಉದ್ಘಾಟನೆಗಳು ನಡೆಯಬಹುದು ಎಂದು ನಿರೀಕ್ಷಿಸಲಾಗುತ್ತಿದೆ. ಅಂದರೆ ಇಂತಹ ದುಬಾರಿ ಉದ್ಘಾಟನೆಗಳ ಒಟ್ಟು ಸಂಖ್ಯೆ ಸುಮಾರು 40–50 ಕ್ಕೆ ತಲುಪುತ್ತದೆ ಎಂದೂ ನಿರೀಕ್ಷಿಸಬಹುದು. ಅಂದರೆ ಅದುವರೆಗೆ ಉದ್ಘಾಟನೆಗಳ ವೆಚ್ಚ ಎಷ್ಟಾಗಬಹುದು ಎಂದು ಲೆಕ್ಕ ಹಾಕಬಹುದು.

ಪಿಎಂ–ಎಸ್‌ವೈಎಂ ವಂತಿಗೆದಾರರಲ್ಲಿ 21% ಇಳಿಕೆ

ಜೀವನ ವೆಚ್ಚ ಏರಿಕೆಯಿಂದಾಗಿ ಪ್ರೀಮಿಯಂ ಹಣ ಭರಿಸಲಾದ ಅಸಂಘಟಿತ ವಲಯದ ಕಾರ್ಮಿಕರು

ಪಿಎಂ–ಎಸ್‌ವೈಎಂ ಅಂದರೆ 'ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್–ಧನ್ ಯೋಜನಾ'. ಅಸಂಘಟಿತ ಕಾರ್ಮಿಕರಿಗೆ ಒಂದು ಸಾಮಾಜಿಕ ಭದ್ರತಾ ಯೋಜನೆ ಎಂದು ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಪಿಂಚಣಿ ಯೋಜನೆ. ಈ ವರ್ಷದ ಆರಂಭದಲ್ಲಿ ಈ ಯೋಜನೆಯ ಚಂದಾದಾರರ ಸಂಖ್ಯೆ 56.2 ಲಕ್ಷ ಇತ್ತು. ಜುಲೈ 11ರ ವೇಳೆಗೆ ಇದು 44.3 ಲಕ್ಷಕ್ಕೆ ಇಳಿದಿದೆ ಎಂದು ವರದಿಯಾಗಿದೆ. ಅಂದರೆ ಸುಮಾರು 12ಲಕ್ಷ ಅಸಂಘಟಿತ ವಲಯದ ಕಾರ್ಮಿಕರು ಈ ಯೋಜನೆಯಿಂದ ಹೊರಹೋಗಿದ್ದಾರೆ. ಇದಕ್ಕೆ ಮುಖ್ಯ ಕಾರಣ ಹಣದುಬ್ಬರ ಮತ್ತು ಜೀವನ ವೆಚ್ಚದಲ್ಲಿ ಅಸಹನೀಯ ಏರಿಕೆ ಎನ್ನಲಾಗಿದೆ.

60 ವರ್ಷ ದಾಟಿದ ಚಂದಾದಾರರಿಗೆ ತಿಂಗಳಿಗೆ ಕನಿಷ್ಟ 3,000 ರೂಪಾಯಿ ಪಿಂಚಣಿ ನೀಡುವ ಯೋಜನೆ ಇದು. ಆದರೆ, ಹಿಂದಿನ ಸಂಚಿಕೆ(ಪುಟ11)ಯಲ್ಲಿ ಪ್ರಕಟವಾದ ಲೇಖನದಲ್ಲಿ ಹೇಳಿರುವಂತೆ, ಇತರ ಹಲವು ಯೋಜನೆಗಳಂತೆ ಇದರಲ್ಲಿ 'ಪ್ರಧಾನ ಮಂತ್ರಿ' ಎಂದಿದ್ದರೂ, ಇದು ಸಂಪೂರ್ಣವಾಗಿ ಒಕ್ಕೂಟ ಸರ್ಕಾರದ ಸೌಲಭ್ಯವಲ್ಲ. ಸಾರ್ವಜನಿಕ ವಲಯದ ಎಲ್‌ಐಸಿ ಮೂಲಕ ಅದು ಒದಗಿಸಿರುವ 'ಸ್ವಯಂಪ್ರೇರಿತ ಮತ್ತು ವಂತಿಕೆ–ಆಧಾರಿತ ಪಿಂಚಣಿ ಯೋಜನೆ'ಯಾಗಿದೆ. ಬೇರೆ ಯಾವುದೇ ಪಿಂಚಣಿ ಯೋಜನೆಯ ಫಲಾನುಭವಿಗಳಲ್ಲದವರು ಮತ್ತು 15,000 ರೂ.ಗಿಂತ ಕಡಿಮೆ ಆದಾಯದ 18–40 ವಯೋಗುಂಪಿನವರು ಇದಕ್ಕೆ ಚಂದಾದಾರರಾಗಬಹುದು, ಅವರು ವಯಸ್ಸಿನ ಆಧಾರದಲ್ಲಿ ಮಾಸಿಕ 55ರೂ.ನಿಂದ 200ರೂ. ವರೆಗೆ ವಂತಿಗೆ ನೀಡಬಹುದು. ಆ ಮೊತ್ತಕ್ಕೆ ಸಮನಾದ ಮೊತ್ತವನ್ನು ಒಕ್ಕೂಟ ಸರ್ಕಾರ ತುಂಬುತ್ತದೆ ಎಂಬುದು ಈ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಕೊಡುಗೆ. 60 ವರ್ಷ ತುಂಬು ವರೆಗೂ ವಂತಿಗೆ ನೀಡುತ್ತಿದ್ದರೆ, ನಂತರ ಕನಿಷ್ಟ 3000 ರೂ. ಮಾಸಿಕ ಪಿಂಚಣಿಗೆ ಅರ್ಹರಾಗುತ್ತಾರೆ. ಇಲ್ಲವಾದರೆ, ಅವರ ವಂತಿಗೆಯನ್ನು ಮಾತ್ರ ಬಡ್ಡಿ ಸಹಿತ ಹಿಂದಿರುಗಿಸಲಾಗುವುದು. ವಂತಿಗೆಯ ಅವಧಿ 10 ವರ್ಷಗಿಂತ ಕಡಿಮೆಯಿದ್ದರೆ ಈ ಬಡ್ಡಿದರ ಬ್ಯಾಂಕ್ ಉಳಿತಾಯ ಖಾತೆಯ ಬಡ್ಡಿದರದಷ್ಟು(ಅಂದರೆ ಈಗ ವಾರ್ಷಿಕ 3% ಕ್ಕಿಂತಲೂ ಕಡಿಮೆ).

ಆದರೂ ಕಳೆದ ಆರು ತಿಂಗಳಲ್ಲಿ 11.9 ಲಕ್ಷ ಕಾರ್ಮಿಕರು ಈ ಯೋಜನೆಯ ಪ್ರೀಮಿಯಂ ಮೊತ್ತ ಪಾವತಿ ಮಾಡಲಾಗದೆ ಅದರಿಂದ ಹೊರ ಹೋಗಿದ್ದಾರೆ ಎಂದು ತಜ್ಞರು ಹೇಳುತ್ತಾರೆ.

ವಿದೇಶಿ ಸಾಲಗಳ ಸರಳ ಅರ್ಥಶಾಸ್ತ್ರ ಮತ್ತು ಮೂರನೇ ಜಗತ್ತಿನ ದೇಶಗಳು

ಮೂರನೇ ಜಗತ್ತಿನ ದೇಶಗಳಿಗೆ ಮುಂದುವರಿದ ಬಂಡವಾಳಶಾಹಿ ದೇಶಗಳು ನೀಡುವ ಸಾಲಗಳು ಅವುಗಳು ತಮ್ಮ ಆಂತರಿಕ ಬಳಕೆಯನ್ನೋ, ಹೂಡಿಕೆಯನ್ನೋ 'ತ್ಯಾಗ' ಮಾಡಿ ನೀಡಿದ ಮೊತ್ತಗಳು ಎಂಬ ಭಾವನೆಯಿದೆ. ಇದು ನಿಜವಲ್ಲ. ವಾಸ್ತವವಾಗಿ ಇದರ ಪರಿಣಾಮವಾಗಿ ಅವರ ಆಂತರಿಕ ಬಳಕೆಯು ಹೆಚ್ಚುತ್ತದೆ, ಅದಕ್ಕೆ ಸಮನಾಗಿ ಅವರ ಒಟ್ಟು ಉತ್ಪಾದನೆಯೂ (ಆದಾಯವೂ) ಹೆಚ್ಚುತ್ತದೆ ಮತ್ತು ಅದಕ್ಕನುಗುಣವಾಗಿ ಅವರಲ್ಲಿ ಉದ್ಯೋಗದ ಮಟ್ಟವೂ ಹೆಚ್ಚುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರ ಆರ್ಥಿಕ ಪರಿಸ್ಥಿತಿಗಳು ಸಾಲ ನೀಡುವ ಮೊದಲು ಇದ್ದುದಕ್ಕಿಂತ ಉತ್ತಮಗೊಳ್ಳುತ್ತದೆ. ಇದು ಸರಳ ಅರ್ಥಶಾಸ್ತ್ರ. ಆದರೆ ಇದನ್ನು ಐಎಂಎಫ್, ವಿಶ್ವ ಬ್ಯಾಂಕ್ ಅರ್ಥಶಾಸ್ತ್ರಜ್ಞರು ಮರೆಮಾಚುತ್ತಾರೆ. ಕಠಿಣ ಶರತ್ತುಗಳನ್ನು ವಿಧಿಸುತ್ತಾರೆ. ಈ ಬಗ್ಗೆ ಸಾಲಗಾರ–ಮತ್ತು ಸಾಲದಾತ ದೇಶಗಳ ನಡುವೆ ಚರ್ಚೆ ನಡೆಯಬೇಕು, ಇದಕ್ಕೆ ಜಿ–20ರಲ್ಲಿರುವ ತೃತೀಯ ಜಗತ್ತಿನ ದೇಶಗಳು, ಜಿ–20ರ ಪ್ರಸಕ್ತ ಅಧ್ಯಕ್ಷ ದೇಶವಾಗಿ ಭಾರತ ಮುಂದಡಿಯಿಡಬೇಕು. ಆಗ ಜಿ–20ರ ಅಧ್ಯಕ್ಷತೆ ಸಾರ್ಥಕವಾಗುತ್ತದೆ.


ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಭಾರತ ಮತ್ತು ಇತರ ಮೂರನೆಯ ಜಗತ್ತಿನ ದೇಶಗಳು ಜಿ–20 ಶೃಂಗಸಭೆಯಲ್ಲಿ ಇಡೀ ಮೂರನೆಯ ಜಗತ್ತಿನ ದೇಶಗಳು ಸಮಾನವಾಗಿ ಎದುರಿಸುತ್ತಿರುವ ತುರ್ತಿನ ಸಮಸ್ಯೆಗಳನ್ನು ಎತ್ತಿದಾಗ ಮಾತ್ರ, ಸಾಮ್ರಾಜ್ಯಶಾಹಿ ಶಕ್ತಿಗಳೊಂದಿಗೆ ಅವು ಜಿ–20 ಶೃಂಗಸಭೆಯ ಭಾಗವಾಗಿರುವುದನ್ನು ನೈತಿಕವಾಗಿ ಸಮರ್ಥಿಸಿಕೊಳ್ಳಬಹುದು. ಅಂತಹ ಸಮಸ್ಯೆಗಳ ಪೈಕಿ ಅತ್ಯಂತ ಪ್ರಮುಖವಾದುದೆಂದರೆ, ಬಹುಶಃ, ನವ–ಉದಾರವಾದಿ ಬಂಡವಾಳ ಶಾಹಿಯ ಪ್ರಸ್ತುತ ಬಿಕ್ಕಟ್ಟಿನ ಕಾರಣದಿಂದಾಗಿ ಮುನ್ನೆಲೆಗೆ ಬಂದಿರುವ ಈ ದೇಶಗಳ ಬಾಹ್ಯ ಸಾಲದ ಸಮಸ್ಯೆಯೇ. ಈ ಸಮಸ್ಯೆಗೆ ಪರಿಹಾರ ಪಡೆಯುವ ವಿಷಯವನ್ನು ಮುಂದಿನ ಜಿ–20 ಶೃಂಗಸಭೆಯ ಆತಿಥ್ಯ ವಹಿಸಿರುವ ಮತ್ತು ಅದರ ಅಧ್ಯಕ್ಷನಾಗುವ ಭಾರತವು ಜಿ–20 ಸಭೆಯಲ್ಲಿ ಪ್ರಸ್ತಾಪಿಸಬೇಕು. ಬಾಹ್ಯ ಸಾಲದ ಸಮಸ್ಯೆ ಬಗ್ಗೆ ಬಹಳ ಗೊಂದಲವಿರುವುದರಿಂದ, ಸರಳ ಅರ್ಥಶಾಸ್ತ್ರದ ಮೂಲಕ ಒಂದಿಷ್ಟು ಸ್ಪಷ್ಟತೆಯನ್ನು ಪಡೆಯಬಹುದು. ಅದು ಹೇಗೆಂಬುದನ್ನು ನೋಡೋಣ.

ಮೂರನೇ ಜಗತ್ತಿನ ಬಾಹ್ಯ ಸಾಲದ ಬಗ್ಗೆ ಸಾಮಾನ್ಯವಾಗಿರುವ ಒಂದು ಗ್ರಹಿಕೆ ಎಂದರೆ, ಮುಂದುವರಿದ ಬಂಡವಾಳಶಾಹಿ ದೇಶಗಳು ಈ ಸಾಲಗಳನ್ನು ನೀಡಲು ಬೇಕಾಗುವ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಲು ತಮ್ಮ ಆಂತರಿಕ ಬಳಕೆಯನ್ನೊ ಅಥವಾ ಹೂಡಿಕೆಯನ್ನೊ ತ್ಯಜಿಸಿದ್ದವು ಎಂಬುದು. ಮುಂದುವರಿದ ದೇಶಗಳ ಹಣಕಾಸು ಸಂಸ್ಥೆಗಳಿಂದ ಪಡೆದ ಈ ಸಾಲಗಳನ್ನು ಮೂರನೇ ಜಗತ್ತಿನ ದೇಶಗಳು ತಮ್ಮ ಚಾಲ್ತಿ ಖಾತೆ ಕೊರತೆಯನ್ನು ಸರಿದೂಗಿಸಿಕೊಂಡ ನಂತರ ಉಳಿದ ಮೊತ್ತವನ್ನು ತಮ್ಮ ವಿದೇಶಿ ವಿನಿಮಯ ಮೀಸಲುಗಳಿಗೆ ಸೇರಿಸಿಕೊಳ್ಳುತ್ತವೆ. ಆದ್ದರಿಂದ ಅದು ನಿವ್ವಳ ಸಾಲವಾಗುವುದಿಲ್ಲ. ಒಂದು ನಿರ್ದಿಷ್ಟ ವರ್ಷದಲ್ಲಿ ಉಂಟಾದ ಚಾಲ್ತಿ ಖಾತೆ ಕೊರತೆಗಾಗಿ ಹಣ ಹೊಂದಿಸಿಕೊಂಡ ಒಂದು ನಿರ್ದಿಷ್ಟ ನಿವ್ವಳ ಸಾಲವೂ ಇದ್ದಿರಬಹುದು. ಅಂಥಹ ಒಂದು ಕೊರತೆ ಇಲ್ಲದಿದ್ದ ಸನ್ನಿವೇಶದಲ್ಲೂ, ಸಾಲದ ಮೇಲೆ ಚಕ್ರಬಡ್ಡಿ ವಿಧಿಸುವ ಕಾರಣದಿಂದ ನಿವ್ವಳ ಸಾಲದ ಮೊತ್ತವು ಬೆಳೆಯುತ್ತಲೇ ಹೋಗುತ್ತದೆ. ಆದರೆ, ಈ ಎಲ್ಲ ನಿವ್ವಳ ಸಾಲಗಳನ್ನೂ ಪ್ರಾಥಮಿಕವಾಗಿ ಚಾಲ್ತಿ ಖಾತೆ ಕೊರತೆಗಳನ್ನು ಸರಿದೂಗಿಸುವ ಉದ್ದೇಶಕ್ಕಾಗಿಯೇ ಪಡೆಯಲಾಗಿರುತ್ತದೆ. ಜೊತೆಗೆ, ಈ ಸಾಲಗಳ ನೀಡಿಕೆಯು ಆ ದೇಶಗಳ ತ್ಯಾಗದ ಒಂದು ಪ್ರತೀಕವಾಗಿರುವುದರಿಂದ, ನಂತರದ ದಿನಗಳಲ್ಲಿ ಈ ಸಾಲಗಳನ್ನು ತೀರಿಸಬೇಕಾಗುತ್ತದೆ.

ತಪ್ಪು ಗ್ರಹಿಕೆ

ಈ ಇಡೀ ಗ್ರಹಿಕೆಯೇ ತಪ್ಪು ಎಂಬುದನ್ನು ಸರಳ ಅರ್ಥಶಾಸ್ತ್ರವೇ ತೋರಿಸುತ್ತದೆ. ಹೇಗೆಂದರೆ, ಯಾವುದೇ ಒಂದು ಸರಕಿನ ಪೂರೈಕೆಗೆ ಹೋಲಿಸಿದರೆ, ಅದರ ಮೇಲಿನ ಬೇಡಿಕೆಯು ಇಳಿದಾಗ ಅದರ ಹೊಂದಾಣಿಕೆಯು ಮೂರು ರೀತಿಯಲ್ಲಿ ಸಾಧ್ಯವಿದೆ: ಆ ಸರಕಿನ ಬೆಲೆ ಕುಸಿಯಬಹುದು ಅಥವಾ ಆ ಸರಕನ್ನು ದಾಸ್ತಾನಿನಲ್ಲಿ ಇಟ್ಟುಕೊಳ್ಳಬಹುದು ಅಥವಾ ಆ ಸರಕಿನ ಉತ್ಪಾದನೆ ಕುಸಿಯಬಹುದು. ಈಗ, ತಯಾರಿಕಾ ಸರಕುಗಳ (ಮತ್ತು ಸೇವೆಗಳ) ಬೆಲೆ ಕುಸಿಯುವ ಬಗ್ಗೆ ಹೇಳುವುದಾದರೆ, ಅವುಗಳ ಬೆಲೆಗಳನ್ನು ಸಾಮಾನ್ಯವಾಗಿ ಹಿಡಿಯಷ್ಟು ಪ್ರಬಲ ಉತ್ಪಾದಕರ(ಒಲಿಗೋಪೊಲಿಸ್ಟಿಕ್) ಕೂಟದವರು ನಿರ್ಧರಿಸುತ್ತಾರೆ. ಆದ್ದರಿಂದ (ಬಹುಶಃ ಅವರ ಒಂದು ಅಲ್ಪಾವಧಿ ಕುಟಿಲ ತಂತ್ರವನ್ನು ಹೊರತುಪಡಿಸಿ) ಅವುಗಳ ಬೆಲೆಗಳು ಇಳಿಯುವುದಿಲ್ಲ. ಅಂತೆಯೇ, ಆ ಸರಕಿನ ದಾಸ್ತಾನುಗಳು ಸಂಗ್ರಹದಲ್ಲಿ ಹಾಗೆಯೇ ಉಳಿದಿದ್ದರೆ, ತ್ವರಿತವಾಗಿ ಅವುಗಳನ್ನು ಬಳಸಿಕೊಳ್ಳಲಾಗುತ್ತದೆ. ಹಾಗಾಗಿ, ಬೃಹತ್ ದಾಸ್ತಾನುಗಳು ಹೆಚ್ಚು ಕಾಲ ಹಾಗೆಯೇ ಉಳಿಯುವುದಿಲ್ಲ. ಅಂತೆಯೇ, ಆ ಸರಕಿನ ಬೇಡಿಕೆಯ ಕುಸಿತವು ಅದರ ಉತ್ಪಾದನೆಯನ್ನು ಮೊಟಕುಗೊಳಿಸಲು ಕಾರಣವಾಗುತ್ತದೆ. ಹಾಗಾಗಿ, ಅರ್ಥವ್ಯವಸ್ಥೆಯನ್ನು ಒಟ್ಟಾಗಿ ನೋಡಿದರೆ, ಅಂದರೆ ಎಲ್ಲಾ ಸರಕುಗಳ (ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿರುವ ಹಾಗೆ ಇವು ಸಾಮಾನ್ಯವಾಗಿ ತಯಾರಿಸಿದ ಸರಕುಗಳು ಮತ್ತು ಸೇವೆಗಳಾಗಿದ್ದರೆ), ಉತ್ಪಾದನೆಯು ಯಾವುದೇ ಸಮಯದಲ್ಲಿ ಗಮನಿಸಿದಾಗಲೂ ಅದೇ ಆಗಿರುತ್ತದೆ. ಏಕೆಂದರೆ, ಅದರ ಮೇಲಿನ ಬೇಡಿಕೆಯು ಹೆಚ್ಚುವುದೂ ಇಲ್ಲ ಅಥವಾ ಇಳಿಯುವುದೂ ಇಲ್ಲ. ಹಾಗಾಗಿಯೇ, ಬಂಡವಾಳಶಾಹಿಯು ಒಂದು ಬೇಡಿಕೆ–ನಿರ್ಬಂಧಿತ ವ್ಯವಸ್ಥೆಯಾಗಿದೆ: ಬಂಡವಾಳಶಾಹಿಯ ಅಡಿಯಲ್ಲಿ, ಯಾವುದೇ ಒಂದು ನಿರ್ದಿಷ್ಟ ಅವಧಿಯಲ್ಲಿ, ಒಟ್ಟು ಬೇಡಿಕೆಯು ಸಾಕಷ್ಟು ಇಲ್ಲದ ಪರಿಸ್ಥಿತಿಯಲ್ಲಿ ಉತ್ಪಾದನೆಯನ್ನು ಮತ್ತು ಉದ್ಯೋಗವನ್ನು ಹೆಚ್ಚಿಸುವುದಿಲ್ಲ.



ಈಗ ಮೂರನೇ ಜಗತ್ತಿನ ದೇಶಗಳ ಚಾಲ್ತಿ ಖಾತೆ ಕೊರತೆಯ ಬಗ್ಗೆ ಹೇಳುವುದಾದರೆ, ಮೆಟ್ರೋಪಾಲಿಟನ್(ಮುಂದುವರೆದ) ದೇಶಗಳಿಗೆ ಹೋಲಿಸಿದರೆ ಮೂರನೇ ಜಗತ್ತಿನ ದೇಶಗಳ ಪ್ರಸ್ತುತ ಚಾಲ್ತಿ ಖಾತೆ ಕೊರತೆಗಳು, ಮೆಟ್ರೋಪಾಲಿಟನ್ ದೇಶಗಳ ಚಾಲ್ತಿ ಖಾತೆಯ ಮಿಗುತೆಯಲ್ಲದೆ ಬೇರೇನೂ ಅಲ್ಲ. ಈ ಮಿಗುತೆ ಎಂಬುದು ಒಟ್ಟಾರೆ ಬೇಡಿಕೆಯ ಒಂದು ಅಂಗ. ಈ ಮಿಗುತೆಯು ಇಲ್ಲದಿದ್ದರೆ, ಅಷ್ಟರ ಮಟ್ಟದ ಉತ್ಪಾದನೆಯೂ ಇರುವುದಿಲ್ಲ. ಮೂರನೇ ಜಗತ್ತಿನ ದೇಶಗಳು ಮೆಟ್ರೋಪಾಲಿಟನ್ ದೇಶಗಳಿಂದ ಪಡೆದ ನಿಜ ಸರಕುಗಳು ಮತ್ತು ಸೇವೆಗಳು ನಿಖರವಾಗಿ ಈ ಸಾಲಗಳನ್ನು ನೀಡಿದ್ದರಿಂದಲೇ ಉತ್ಪಾದಿಸಲ್ಪಟ್ಟಿರುತ್ತವೆ. ಹಾಗಾಗಿ, ಮೂರನೇ ಜಗತ್ತಿನ ದೇಶಗಳಿಗೆ ಈ ಸಾಲಗಳನ್ನು ನೀಡುವ ಮೆಟ್ರೋಪಾಲಿಟನ್ ದೇಶಗಳು ತಮ್ಮ ಆಂತರಿಕ ಬಳಕೆಯನ್ನಾಗಲಿ ಅಥವಾ ಹೂಡಿಕೆಯನ್ನಾಗಲಿ ಮೊಟಕುಗೊಳಿಸುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ.

ಸರಳ ಅರ್ಥಶಾಸ್ತ್ರ

ಈ ಅಂಶವನ್ನು ಒಂದು ಉದಾಹರಣೆಯ ಮೂಲಕ ನೋಡೋಣ: ಮೂರನೇ ಜಗತ್ತಿನ ದೇಶಗಳಿಗೆ ಹೋಲಿಸಿದರೆ, ಮೆಟ್ರೋಪಾಲಿಟನ್ ದೇಶಗಳ ಚಾಲ್ತಿ ಖಾತೆಯ ಮಿಗುತೆಯು $100 ಎಂದು ಭಾವಿಸೋಣ. ಈ $100 ಮಿಗುತೆಯು, ಮೆಟ್ರೋಪಾಲಿಟನ್ ದೇಶಗಳು ತಮ್ಮ ಆಂತರಿಕ ಹೂಡಿಕೆಗೆ ಹಣ ಒದಗಿಸಿಕೊಂಡ ನಂತರವೂ ಅಧಿಕವಾಗಿ ಉಳಿದ ಉಳಿತಾಯವೇ ಆಗಿರುತ್ತದೆ. ಅವರ ಉಳಿತಾಯದ ಅನುಪಾತವು (ಅಂದರೆ, ಉಳಿತಾಯವನ್ನು ರಾಷ್ಟ್ರೀಯ ಆದಾಯದಿಂದ ಭಾಗಿಸಲಾದ ಅಂಶವು) ಒಂದು ವೇಳೆ ಶೇ. 25ರಷ್ಟಿದ್ದರೆ, ಈ $100 ಮಟ್ಟದ ಮಿಗುತೆಯನ್ನು ಪಡೆಯಲು, ಅವರ ಆದಾಯವು $400ರ ಮಟ್ಟಕ್ಕೆ ಏರಬೇಕಾಗುತ್ತದೆ. ಅಂದರೆ, ಅವರ ಬಳಕೆಯು $300ರ ಮಟ್ಟಕ್ಕೆ (ಅಂದರೆ $400–100) ಏರಬೇಕಾಗುತ್ತದೆ. ಅಂದರೆ, ಮೆಟ್ರೋಪಾಲಿಟನ್ ದೇಶಗಳು ನೀಡಿದ ಸಾಲಗಳು ಅವರ ಬಳಕೆಯನ್ನು ಕಡಿಮೆ (ತ್ಯಾಗ) ಮಾಡುವುದರ ಬದಲು, ಸಾಲ ಮೊತ್ತದ ಮೂರು ಪಟ್ಟು ಹೆಚ್ಚು ಬಳಕೆಗೆ ಕಾರಣವಾಗುತ್ತವೆ. ಹಾಗಾಗಿ, ಮೆಟ್ರೋಪಾಲಿಟನ್ ದೇಶಗಳು ಮೂರನೇ ಜಗತ್ತಿಗೆ ಸಾಲ ನೀಡುವಲ್ಲಿ ಅವರು ಹೇಳಿಕೊಳ್ಳುವ ಬಳಕೆಯ ತ್ಯಾಗಕ್ಕೆ ವ್ಯತಿರಿಕ್ತವಾಗಿ ಅವರ ಆಂತರಿಕ ಬಳಕೆಯು (ಸಾಲದ ಕಾರಣದಿಂದ) ಹೆಚ್ಚುತ್ತದೆ. ಸಾಲ ನೀಡದಿದ್ದರೆ ಅದು ಸಾಧ್ಯವಾಗುತ್ತಿರಲಿಲ್ಲ. ಅವರ ಬಳಕೆಯ ಈ ಹೆಚ್ಚಳ ಮತ್ತು ಅವರು ನೀಡಿದ ಸಾಲಗಳ ಮೊತ್ತಕ್ಕೆ ಸಮನಾದ ಮೊತ್ತದಷ್ಟು ಅವರ ಒಟ್ಟು ಉತ್ಪಾದನೆಯೂ (ಆದಾಯವೂ) ಹೆಚ್ಚುತ್ತದೆ ಮತ್ತು ಅದಕ್ಕನುಗುಣವಾಗಿ ಉದ್ಯೋಗದ ಮಟ್ಟವೂ ಹೆಚ್ಚುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮೆಟ್ರೋಪಾಲಿಟನ್ ದೇಶಗಳು ನೀಡುವ ಸಾಲಗಳು ಅವರ ಒಟ್ಟು ಆದಾಯದ ಮೇಲೆ "ಗುಣಕ" ಪರಿಣಾಮ ಬೀರುತ್ತವೆ. ಅಂದರೆ, ಅವರ ಉಳಿತಾಯದ ಅನುಪಾತವು ಒಂದು ವೇಳೆ ಶೇ. 25ರಷ್ಟಿದ್ದರೆ, ಅವರ ವರಮಾನವು ಅದರ ನಾಲ್ಕರಷ್ಟಿರುತ್ತದೆ.

ಇದೆಲ್ಲವೂ ಸರಳ ಅರ್ಥಶಾಸ್ತ್ರವೇ. (ಶಾಲಾ ಪಠ್ಯಪುಸ್ತಕಗಳು ಸಹ ಇವೆಲ್ಲವನ್ನೂ ಕಲಿಸುತ್ತಿದ್ದವು. ಆದರೆ, ವಿಚಾರಹೀನತೆಯಲ್ಲಿ ಒಲವುಳ್ಳ ಬಿಜೆಪಿ ಸರ್ಕಾರವು ಅದನ್ನು ಪಠ್ಯಪುಸ್ತಕಗಳಲ್ಲಿ ಇನ್ನೂ ಉಳಿಸಿಕೊಂಡಿದೆಯೇ ಎಂಬುದು ನನಗೆ ತಿಳಿದಿಲ್ಲ). ವಿಷಯವೆಂದರೆ, ಮೆಟ್ರೋಪಾಲಿಟನ್ ದೇಶಗಳು ಮೂರನೇ ಜಗತ್ತಿನ ದೇಶಗಳಿಗೆ ನೀಡಿದ ಸಾಲಗಳನ್ನು ಸಂಪೂರ್ಣವಾಗಿ ಮನ್ನಾ ಮಾಡಿದರೂ, ಅವರ ಪರಿಸ್ಥಿತಿಯೇನೂ ಹದಗೆಡುವುದಿಲ್ಲ. ವಾಸ್ತವವಾಗಿ, ಸಾಲ ನೀಡಿದ ನಂತರ, ಸಾಲ ನೀಡಿದ ಕಾರಣದಿಂದಾಗಿ ಉಂಟಾಗುವ ಬಳಕೆಯ ಹೆಚ್ಚಳ ಮತ್ತು ಉದ್ಯೋಗಗಳ ಹೆಚ್ಚಳದಿಂದಾಗಿ ಅವರ ಆರ್ಥಿಕ ಪರಿಸ್ಥಿತಿಗಳು ಸಾಲ ನೀಡುವ ಮೊದಲು ಇದ್ದುದಕ್ಕಿಂತಲೂ ಉತ್ತಮವಾಗಿರುತ್ತವೆ.

ಈ ಎಲ್ಲ ಪರಿಣಾಮಗಳೂ ಸಾಲ ನೀಡಿದ್ದರಿಂದಾಗಿಯೇ ಉಂಟಾಗುತ್ತವೆ ಎಂಬುದನ್ನು ಮತ್ತು ಅದರ ಹಿಂದಿರುವ ಸರಳ ಅರ್ಥಶಾಸ್ತ್ರವನ್ನು ಮರೆಮಾಚಲು ಬ್ರೆಟ್ಟನ್ ವುಡ್ಸ್ ಸಂಸ್ಥೆಗಳು, ಮೆಟ್ರೋಪಾಲಿಟನ್ ಹಣಕಾಸು ಹಿತಾಸಕ್ತಿಗಳು ಮತ್ತು ತಮ್ಮ ಬೋಧನಾ ಶಾಖೆಯನ್ನು ಮಾರ್ಕ್ಸ್ ಕರೆದಿದ್ದ ರೀತಿಯ "ಕಳಪೆ ಅರ್ಥಶಾಸ್ತ್ರ"ವಾಗಿ ಪರಿವರ್ತಿಸಿದ ವೃತ್ತಿಪರ ಅರ್ಥಶಾಸ್ತ್ರಜ್ಞರು ಪ್ರಯತ್ನಿಸುತ್ತಾರೆ. ನಿಜ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆಯೂ ಒಂದು "ತ್ಯಾಗ"ದ ಕಥನವನ್ನೇ (ಬಂಡವಾಳಶಾಹಿ ಅರ್ಥವ್ಯವಸ್ಥೆಗಳು ನಿರಂತರವಾಗಿ ಪೂರೈಕೆ–ನಿರ್ಬಂಧಿತವಾಗಿವೆಯೋ ಎಂಬಂತೆ) ಹೆಣೆಯುವುದೂ ಅಲ್ಲದೆ, ಸಾಲಗಳನ್ನು ನೀಡಲು ಲಭ್ಯವಿರುವ ಹಣದ ಪ್ರಮಾಣವು ಯಾವಾಗಲೂ ಸೀಮಿತವಾಗಿರುತ್ತದೆ ಎನ್ನುವ ಹಣ ಸಂಪನ್ಮೂಲಗಳ ಕೊರತೆಯನ್ನೂ ಸಹ ಅವರು ಹೆಣೆಯುತ್ತಾರೆ!

ಕೀನ್ಸ್ ಹೇಳಿಕೆ ಮತ್ತು ಬ್ರಾಂಟ್ ಆಯೋಗದ ಶಿಫಾರಸು

ಮಹಾ ಕುಸಿತದ ಸಂದರ್ಭದಲ್ಲಿ ಪ್ರಸಿದ್ಧ ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ ಅವರು ವಿಚಿತ್ರವಾಗಿ ತೋರುವ ಒಂದು ಹೇಳಿಕೆಯನ್ನು ನೀಡಿದ್ದರು. ಅದೇನೆಂದರೆ, ನಿರುದ್ಯೋಗಿಗಳನ್ನು ರಸ್ತೆಗಳಲ್ಲಿ ಗುಂಡಿ ತೋಡುವುದಕ್ಕಾಗಿ ಮತ್ತು ತಕ್ಷಣವೇ ಅದೇ ಗುಂಡಿಗಳನ್ನು ಮುಚ್ಚುವುದಕ್ಕಾಗಿ ನೇಮಿಸಿಕೊಂಡರೂ ಸಹ, ಸಮಾಜವು ರಸ್ತೆಗಳಲ್ಲಿ ಗುಂಡಿ ತೋಡುವ ಮೊದಲು ಇದ್ದದ್ದಕ್ಕಿಂತಲೂ ಉತ್ತಮವಾಗಿಯೇ ಇರುತ್ತದೆ ಎಂಬುದನ್ನು. ಅಂಥಹ ಒಂದು "ಅತ್ಯಂತ ನಿಷ್ಪ್ರಯೋಜಕ" ಎನ್ನಬಹುದಾದ ಯೋಜನೆಗೂ ಸಹ ಒಂದು ವೇಳೆ $100 ಖರ್ಚು ಮಾಡಿದ್ದೇ ಆದರೆ, ಅದು $300 ಮೊತ್ತದ ಬಳಕೆಯನ್ನು (ಮತ್ತು ಅದಕ್ಕನುಗುಣವಾಗಿ ಅಧಿಕ ಉದ್ಯೋಗಗಳನ್ನೂ) ಸೃಜಿಸುವಲ್ಲಿ ಪರಿಣಮಿಸುತ್ತದೆ ಮತ್ತು ಸಾಮಾಜಿಕವಾಗಿ ಅದು ಒಂದು ಉತ್ತಮ ಪರಿಸ್ಥಿತಿಯನ್ನೂ ನಿರ್ಮಿಸುತ್ತದೆ. ಅದೇ ರೀತಿಯಲ್ಲಿ, ಮೂರನೇ ಜಗತ್ತಿಗೆ $100 ಸಾಲವನ್ನು ಮನ್ನಾ ಮಾಡುವ ಕ್ರಮವು ರಸ್ತೆಗಳಲ್ಲಿ ಗುಂಡಿ ತೋಡುವ ಮತ್ತು ಅದೇ ಗುಂಡಿಗಳನ್ನು ತಕ್ಷಣವೇ ಮುಚ್ಚಲು ಮಾಡುವ $100 ಖರ್ಚುಗಳಿಗೆ ಹೋಲುತ್ತದೆ ಮತ್ತು ಆ ದೇಶಗಳ ಪರಿಸ್ಥಿತಿಯನ್ನು ಮತ್ತಷ್ಟು ಉತ್ತಮವಾಗಿಸುತ್ತದೆ.

ಸಾಂದರ್ಭಿಕವಾಗಿ ಹೇಳುವುದಾದರೆ, ಈ ರೀತಿಯ ಚಿಂತನೆಯೇ, ಮುಂದುವರಿದ ದೇಶಗಳು ಪ್ರತಿ ವರ್ಷ ತಮ್ಮ ಜಿಡಿಪಿಯ ಶೇ. ಒಂದರಷ್ಟು ಹಣವನ್ನು ಹಿಂದುಳಿದ ದೇಶಗಳಿಗೆ ಅನುದಾನ ನೀಡುವುದಕ್ಕಾಗಿ ಮೀಸಲಿಡಬೇಕು ಎಂಬ ಬ್ರಾಂಟ್ ಆಯೋಗದ ಶಿಫಾರಸಿನ ಹಿಂದಿರುವ ಆಲೋಚನೆಯಾಗಿತ್ತು. ಈ ಶಿಫಾರಸನ್ನು ಜಾರಿ ಮಾಡುವುದರಿಂದ ಮುಂದುವರಿದ

ಪುಟ 14 ಕ್ಕೆ

ವಿದೇಶಿ ಸಾಲಗಳ ಸರಳ ಅರ್ಥಶಾಸ್ತ್ರ....

ಪುಟ 13 ರಿಂದ

ದೇಶಗಳಿಗೆ ಎಳ್ಳಷ್ಟೂ ಹಾನಿಯಾಗುವುದಿಲ್ಲ. ಏಕೆಂದರೆ, ಈ ದೇಶಗಳು ಹೊಂದಿರುವ ಆರ್ಥಿಕ ವ್ಯವಸ್ಥೆಗಳು ಬೇಡಿಕೆ–ನಿರ್ಬಂಧಿತವಾಗಿವೆ. ಆದ್ದರಿಂದ, ಹಾನಿಯಾಗುವುದಕ್ಕೆ ತದ್ವಿರುದ್ಧವಾಗಿ, ಇಂಥಹ ಅನುದಾನಗಳ "ಗುಣಕ ಪರಿಣಾಮ"ಗಳು ಆ ದೇಶಗಳಿಗೆ ಪ್ರಯೋಜನಕಾರಿಯಾಗುತ್ತವೆ.

ಮೂರನೇ ಜಗತ್ತಿನ ದೇಶಗಳು ತಮ್ಮ ಬಾಹ್ಯ ಸಾಲಗಳನ್ನು ಮೆಟ್ರೋಪಾಲಿಟನ್ ದೇಶಗಳಿಂದ ಮಾತ್ರ ಪಡೆದಿವೆ ಮತ್ತು ಬಾಕಿ ಉಳಿಸಿಕೊಂಡಿವೆ ಎಂದು ನಾವು ಈವರೆಗೂ ಭಾವಿಸಿಕೊಂಡಿದ್ದೆವು. ಅದು ನಿಜವಲ್ಲ. ಚೀನಾ ಮತ್ತು ತೈಲ ಉತ್ಪಾದಿಸುವ ದೇಶಗಳೂ ಸಹ ಮೂರನೇ ಜಗತ್ತಿಗೆ ಸಾಲ ನೀಡಿವೆ. ಈ ಸಾಲಗಳನ್ನು ಸಾಮಾನ್ಯವಾಗಿ ಪರೋಕ್ಷವಾಗಿ, ಅಂದರೆ, ಮೆಟ್ರೋಪಾಲಿಟನ್ ದೇಶಗಳ ಬ್ಯಾಂಕುಗಳ ಮಧ್ಯಸ್ಥಿಕೆಯ ಮೂಲಕ ಪಡೆಯಲಾಗಿದೆ. ಮೇಲಿನ ನಮ್ಮ ಚರ್ಚೆಯು ಈ ಸಾಲದಾತರಿಗೆ ಅನ್ವಯವಾಗುವುದಿಲ್ಲ. ಏಕೆಂದರೆ, ಚೀನಾದ ಮತ್ತು ತೈಲ ಉತ್ಪಾದಕ ದೇಶಗಳ ಅರ್ಥವ್ಯವಸ್ಥೆಗಳನ್ನು ಮೆಟ್ರೋಪಾಲಿಟನ್ ದೇಶಗಳ ರೀತಿಯ ಬೇಡಿಕೆ–ನಿರ್ಬಂಧಿತ ಅರ್ಥವ್ಯವಸ್ಥೆಗಳೆಂದು ಪರಿಗಣಿಸಲಾಗದು. ಆದ್ದರಿಂದ, ಈ ಸಾಲಗಳನ್ನು ನೀಡಿದ ಚೀನಾ ಮತ್ತು ತೈಲ ಉತ್ಪಾದಕ ದೇಶಗಳೊಂದಿಗೆ ತಮ್ಮ ಸಾಲಗಳನ್ನು ಮನ್ನಾ ಮಾಡುವ ಬಗ್ಗೆ ಮತ್ತು ಅವರೊಂದಿಗೆ ನೇರ ಸಂಬಂಧಗಳನ್ನು ವೃದ್ಧಿಸಿಕೊಳ್ಳುವ ಬಗ್ಗೆ ಸಾಲಗಾರ ಮೂರನೇ ಜಗತ್ತಿನ ದೇಶಗಳು, ಮೆಟ್ರೋಪಾಲಿಟನ್ ದೇಶದ ಹಣಕಾಸು ಸಂಸ್ಥೆಗಳ ಮಧ್ಯಸ್ಥಿಕೆಯನ್ನು ಕೋರದೆ, ಪ್ರತ್ಯೇಕ ಏರ್ಪಾಟುಗಳನ್ನು ತಾವೇ ಮಾಡಿಕೊಳ್ಳಬೇಕು. ಜಾಗತಿಕ ಅರ್ಥವ್ಯವಸ್ಥೆಯ ಮೇಲೆ ಮೆಟ್ರೋಪಾಲಿಟನ್ ದೇಶಗಳು ಹೊಂದಿರುವ ಪ್ರಾಬಲ್ಯವು ದುರ್ಬಲಗೊಳ್ಳುತ್ತಿರುವುದರಿಂದ, ಅಂಥಹ ಪ್ರತ್ಯೇಕ ಏರ್ಪಾಟುಗಳನ್ನು ಮಾಡಿಕೊಳ್ಳುವ ಸಾಧ್ಯತೆಗಳು ಇಂದು ಹೆಚ್ಚಾಗಿವೆ.

ಅದೇನೇ ಇರಲಿ, ಮೂರನೇ ಜಗತ್ತಿನ ದೇಶಗಳಿಗೆ ಸಾಲ ನೀಡುವಾಗ ತಮ್ಮ ಬಳಕೆಯನ್ನು ಮತ್ತು ಹೂಡಿಕೆಯನ್ನು "ತ್ಯಾಗ" ಮಾಡಿದ್ದಾಗಿ ಹೊಂದಿದ ನಂಬಿಕೆಯು ವಿಶ್ವಾಸಾರ್ಹವಲ್ಲದ ಕಾರಣದಿಂದ, ಈ ಮೆಟ್ರೋಪಾಲಿಟನ್ ದೇಶಗಳು, ಐಎಂಎಫ್ ಮಧ್ಯಸ್ಥಿಕೆಯ "ಪಾರುಗಾಣಿಕಾ ಪ್ಯಾಕೇಜ್"ಗಳನ್ನು ಸಾಲಗಾರ ದೇಶಗಳ ಮೇಲೆ ಹೇರುವುದರ ಬದಲು, ಅವರ ಆರ್ಥಿಕ ಅಗತ್ಯಗಳಿಗೆ ಸರಿಹೊಂದುವ ಸಾಲ–ತೀರಿಸುವ ಹೊಸ ಷರತ್ತುಗಳನ್ನು ನಿಗದಿಪಡಿಸಬೇಕು. ಸಾಲ ತೀರಿಸುವ ಸಲುವಾಗಿ ಸಂಪನ್ಮೂಲಗಳನ್ನು ಹಿಂಡುವ ಕಾರಣದಿಂದ ಬೇಡಿಕೆ ಕುಗ್ಗುವುದರಿಂದ, ಐಎಂಎಫ್ ಮಧ್ಯಸ್ಥಿಕೆಯ "ಪ್ಯಾಕೇಜ್‌ಗಳು" ಮೂಲತಃ ಸಾಲಗಾರ ದೇಶಗಳ ಜನರ ಜೀವನ ಮಟ್ಟವನ್ನು ಕುಗ್ಗಿಸುವ ಮೂಲಕ ಸಾಲದಾತರ ಹಿತಾಸಕ್ತಿಗಳನ್ನು ರಕ್ಷಿಸುತ್ತವೆ.

ಸಾಲ ಪಡೆದ ಯಾವುದೇ ಒಂದು ದೇಶವು ಮೆಟ್ರೋಪಾಲಿಟನ್ ದೇಶಗಳನ್ನು ಒಂಟಿಯಾಗಿ ಎದುರಿಸುವ ಶಕ್ತಿಯನ್ನು ಹೊಂದಿರುವುದಿಲ್ಲ. ಆದ್ದರಿಂದ, ಅದು ತನ್ನ ಸಾಲ ಮರುಪಾವತಿಯನ್ನು ಮತ್ತು ಬಡ್ಡಿ ಪಾವತಿಗಳಿಗೆ ಸಂಬಂಧಿಸಿದಂತೆ ಅನುಕೂಲಕರ ಷರತ್ತುಗಳನ್ನು ರೂಪಿಸುವಂತೆ ಕೋರುವುದು ಸಾಧ್ಯವಿಲ್ಲ. ಆದರೆ, ಸಾಲ ಪಡೆದ ದೇಶಗಳು ಅದನ್ನು ಸಾಮೂಹಿಕವಾಗಿ ಸಾಧಿಸಬಹುದು. ಸಾಲವನ್ನು ನಿಗದಿತ ಗಡುವಿನೊಳಗೆ ತೀರಿಸಬೇಕೆಂಬ ಷರತ್ತಿನ ಬದಲು, ಪ್ರತಿ ವರ್ಷ ತಮ್ಮ ರಫ್ತು ಗಳಿಕೆಯ ಒಂದು ನಿರ್ದಿಷ್ಟ ಪ್ರಮಾಣವನ್ನು ಸಾಲ ತೀರಿಸುವ ಉದ್ದೇಶಕ್ಕಾಗಿ ಮೀಸಲಿಡುವ ಅವಕಾಶ ನೀಡಬೇಕೆಂದು ಮತ್ತು ಸಾಲದ ಮೊತ್ತವನ್ನು ಸಾಕಷ್ಟು ಕಡಿಮೆ ಮಾಡಬೇಕೆಂದು ಸಾಲಗಾರ ದೇಶಗಳು ಸಾಮೂಹಿಕವಾಗಿ ಒತ್ತಾಯಿಸಬಹುದು. ಪೆರು ದೇಶದ ಮಾಜಿ ಅಧ್ಯಕ್ಷ ಅಲನ್ ಗಾರ್ಸಿಯಾ ಒಮ್ಮೆ ಇದನ್ನು ಸಾಧಿಸಿದ್ದ ಉದಾಹರಣೆಯೂ ಇದೆ.

ಈ ಎಲ್ಲದಕ್ಕೂ ಮುಂಚೆ ಸಾಲಗಾರರ ನಡುವೆ ಚರ್ಚೆಗಳು ನಡೆಯಬೇಕಾಗುತ್ತದೆ, ನಂತರ ಸಾಲಗಾರರು ಮತ್ತು ಸಾಲದಾತರ ನಡುವೆ ಮಾತುಕತೆಗಳನ್ನು ನಡೆಸಬೇಕಾಗುತ್ತದೆ. ಜಿ–20ರ ಸದಸ್ಯರಾದ ಭಾರತದಂತಹ ದೇಶಗಳು ಇಂಥಹ ಮಾತುಕತೆಗಳನ್ನು ಆಯೋಜಿಸಲು ಮುಂದಾಗಬೇಕು.

ಕಮ್ಯುನಿಸ್ಟ್ ಪಕ್ಷಗಳ ಅಸ್ತಿತ್ವ......

ಪುಟ 2 ರಿಂದ

ಭಾರತದಲ್ಲೂ ಇಂತಹ ಅಸಮಾನತೆ ಬೆಳೆದಿದೆ. ಶೇ.1ರಷ್ಟು ಶ್ರೀಮಂತರು ಶೇ. 40.6ರಷ್ಟು ಸಂಪತ್ತನ್ನು ಹೊಂದಿದ್ದಾರೆ. ಆದರೆ ಕೆಳಹಂತದ ಶೇ. 50ರಷ್ಟು ಮಂದಿ ಕೇವಲ ಶೇ. 3ರಷ್ಟು ಆಸ್ತಿ ಹೊಂದಿದ್ದಾರೆ. ಭಾರತದ ಮೇಲಿನ 100 ಶ್ರೀಮಂತರು ರೂ. 54.12 ಲಕ್ಷ ಕೋಟಿ ಮತ್ತುಮೇಲಿನ 10 ಶ್ರೀಮಂತರು 27.52 ಲಕ್ಷ ಕೋಟಿ ಆಸ್ತಿ ಹೊಂದಿದ್ದಾರೆ. ಅದೇ ಸಮಯದಲ್ಲಿ, ಸುಮಾರು 22 ಕೋಟಿ ಭಾರತೀಯರು ಅತ್ಯಂತ ಬಡವರಾಗಿದ್ದು, ದಿನಕ್ಕೆ ರೂ. 170 ಕ್ಕಿಂತ ಕಡಿಮೆ ಆದಾಯವನ್ನು ಹೊಂದಿದ್ದಾರೆ.

ಕೇಂದ್ರೀಕೃತ ಸರ್ವಾಧಿಕಾರ

ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಹೇಳುವಂತೆ ಸಂಪತ್ತು ಕೆಲವರಲ್ಲಿ ಕೇಂದ್ರೀಕೃತವಾಗುವುದರ ಪರಿಣಾಮವಾಗಿ ರಾಜಕೀಯವೂ ಸರ್ವಾಧಿಕಾರದ ರೀತಿಯಲ್ಲಿ ಕೇಂದ್ರೀಕೃತವಾಗಿದೆ. "ಬಂಡವಾಳಶಾಹಿಯು ಒಂದು ರಾಷ್ಟ್ರ/ಒಂದು ತೆರಿಗೆ/ಒಂದು ಸರ್ಕಾರ/ಒಂದು ಗಡಿ/ಒಂದು ಕಸ್ಟಮ್ ಡ್ಯೂಟಿ ಎಂದು ಸರ್ವಾಧಿಕಾರದ ರೀತಿಯಲ್ಲಿ ಅಧಿಕಾರಗಳನ್ನು ಕೇಂದ್ರೀಕರಿಸುತ್ತದೆ, ತಮ್ಮ ವೈಯಕ್ತಿಕ ಹಿತಾಸಕ್ತಿ, ಕಾನೂನು, ತೆರಿಗೆ ವ್ಯವಸ್ಥೆಗಳು, ಸರ್ಕಾರಿ ಆಡಳಿತ ವ್ಯವಸ್ಥೆಗಳಿಗಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಹಲವು ಕ್ಷೇತ್ರಗಳನ್ನು ಏಕೀಕರಿಸಲು ಬಲವಂತಪಡಿಸಿದರೆ, ಉತ್ಪಾದನಾ ವಿಧಾನಗಳು ಕೆಲವರಲ್ಲಿ ಕೇಂದ್ರೀಕೃತವಾಗುತ್ತವೆ, ಅಸಮಾನತೆ ಮತ್ತು ರಾಜಕೀಯ ಸರ್ವಾಧಿಕಾರವು ಪರಿಣಾಮ ಬೀರುತ್ತದೆ ಎಂದು 175 ವರ್ಷಗಳ ಹಿಂದೆ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಎಚ್ಚರಿಸಿದೆ. ಇಂದಿಗೂ ಅದು ನಡೆಯುತ್ತಿದೆ.

ಸಮಾಜದಲ್ಲಿನ ಅಸಮಾನತೆ ಹಾಗೂ ಆರ್ಥಿಕವಾಗಿ, ಸಾಮಾಜಿಕವಾಗಿ ಮಾನವನಿಂದ ಮಾನವನ ಶೋಷಣೆ ಇರುವವರೆಗೂ ವರ್ಗ ಹೋರಾಟ ಇದ್ದೇ ಇರುತ್ತದೆ. ಅದು ಸಮತಾವಾದದ ವ್ಯವಸ್ಥೆಯಲ್ಲಿ ಅಂತ್ಯವಾಗುತ್ತದೆ. ಅಂತಹ ವ್ಯವಸ್ಥೆಗಾಗಿ ಕಮ್ಯುನಿಸ್ಟರು ನಿರಂತರವಾಗಿ ಶ್ರಮಿಸುತ್ತಲೇ ಇರುತ್ತಾರೆ. ಚುನಾವಣೆ ಎಂಬುದು ಜನರಲ್ಲಿ ವರ್ಗ ಜಾಗೃತಿ ಮೂಡಿಸುವ ಒಂದು ಸಾಧನವನ್ನಾಗಿ ಕಮ್ಯುನಿಸ್ಟರು ನೋಡುತ್ತಾರೆ. ಬಂಡವಾಳಶಾಹಿ ಆಡಳಿತದ ದೇಶವೊಂದರ ಒಂದು ಅಥವಾ ಕೆಲವು ರಾಜ್ಯಗಳಲ್ಲಿ ಚುನಾವಣೆಯ ಮೂಲಕ ಅಧಿಕಾರ ದೊರೆತರೆ, ಅಂತಹ ವ್ಯವಸ್ಥೆಯ ಒಳಗೆ ರಾಜ್ಯ ಸರ್ಕಾರಗಳಿಗೆ ಇರುವ ಸೀಮಿತ ಅಧಿಕಾರ ಮತ್ತು ಸೀಮಿತ ಸಂಪನ್ಮೂಲಗಳ ಬಳಕೆ ಮೂಲಕ, ಪ್ರಾಮಾಣಿಕ ಆಢಳಿತದ ಮೂಲಕ, ಜನರನ್ನು ಆಡಳಿತದಲ್ಲಿ ಭಾಗಿಯಾಗುಂತೆ ಮಾಡುವ ಮೂಲಕ, ಸಾಧ್ಯವಾದಷ್ಟು ಭ್ರಷ್ಟಾಚಾರ ನಡೆಯುವುದನ್ನು ತಪ್ಪಿಸುವ ಮೂಲಕ ಹೇಗೆಲ್ಲಾ ಜನಪರ ಯೋಜನೆಗಳನ್ನು ತರಬಹುದು ಎಂಬುದನ್ನು ತೋರಿಸಿಕೊಡುವ ಪ್ರಯತ್ನ ಮಾಡುತ್ತದೆ. ಇವೆಲ್ಲದರ ಜೊತೆಗೆ, ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ತನ್ನೊಡನೆ ಕರೆದೊಯ್ಯುವ ಪ್ರಯತ್ನ ಮಾಡುತ್ತದೆ. ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳಲ್ಲಿ ಈ ಎಲ್ಲಾ ಶಕ್ತಿಗಳು ಭಾಗಿಯಾಗುವಂತೆ ಮಾಡಿರುವುದು ಇದೇ ಗುರಿಯೊಂದಿಗೆ.

ಕಮ್ಯುನಿಸ್ಟರಲ್ಲದೆ ಬೇರೆ ಯಾರಿದ್ದಾರೆ?

ಕಮ್ಯುನಿಸ್ಟ್ ಪಕ್ಷಗಳ ಅಸ್ತಿತ್ವದ ಅಗತ್ಯವಿದೆಯೇ ಎಂದು ಪ್ರಶ್ನಿಸುವ ಜನಪರ ಕಾಳಜಿಯುಳ್ಳ, ಪ್ರಗತಿಪರ, ಮತ್ತು ವೈಚಾರಿಕ ಚಿಂತಕರು, ಇಂದು ದೇಶ ಮತ್ತು ದೇಶದ ಜನತೆ ಎದುರಿಸುತ್ತಿರುವ ಸಂಕಷ್ಟಗಳ ವಿರುದ್ಧ, ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳನ್ನು ಪೋಷಿಸುವ ಪ್ರಭುತ್ವದ ವಿರುದ್ಧ, ಬಂಡವಾಳಶಾಹಿ ಮತ್ತು ದೊಡ್ಡ ಭೂಮಾಲೀಕರ ಪರ ನೀತಿಗಳನ್ನು ಹೊಂದಿರುವ ಹಾಗೂ ಸಾಮ್ರಾಜ್ಯಶಾಹಿಗಳ ಎದುರು ಮಂಡಿಯೂರಿರುವ ಭಾರತದ ಪ್ರಭುತ್ವದ ವಿರುದ್ಧ, ಬಹು ಸಂಖ್ಯೆಯಲ್ಲಿರುವ ಶ್ರಮಿಕ ವರ್ಗದ ಬದುಕಿನ ಮೇಲೆ ತೀವ್ರ ದಾಳಿ ನಡೆಸಿರುವ ನವ ಉದಾರವಾದಿ ನೀತಿಗಳ ವಿರುದ್ಧ, ಜನರ ಮನದಲ್ಲಿ ಕೋಮುವಿಷ ತುಂಬಿ ಸಮಾಜದಲ್ಲಿ ಅಶಾಂತಿ ತುಂಬುತ್ತಿರುವ ಧಾರ್ಮಿಕ ಮೂಲಭೂತವಾದಿಗಳ ವಿರುದ್ಧ, ಮೌಢ್ಯತೆಗಳನ್ನು ಬಿತ್ತುವ ಮೂಲಕ ಜನರನ್ನು ಮತ್ತಷ್ಟು ಮೌಢ್ಯತೆಗಳಿಗೆ ದೂಡುವ ಸನಾತನವಾದಿಗಳ ವಿರುದ್ಧ, ಇವುಗಳೆಲ್ಲವುಗಳ ವಿರುದ್ಧ ಸೈದ್ಧಾಂತಿಕವಾಗಿ, ಪ್ರಮಾಣಿಕವಾಗಿ, ದೃಢತೆಯಿಂದ ಹೋರಾಟ ಮಾಡಲು ಕಮ್ಯುನಿಸ್ಟರಲ್ಲದೆ ಬೇರೆ ಯಾರಿದ್ದಾರೆ ಎಂದು ಇವರು ಚಿಂತಿಸಬೇಕಿತ್ತು. ಒಂದು ವೇಳೆ ಕಮ್ಯುನಿಸ್ಟರ ಶಕ್ತಿ ಕಡಿಮೆಯಾಗಿದೆ ಎಂದು ಈ ಜನಪರ ಕಾಳಜಿಯುಳ್ಳ ಚಿಂತಕರಿಗೆ ಅನಿಸಿದರೆ, ಕಮ್ಯುನಿಸ್ಟ್ ಚಳುವಳಿಯನ್ನು ಮತ್ತಷ್ಟು ಬೆಳೆಸಲು ಚಿಂತಿಸಬೇಕಿತ್ತು. ತಾವೂ ಅವರೊಡನೆ ಕೈಜೋಡಿಸಲು ಮುಂದೆ ಬರಬೇಕಿತ್ತು. ಇವರೆಲ್ಲರೂ ಈ ನಿಟ್ಟಿನಲ್ಲಿ ಚಿಂತಿಸುತ್ತಾರೆ ಮತ್ತು ಕಮ್ಯುನಿಸ್ಟರೊಡನೆ ಕೈಜೋಡಿಸುತ್ತಾರೆ ಎಂಬ ಆಶಾಭಾವನೆ ನಮಗಂತೂ ಇದ್ದೇ ಇದೆ.

ಬಿಜೆಪಿಯನ್ನು ಅಧಿಕಾರದಿಂದ ಹೊರಹಾಕುವುದು....

ಪುಟ 9 ರಿಂದ

ಕೇಂದ್ರೀಯ ಸಂಸ್ಥೆಗಳ ಅಧಿಕಾರದ ದುರ್ಬಳಕೆ ನಡೆಯುತ್ತಿದೆ. ಇದರಿಂದಾಗಿ ರಾಜ್ಯ ಸರಕಾರಗಳು, ಪ್ರತಿ ಪಕ್ಷಗಳು ನಾಶವಾಗುತ್ತಿವೆ. ಇದನ್ನು ನಾವು ಈಗಾಗಲೇ ಮಹಾರಾಷ್ಟ್ರದಲ್ಲಿ ನೋಡಿದ್ದೇವೆ. ರಾಜಭವನವನ್ನು ಬಿಜೆಪಿಯ ಶಕ್ತಿ ಕೇಂದ್ರವಾಗಿ ಬಳಸಲಾಗುತ್ತಿದೆ. ಹಲವು ರಾಜ್ಯಗಳಲ್ಲಿ ಚುನಾವಣೆ ಗೆದ್ದ ನಂತರವೂ ಪಕ್ಷಗಳು ಸರ್ಕಾರ ರಚಿಸಲು ಮತ್ತು ಅದರ ನಂತರವೂ ರಾಜ್ಯವನ್ನು ಆಳಲು ಕಷ್ಟಪಡುತ್ತಿವೆ. ಈ ಪ್ರಕ್ರಿಯೆಯನ್ನು ತಡೆಯಲು ವಿರೋಧ ಪಕ್ಷಗಳು ಏನು ಮಾಡಲಿವೆ?

ಯೆಚೂರಿ: 'ಚುನಾವಣೆಯಲ್ಲಿ ಯಾರು ಗೆದ್ದರೂ ನಾವು ಸರ್ಕಾರ ರಚಿಸುತ್ತೇವೆ' ಎಂಬುದು ಬಿಜೆಪಿ ಆಳ್ವಿಕೆಯ ಅಡಿಯಲ್ಲಿ ಪ್ರಜಾಪ್ರಭುತ್ವದ ಹೊಸ ಆದೇಶ. ಅದು ಗೋವಾ, ಕರ್ನಾಟಕ, ಮಧ್ಯಪ್ರದೇಶದಲ್ಲಿ ನಡೆದಿತ್ತು. ಈಗ ಮಹಾರಾಷ್ಟ್ರದಲ್ಲಿ ನಡೆಯುತ್ತಿದೆ. ಏಕೆಂದರೆ, ಪ್ರಭುತ್ವದ ಅಧಿಕಾರ ಮತ್ತು ಕೇಂದ್ರೀಯ ಸಂಸ್ಥೆಗಳನ್ನು ನಿಯಂತ್ರಿಸುವ ಸರ್ಕಾರ ಮತ್ತು ಪ್ರಭುತ್ವದ ಅಧಿಕಾರದ ಮೇಲಿನ ನಿಯಂತ್ರಣವನ್ನು ಅವರು ಹೊಂದಿದ್ದಾರೆ. ಈ ರೀತಿಯ ಘೋರ ದುರುಪಯೋಗವನ್ನು ತಡೆಯಬೇಕಾದರೆ ಅವರನ್ನು ಆ ನಿಯಂತ್ರಣದಿಂದ ತೆಗೆದುಹಾಕಬೇಕು. ಇಡಿ ಮತ್ತು ಸಿಬಿಐ ಅನ್ನು ಸಂಪೂರ್ಣವಾಗಿ ರಾಜಕೀಯ ಅಸ್ತ್ರವಾಗಿಸಲಾಗಿದೆ, ಅವು ವಿರೋಧ ಪಕ್ಷಗಳ ವಿರುದ್ಧದ ರಾಜಕೀಯ ಅಸ್ತ್ರಗಳಾಗಿವೆ. ಎದುರಾಳಿಗಳನ್ನು ಒಡೆಯಲು, ವಿಭಜಿಸಲು, ಜೈಲಿಗಟ್ಟಲು ಅವುಗಳನ್ನು ಅನೈತಿಕವಾಗಿ ಬಳಸಿಕೊಳ್ಳಲಾಗುತ್ತಿದೆ. ಇದು ವಿರೋಧ ಪಕ್ಷಗಳ ಮತ್ತು ಜನರ ಹಕ್ಕುಗಳ ವಿರುದ್ಧದ ಅತ್ಯಂತ ಬೃಹತ್ ಅಧಿಕೃತ ದಾಳಿಯಾಗಿದೆ. ಇದನ್ನು ಈ ಸಭೆಯಲ್ಲೂ ಪ್ರಸ್ತಾಪಿಸಲಾಗಿದೆ. ಇದನ್ನು ನಾವು ಕೊನೆಯವರೆಗೂ ವಿರೋಧಿಸುತ್ತೇವೆ ಎಂದು ಅಲ್ಲಿ ಹೇಳಲಾಗಿದೆ.

ಜನಶಕ್ತಿ: ಕೇರಳದಲ್ಲಿ ಎಲ್‌ಡಿಎಫ್ ಸರ್ಕಾರದ ವಿರುದ್ಧ ಇಡಿ, ಸಿಬಿಐ ಕ್ರಮಗಳನ್ನು ಅಲ್ಲಿನ ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಸಂಪೂರ್ಣವಾಗಿ ಬೆಂಬಲಿಸಿದೆ. ಅಂತಹ ತಪ್ಪು ತಿಳುವಳಿಕೆಯನ್ನು ನೀವು ಹೇಗೆ ಪರಿಹರಿಸುತ್ತೀರಿ?

ಯೆಚೂರಿ: ಅದು ತಪ್ಪು ತಿಳುವಳಿಕೆ ಅಲ್ಲ. ಇದು ಸ್ಪಷ್ಟವಾಗಿ ದ್ವಂದ್ವದಿಂದ ಕೂಡಿದೆ. ಬಿಜೆಪಿ ದೇಶದಾದ್ಯಂತ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಅಸ್ತ್ರವಾಗಿಸುತ್ತಿದ್ದಾರೆ ಎಂದು ಕಾಂಗ್ರೆಸ್ ನವರು ಟೀಕಿಸುತ್ತಾರೆ. ಆದರೆ ಕೇರಳ ಎಲ್‌ಡಿಎಫ್ ಸರ್ಕಾರದ ವಿರುದ್ಧ ಇದೇ ಏಜೆನ್ಸಿಗಳು ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸುತ್ತಾರೆ. ಇದು ಸ್ಪಷ್ಟವಾಗಿ ಎರಡು ಮಾನದಂಡಗಳು. ಅವರು ಕೇರಳದ ಹೊರಗೆ ತಮ್ಮ ಈ ನಿಲುವನ್ನು ವಿವರಿಸಲು ಬಹಳ ಕಷ್ಟಪಡುತ್ತಾರೆ. ಆದರೆ ಇದನ್ನು ನಾವು ನಿರಂತರವಾಗಿ ಬಹಿರಂಗಪಡಿಸಬೇಕು ಮತ್ತು ಅದರ ವಿರುದ್ಧ ಹೋರಾಡುತ್ತೇವೆ. ದೆಹಲಿ ಆಡಳಿತಕ್ಕೆ ಸಂಬಂಧಿಸಿದ ಸುಗ್ರೀವಾಜ್ಞೆಗೆ ಸಂಬಂಧಿಸಿದಂತೆ ಎಎಪಿ ಜೊತೆಗೂ ಬಹುತೇಕ ಇದೇ ರೀತಿಯ ಪರಿಸ್ಥಿತಿಯಿತ್ತು. ಇದೀಗ ಸುಗ್ರೀವಾಜ್ಞೆಯನ್ನು ವಿರೋಧಿಸಲು ಕಾಂಗ್ರೆಸ್ ನಿರ್ಧರಿಸಿದ್ದು, ಕೇಜ್ರಿವಾಲ್ ಈ ಸಭೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಯಿತು.

ಜನಶಕ್ತಿ: ಕರ್ನಾಟಕದಲ್ಲಿ ಜೆಡಿಎಸ್ ಬಿಜೆಪಿಯೊಂದಿಗೆ ಮೈತ್ರಿ ಕುರಿತಾಗಿ ಚರ್ಚೆ ನಡೆಸುತ್ತಿದೆ ಎಂಬ ವರದಿಗಳಿವೆ. ಕೇರಳದಲ್ಲಿ ಜೆಡಿಎಸ್ ಎಲ್‌ಡಿಎಫ್ ಜೊತೆಗಿದೆ. ಇದರ ಕುರಿತು ನಿಮ್ಮ ಅಭಿಪ್ರಾಯ?

ಯೆಚೂರಿ: ಇದು ನನಗೆ ಗೊತ್ತಿಲ್ಲ. ಅದು ಜೆಡಿಎಸ್ ಗೆ ಬಿಟ್ಟಿದ್ದು. ಅವರು ಹಿಂದೆಯೂ ಬಿಜೆಪಿಯ ಜೊತೆಗಿದ್ದರು ಮತ್ತು ನಂತರ ನಮ್ಮೆಲ್ಲರೊಂದಿಗಿದ್ದರು. ವರದಿಗಳನ್ನು ನಂಬುವುದಾದರೆ ಮತ್ತೆ ಅವರೊಂದಿಗೆ ಚರ್ಚಿಸುತ್ತಿದ್ದಾರೆ. ಒಮ್ಮೆ ಅಲ್ಲಿಗೆ ಹೋಗಿ ವ್ಯವಹಾರ ಮಾಡಿದ್ದವರಾದ್ದರಿಂದ ಇದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ವಾಸ್ತವ ಏನೆಂದು ನನಗೆ ಗೊತ್ತಿಲ್ಲ. ಕೇರಳದ ಜೆಡಿಎಸ್ ತಾನು ಮುಂದುವರಿಯಬೇಕೇ ಎಂದು ಗಂಭೀರವಾಗಿ ಪರಿಶೀಲಿಸುತ್ತಿದೆ. ಆದರೆ ಜೆಡಿಎಸ್ ಬಿಜೆಪಿಯೊಂದಿಗೆ ಹೋದ ತಕ್ಷಣ ಕೇರಳದಲ್ಲಿ ಅದು ಕಾರ್ಯಸಾಧುವಲ್ಲ ಎಂದು ಅವರಿಗೆ ತಿಳಿದಿದೆ. ಅಲ್ಲಿ ಅವರು ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತಾರೆ.

ಜನಶಕ್ತಿ: ಬಿಆರ್‌ಎಸ್, ವೈಎಸ್‌ಆರ್ ಕಾಂಗ್ರೆಸ್, ಬಿಜೆಡಿ ಮುಂತಾದ ಅನೇಕ ಪಕ್ಷಗಳು ಇಂದು ಸಭೆಯ ಭಾಗವಾಗಿಲ್ಲ. ಅವುಗಳನ್ನು ಭವಿಷ್ಯದಲ್ಲಿ ಕರೆಯಲಾಗುವುದೇ?

ಯೆಚೂರಿ: BRS, YSRCP, BJD ಅನ್ನು ನಿತೀಶ್ ಕುಮಾರ್ ಅವರು ಪಾಟ್ನಾ ಸಭೆಗೂ ಮುನ್ನವೇ ಸಂಪರ್ಕಿಸಿದ್ದರು. ಅವರೆಲ್ಲರೂ ಹಾಜರಾಗುವುದಿಲ್ಲ ಎಂದು ಹೇಳಿದರು ಎಂದು ಅವರು ಸಭೆಗೆ ವರದಿ ಮಾಡಿದರು. ಈಗಲೂ ಅವರು ಹಾಗೆಯೇ ಉಳಿದಿದ್ದಾರೆ. ರಾಜಕೀಯ ಬೆಳವಣಿಗೆಯೊಂದಿಗೆ ಮತ್ತು ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ, ಬಿಜೆಪಿಯನ್ನು ಸರ್ಕಾರದಿಂದ ಬೇರ್ಪಡಿಸುವ ಅಗತ್ಯವನ್ನು ಅವರು ಅರಿತುಕೊಳ್ಳುತ್ತಾರೆ ಎಂಬ ಆಶಾಭಾವನೆ ಇಟ್ಟುಕೊಳ್ಳಬಹುದು.

ಆಹಾರ ಬೆಲೆ ಏರಿಕೆಗೆ ರಷ್ಯಾ ಧಾನ್ಯ ಡೀಲನ್ನು ಅಮಾನತುಗೊಳಿಸಿದ್ದು ಕಾರಣವೇ?

ರಷ್ಯಾ "ಕಪ್ಪು ಸಮುದ್ರ ಧಾನ್ಯ ಡೀಲ್' ನ್ನು ಅಮಾನತುಗೊಳಿಸಿದೆ. ರಷ್ಯಾ ಈ ಡೀಲ್ ಜತೆಗೆ ತನ್ನದೇ ಆದ ಕೃಷಿ ವ್ಯವಸ್ಥೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಗೆ ಮೂರು ಹಕ್ಕೊತ್ತಾಯಗಳನ್ನು ಮಂಡಿಸಿತ್ತು. ಇವು ಯಾವುವು ಜಾರಿಯಾಗಿಲ್ಲ. ಹಾಗಾಗಿ ತಾನು ಡೀಲನ್ನು ಅಮಾನತುಗೊಳಿಸುತ್ತೇನೆ ಎಂದಿದೆ. ಜಾಗತಿಕ ಆಹಾರ ಬೆಲೆ ಏರಿಕೆಗೆ ಧಾನ್ಯ ಡೀಲನ್ನು ಅಮಾನತುಗೊಳಿಸಿದ್ದು ಕಾರಣವಲ್ಲ. ಆಹಾರ ಧಾನ್ಯಗಳ ಅಂತರ್‌ರಾಷ್ಟ್ರೀಯ ವ್ಯಾಪಾರದಲ್ಲಿ ಜೂಜುಕೋರತನ ಶೇ.60ಕ್ಕಿಂತಲೂ ಹೆಚ್ಚಿದ್ದು ಕಾರಣ ಎನ್ನಲಾಗಿದೆ. ಜಾಗತಿಕ ಆಹಾರ ಬಿಕ್ಕಟ್ಟು ಪೂರೈಕೆಯ ಸಮಸ್ಯೆಯಲ್ಲ, ಬೆಲೆ ಏರಿಕೆಯ ಸಮಸ್ಯೆಯಿಂದ ಉಂಟಾಗಿದೆ ಎಂದು ಸ್ವತಂತ್ರ ಅಧ್ಯಾಯನಗಳು ಹೇಳಿವೆ.



ಜೂನ್ 17 ರಂದು, ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ವಕ್ತಾರ "ಕಪ್ಪು ಸಮುದ್ರದ ಧಾನ್ಯದ ಉಪಕ್ರಮ" ವನ್ನು ಅಮಾನತುಗೊಳಿಸುವ ಘೋಷಣೆ ಮಾಡಿದ್ದಾರೆ. ಫೆಬ್ರವರಿ 2022 ರಲ್ಲಿ ರಷ್ಯಾದ ಪಡೆಗಳು ಉಕ್ರೇನ್ಗೆ ಪ್ರವೇಶಿಸಿದ ಕೆಲವೇ ಗಂಟೆಗಳಲ್ಲಿ ಗಂಭೀರ ಮಾತುಕತೆಗಳಿಂದ ಹೊರಹೊಮ್ಮಿದ ಇದನ್ನು "ಕಪ್ಪು ಸಮುದ್ರ ಧಾನ್ಯ ಡೀಲ್' ಎಂದು ಕರೆಯಲಾಗಿತ್ತು. ರಷ್ಯಾ ಮತ್ತು ಉಕ್ರೇನಿಯನ್ ಅಧಿಕಾರಿಗಳು ಇಸ್ತಾನ್ಬುಲ್ನಲ್ಲಿ ವಿಶ್ವಸಂಸ್ಥೆಯ ಕಾರ್ಯದರ್ಶಿ ಮತ್ತು ಅಧ್ಯಕ್ಷರ ಸಮ್ಮುಖದಲ್ಲಿ ಸಹಿ ಹಾಕಿದ ನಂತರ ಜುಲೈ 22, 2022 ರಂದು ಇದು ಜಾರಿಗೆ ಬಂದಿತು.

ಗುಟೆರೆಸ್ ಈ ಉಪಕ್ರಮವನ್ನು ಎರಡು ಕಾರಣಗಳಿಗಾಗಿ "ಭರವಸೆಯ ದಾರಿದೀಪ" ಎಂದು ಕರೆದರು. ಮೊದಲನೆಯದಾಗಿ, ತೀವ್ರ ಯುದ್ಧದಲ್ಲಿ ತೊಡಗಿರುವವರ ನಡುವೆ ಈ ರೀತಿಯ ಒಪ್ಪಂದವನ್ನು ಹೊಂದಿರುವುದು ಗಮನಾರ್ಹವಾಗಿದೆ. ಎರಡನೆಯದಾಗಿ, ರಷ್ಯಾ ಮತ್ತು ಉಕ್ರೇನ್ ಜಗತ್ತಿನಲ್ಲೇ ಗೋಧಿ, ಬಾರ್ಲಿ, ಮೆಕ್ಕೆಜೋಳ, ರೇಪ್ಸೀಡ್ ಮತ್ತು ರೇಪ್ಸೀಡ್ ಎಣ್ಣೆ, ಸೂರ್ಯಕಾಂತಿ ಬೀಜಗಳು ಮತ್ತು ಸೂರ್ಯಕಾಂತಿ ಎಣ್ಣೆ, ಹಾಗೆಯೇ ಸಾರಜನಕ, ಪೊಟ್ಯಾಸಿಕ್ ಮತ್ತು ಫಾಸ್ಫರಸ್ ರಸಗೊಬ್ಬರಗಳ ಪ್ರಮುಖ ಉತ್ಪಾದಕರು, ವ್ಯಾಪಾರದ ಕ್ಯಾಲೊರಿಗಳಲ್ಲಿ 12 ಪ್ರತಿಶತವನ್ನು ಹೊಂದಿದೆ. ರಶಿಯಾ ಮತ್ತು ಉಕ್ರೇನ್ನಿಂದ ಪೂರೈಕೆಯ ಅಡ್ಡಿಯು ವಿಶ್ವ ಆಹಾರ ಮಾರುಕಟ್ಟೆಗಳ ಮೇಲೆ ಮತ್ತು ಹಸಿವಿನ ಮೇಲೆ ದುರಂತ ಪರಿಣಾಮವನ್ನು ಬೀರುತ್ತದೆಯೆಂದು ನಿರೀಕ್ಷಿಸಲಾಗಿತ್ತು. ರಷ್ಯಾದ ವಿರುದ್ಧ ಯುಎಸ್, ಯುಕೆ ಮತ್ತು ಯುರೋಪಿಯನ್–ನಿರ್ಬಂಧಗಳು ಹೆಚ್ಚಾದಂತೆ, ಒಪ್ಪಂದದ ಕಾರ್ಯಸಾಧ್ಯತೆಯು ಕಡಿಮೆಯಾಗಲು ಪ್ರಾರಂಭಿಸಿತು. ಕಳೆದ ವರ್ಷದಲ್ಲಿ ಹಲವು ಬಾರಿ ಡೀಲ್ ನ್ನು ಸ್ಥಗಿತಗೊಳಿಸಲಾಗಿತ್ತು. ಮಾರ್ಚ್ 2023 ರಲ್ಲಿ, ರಷ್ಯಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾರಿಯಾ ಜಖರೋವಾ ರಷ್ಯಾದ ಕೃಷಿಯ ವಿರುದ್ಧದ ನಿರ್ಬಂಧಗಳಿಗೆ ಪ್ರತಿಕ್ರಿಯಿಸುತ್ತಾ, ಈ ಹಿನ್ನೆಲೆಯಲ್ಲಿ ಧಾನ್ಯ ಒಪ್ಪಂದ ಕಾರ್ಯಸಾಧ್ಯವಲ್ಲ ಎಂದು ಎಚ್ಚರಿಕೆ ಕೊಟ್ಟಿದ್ದರು.

ಹಸಿವಿಗೆ ಮುಖ್ಯ ಕಾರಣ ಆಹಾರ ಧಾನ್ಯಗಳ ಹಣಕಾಸೀಕರಣ

ಯುಎಸ್ ವಿದೇಶಾಂಗ ಕಾರ್ಯದರ್ಶಿ ಆಂಟೋನಿ ಬ್ಲಿಂಕೆನ್ ಅವರು ರಷ್ಯಾ "ಆಹಾರವನ್ನು ಸತತವಾಗಿ ಅಸ್ತ್ರಗಳಾಗಿ ಬಳಸುವ" ಬಗ್ಗೆ ತಮ್ಮ ದೇಶವು ವಿಷಾದಿಸುತ್ತದೆ ಎಂದು ಹೇಳಿದರು. ಏಕೆಂದರೆ ಇದು "ವಿಶ್ವದಾದ್ಯಂತ ಲಕ್ಷಾಂತರ ದುರ್ಬಲ ಜನರಿಗೆ ಹಾನಿ ಮಾಡುತ್ತದೆ." ವಾಸ್ತವವಾಗಿ, ಧಾನ್ಯ ಡೀಲ್ ನ ಅಮಾನತು ಅತ್ಯಂತ ಕೆಟ್ಟ ಸಮಯದಲ್ಲಿ ಬಂದಿದೆ. ವಿಶ್ವಸಂಸ್ಥೆಯ ವರದಿ, "ವಿಶ್ವದ ಆಹಾರ ಭದ್ರತೆ ಮತ್ತು ಪೋಷಣೆಯ ಸ್ಥಿತಿ 2023" (ಜುಲೈ 12, 2023), ವಿಶ್ವದ ಹತ್ತು ಜನರಲ್ಲಿ ಒಬ್ಬರು ಹಸಿವಿನಿಂದ ಬಳಲುತ್ತಿದ್ದಾರೆ ಮತ್ತು 3.1 ಶತಕೋಟಿ ಜನರು ಆರೋಗ್ಯಕರ ಆಹಾರವನ್ನು ಪಡೆಯಲು ಸಾಧ್ಯವಿಲ್ಲ ಎಂದು ತೋರಿಸುತ್ತದೆ. ಆದರೆ ವರದಿಯು ಸ್ವತಃ ಒಂದು ಕುತೂಹಲಕಾರಿ ಅಂಶವನ್ನು ನೀಡುತ್ತದೆ: ಉಕ್ರೇನ್ನಲ್ಲಿನ ಯುದ್ಧವು 2.3 ಕೋಟಿ ಜನರನ್ನು ಹಸಿವಿನತ್ತ ತಳ್ಳಿದೆ. ಇದು ಹಸಿವಿನ ಇತರ ಪ್ರಮುಖ ಕಾರಣಗಳಿಗೆ ಹೋಲಿಸಿದರೆ ಗಮನಾರ್ಹವಲ್ಲ. ಉದಾಹರಣೆಗೆ ವಾಣಿಜ್ಯೀಕೃತ ಆಹಾರ ಮಾರುಕಟ್ಟೆಗಳ ಪ್ರಭಾವ ಮತ್ತು COVID-19 ಸಾಂಕ್ರಾಮಿಕ. 'ವಿಶ್ವ ಅಭಿವೃದ್ಧಿ ಚಳುವಳಿ'ಯ 2011 ರ ವರದಿಯು "ಮುರಿದು ಬಿದ್ದ ಮಾರುಕಟ್ಟೆಗಳು: ಇನ್ನೊಂದು ಜಾಗತಿಕ ಆಹಾರ ಬಿಕ್ಕಟ್ಟನ್ನು ಮಾರುಕಟ್ಟೆ ನಿರ್ಬಂಧಗಳು ಹೇಗೆ ತಡೆಯಬಹುದು" ಎಂಬ ವರದಿ ತೋರಿಸಿದೆ. "ಹಣಕಾಸಿನ ಜೂಜುಕೋರರು ಈಗ ಆಹಾರ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಹೊಂದಿದ್ದಾರೆ, 15 ವರ್ಷಗಳ ಹಿಂದೆ ಅವರ ಹಿಡಿತ 12 ಶೇಕಡಾಕ್ಕೆ ಹೋಲಿಸಿದರೆ ಕೆಲವು ಮಾರುಕಟ್ಟೆಗಳಲ್ಲಿ ಈಗ 60 ಶೇಕಡಾವನ್ನು ಹೊಂದಿದ್ದಾರೆ."

2011ರ ನಂತರ 2023ರ ಹೊತ್ತಿಗೆ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಆಹಾರ ಮಾರುಕಟ್ಟೆಗಳಲ್ಲಿನ ಹಣಕಾಸಿನ ಜೂಜುಕೋರತನವನ್ನು ಅಧ್ಯಯನ ಮಾಡುವ ಡಾ ಸೋಫಿ ವ್ಯಾನ್ ಹುಯೆಲೆನ್, 2022 ರ ಕೊನೆಯಲ್ಲಿ ವಾಸ್ತವವಾಗಿ ಆಹಾರದ ಕೊರತೆಗಳಿದ್ದರೂ, "ಪ್ರಸ್ತುತ ಆಹಾರ ಬಿಕ್ಕಟ್ಟು ಪೂರೈಕೆ ಬಿಕ್ಕಟ್ಟಿನ ಬದಲಿಗೆ ಬೆಲೆ ಬಿಕ್ಕಟ್ಟು" ಎಂದು ಸೂಚಿಸಿದರು. ಕಪ್ಪು ಸಮುದ್ರದ ಧಾನ್ಯ ಡೀಲ್ ಅಂತ್ಯವು ನಿಜಕ್ಕೂ ವಿಷಾದನೀಯವಾಗಿದೆ, ಆದರೆ ಇದು ವಿಶ್ವದ ಹಸಿವಿನ ಪ್ರಮುಖ ಕಾರಣವಲ್ಲ. ಪ್ರಮುಖ ಕಾರಣ – ಯುರೋಪಿಯನ್ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯು ಒಪ್ಪಿದಂತೆ – ಆಹಾರ ಮಾರುಕಟ್ಟೆಗಳಲ್ಲಿನ ಹಣಕಾಸಿನ ಜೂಜುಕೋರತನ.

ರಷ್ಯಾ ಧಾನ್ಯ ಡೀಲನ್ನು ಏಕೆ ಅಮಾನತುಗೊಳಿಸಿದೆ?

ಕಪ್ಪು ಸಮುದ್ರದ ಧಾನ್ಯ ಡೀಲನ್ನು ಮೇಲ್ವಿಚಾರಣೆ ಮಾಡಲು, ವಿಶ್ವಸಂಸ್ಥೆಯು ಇಸ್ತಾನ್ಬುಲ್ನಲ್ಲಿ ಜಂಟಿ ಸಮನ್ವಯ ಕೇಂದ್ರವನ್ನು (JCC) ಸ್ಥಾಪಿಸಿತು. ಇದು ರಷ್ಯಾ, ಟರ್ಕಿ, ಉಕ್ರೇನ್ ಮತ್ತು ವಿಶ್ವಸಂಸ್ಥೆಯ ಪ್ರತಿನಿಧಿಗಳಿರುವ ಸಿಬ್ಬಂದಿಯನ್ನು ಹೊಂದಿದೆ. ಅಕ್ಟೋಬರ್ 2022 ರಲ್ಲಿ ಕ್ರೈಮಿಯಾದ ಸೆವಾಸ್ಟೊಪೋಲ್ ಬಳಿ ಕಪ್ಪು ಸಮುದ್ರದಲ್ಲಿ ಧಾನ್ಯವನ್ನು ಸಾಗಿಸುತ್ತಿದ್ದ ರಶ್ಯನ್ ಹಡಗುಗಳ ಮೇಲೆ ಉಕ್ರೇನ್ ಮಾಡಿದ ಹಲವಾರು ಸಂದರ್ಭಗಳಲ್ಲಿ, ರಶಿಯಾ ಮತ್ತು ಉಕ್ರೇನ್ ನಡುವಿನ ಉದ್ವಿಗ್ನತೆಯನ್ನು JCC ಎದುರಿಸಬೇಕಾಯಿತು. ರಶ್ಯಾದ ಮೇಲೆ ಯುರೋಪಿಯನ್ ದಿಗ್ಬಂಧನ ದಿಂದಾಗಿ ತನ್ನ ಕೃಷಿ ಉತ್ಪನ್ನಗಳ ರಫ್ತು ದುಸ್ಸಾಧ್ಯವಾಗುತ್ತಿದ್ದಂತೆ ಉದ್ವಿಗ್ನತೆ ಇನ್ನಷ್ಟು ಹೆಚ್ಚಿತು.

ರಷ್ಯಾ ಈ ಡೀಲ್ ಜತೆಗೆ ತನ್ನದೇ ಆದ ಕೃಷಿ ವ್ಯವಸ್ಥೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಗೆ ಮೂರು ಹಕ್ಕೊತ್ತಾಯಗಳನ್ನು ಮಂಡಿಸಿತ್ತು. ಇವು ಯಾವುವು ಜಾರಿಯಾಗಿಲ್ಲ. ಹಾಗಾಗಿ ತಾನು ಡೀಲನ್ನು ಅಮಾನತುಗೊಳಿಸುತ್ತೇನೆ ಎಂದಿದೆ. ಮೊದಲನೆಯದಾಗಿ, ರಷ್ಯಾದ ಕೃಷಿ ಬ್ಯಾಂಕ್ – ರಷ್ಯಾದ ಕೃಷಿಯ ಪ್ರಧಾನ ಕ್ರೆಡಿಟ್ ಮತ್ತು ವ್ಯಾಪಾರ ಬ್ಯಾಂಕ್ – ಖಫಾಖಈಖಿ ವ್ಯವಸ್ಥೆಗೆ ಮರುಸಂಪರ್ಕಿಸಬೇಕು. ಜೂನ್ 2022 ರಲ್ಲಿ ಯುರೋಪಿಯನ್ ಒಕ್ಕೂಟದ ನಿರ್ಬಂಧಗಳ ಆರನೇ ಪ್ಯಾಕೇಜ್ನಿಂದ ಅದನ್ನು ಕಡಿತಗೊಳಿಸಲಾಗಿತ್ತು.

ಎರಡನೆಯದಾಗಿ, ಮಾಸ್ಕೋ ತನ್ನ ಅಮೋನಿಯಾ ರಸಗೊಬ್ಬರವನ್ನು ಮತ್ತು ಲಾಟ್ವಿಯಾ ಮತ್ತು ನೆದರ್ಲ್ಯಾಂಡ್ ನಲ್ಲಿದ್ದ ದಾಸ್ತಾನನ್ನು ಒಡೆಸಾ ಬಂದರಿನ ಮೂಲಕ ಸರಬರಾಜು ಮಾಡುವ ಮೂಲಕ ರಫ್ತು ಮಾಡಲು ಅನುವು ಮಾಡಿಕೊಂಡಬೇಕೆಂದು ಒತ್ತಾಯಿಸಿತು. ಪ್ರಪಂಚದ ಅತಿ ಉದ್ದದ ಅಮೋನಿಯಾ ಪೈಪ್ಲೈನ್ ಟೊಗ್ಲಿಯಾಟ್ಟಿ–ಒಡೆಸಾ ಪೈಪ್ಲೈನ್ ಅನ್ನು ಪುನಃ ತೆರೆಯುವುದು ಅದರ ಕೇಂದ್ರ ಭಾಗವಾಗಿತ್ತು. ಜುಲೈ 2022 ರಲ್ಲಿ, ವಿಶ್ವಸಂಸ್ಥೆ ಮತ್ತು ರಷ್ಯಾ ವಿಶ್ವ ಮಾರುಕಟ್ಟೆಯಲ್ಲಿ ರಷ್ಯಾದ ಅಮೋನಿಯಾವನ್ನು ಮಾರಾಟ ಮಾಡಲು ಅನುಕೂಲವಾಗುವ ಒಪ್ಪಂದಕ್ಕೆ ಸಹಿ ಹಾಕಿದವು. ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಗುಟೆರೆಸ್ ಅವರು ಭದ್ರತಾ ಮಂಡಳಿಗೆ ಘೋಷಿಸಲು ಹೋದರು, "ನಾವು ಸಾಧ್ಯವಿರುವ ಎಲ್ಲವನ್ನೂ ಮಾಡುತ್ತಿದ್ದೇವೆ ... ಪಶ್ಚಿಮ ಆಫ್ರಿಕಾ ಮತ್ತು ಇತರೆಡೆಗಳಲ್ಲಿ ಈಗಾಗಲೇ ಕೃಷಿಯ ಮೇಲೆ ಪರಿಣಾಮ ಬೀರುತ್ತಿರುವ ಗಂಭೀರ ರಸಗೊಬ್ಬರ ಪೂರೈಕೆಯನ್ನು ಸರಾಗಗೊಳಿಸದಿದ್ದರೆ. ರಸಗೊಬ್ಬರ ಮಾರುಕಟ್ಟೆಯನ್ನು ಸ್ಥಿರಗೊಳಿಸದಿದ್ದರೆ, ಮುಂದಿನ ವರ್ಷ ತೀವ್ರ ಆಹಾರ ಪೂರೈಕೆ ಬಿಕ್ಕಟ್ಟು ತರಬಹುದು." ಜೂನ್ 8, 2023 ರಂದು, ಉಕ್ರೇನಿಯನ್ ಪಡೆಗಳು ಖಾರ್ಕಿವ್ನಲ್ಲಿ ಟೊಗ್ಲಿಯಾಟ್ಟಿ–ಒಡೆಸಾ ಪೈಪ್ಲೈನ್ನ ಒಂದು ಭಾಗವನ್ನು ಸ್ಫೋಟಿಸಿತು, ಈ ವಿವಾದದ ಮೇಲೆ ಉದ್ವಿಗ್ನತೆಯನ್ನು ಹೆಚ್ಚಿಸಿತು. ಕಪ್ಪು ಸಮುದ್ರದ ಬಂದರುಗಳನ್ನು ಹೊರತುಪಡಿಸಿ, ಅಮೋನಿಯಾ ಆಧಾರಿತ ರಸಗೊಬ್ಬರಗಳನ್ನು ರಫ್ತು ಮಾಡಲು ರಷ್ಯಾಕ್ಕೆ ಬೇರೆ ಯಾವುದೇ ಸುರಕ್ಷಿತ ಮಾರ್ಗವಿಲ್ಲ.

ಮೂರನೆಯದಾಗಿ, ರಷ್ಯಾದ ಕೃಷಿ ವಲಯವು ಯಂತ್ರೋಪಕರಣಗಳು ಮತ್ತು ಬಿಡಿಭಾಗಗಳನ್ನು ಆಮದು ಮಾಡಿಕೊಳ್ಳುವ ಸಾಮರ್ಥ್ಯದ ಕೊರತೆಯಿಂದ ಸವಾಲುಗಳನ್ನು ಎದುರಿಸುತ್ತಿದೆ ಮತ್ತು ರಷ್ಯಾದ ಹಡಗುಗಳು ವಿಮೆಯನ್ನು ಖರೀದಿಸಲು ಅಥವಾ ಅನೇಕ ವಿದೇಶಿ ಬಂದರುಗಳನ್ನು ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ಪಾಶ್ಚಿಮಾತ್ಯ ನಿರ್ಬಂಧಗಳಲ್ಲಿ ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ವಿನಾಯಿತಿಗಳ ಹೊರತಾಗಿಯೂ, ಸಂಸ್ಥೆಗಳು ಮತ್ತು ವ್ಯಕ್ತಿಗಳ ಮೇಲಿನ ನಿರ್ಬಂಧಗಳು ರಷ್ಯಾದ ಕೃಷಿ ವಲಯವನ್ನು ದುರ್ಬಲಗೊಳಿಸಿವೆ.

ಜಗದ ಸುತ್ತ
ವಿಜಯ್ ಪ್ರಶಾದ್
(ಅನುವಾದ: ವಸಂತರಾಜ ಎನ್.ಕೆ)

ಪಾಶ್ಚಿಮಾತ್ಯ ನಿರ್ಬಂಧಗಳನ್ನು ಎದುರಿಸಲು, ರಸಗೊಬ್ಬರ ಮತ್ತು ಕೃಷಿ ಉತ್ಪನ್ನಗಳ ರಫ್ತಿನ ಮೇಲೆ ರಷ್ಯಾ ನಿರ್ಬಂಧಗಳನ್ನು ವಿಧಿಸಿತು. ಈ ನಿರ್ಬಂಧಗಳು ಕೆಲವು ಸರಕುಗಳ ರಫ್ತಿನ ಮೇಲಿನ ನಿಷೇಧವನ್ನು ಒಳಗೊಂಡಿವೆ (ಉದಾಹರಣೆಗೆ ಯುರೇಷಿಯನ್ ಎಕನಾಮಿಕ್ ಯೂನಿಯನ್ಗೆ ಗೋಧಿ ರಫ್ತುಗಳ ತಾತ್ಕಾಲಿಕ ನಿಷೇಧಗಳು), ಪರವಾನಗಿ ಅಗತ್ಯತೆಗಳ ಹೆಚ್ಚಳ (ಸಂಯುಕ್ತ ರಸಗೊಬ್ಬರಗಳು, ಯುದ್ಧದ ಮೊದಲು ಸ್ಥಾಪಿಸಲಾದ ಅವಶ್ಯಕತೆಗಳು ಸೇರಿದಂತೆ) ಮತ್ತು ರಫ್ತು ತೆರಿಗೆಗಳ ಹೆಚ್ಚಳ. ಈ ರಷ್ಯಾದ ಕ್ರಮಗಳು ಮರು–ರಫ್ತು ಮಾಡುವ ಭಾರತದಂತಹ ಇತರ ದೇಶಗಳಿಗೆ ನೇರ ಮಾರಾಟದ ಕಾರ್ಯತಂತ್ರದ ಜೊತೆಗೆ ಬಂದವು.

ಜುಲೈ ಅಂತ್ಯದಲ್ಲಿ, ಸೇಂಟ್ ಪೀಟರ್ಸ್ಬರ್ಗ್ ನಲ್ಲಿ ಎರಡನೇ ರಷ್ಯಾ–ಆಫ್ರಿಕಾ ಆರ್ಥಿಕ ಮತ್ತು ಮಾನವೀಯ ವೇದಿಕೆಯನ್ನು ಆಯೋಜಿಸಲಾಗುತ್ತಿದೆ, ಅಲ್ಲಿ ಈ ವಿಷಯಗಳು ಕೇಂದ್ರದಲ್ಲಿರುತ್ತವೆ. ಶೃಂಗಸಭೆಯ ಮೊದಲು, ಅಧ್ಯಕ್ಷ ಪುಟಿನ್ ಅವರು ದಕ್ಷಿಣ ಆಫ್ರಿಕಾದ ಸಿರಿಲ್ ರಾಮಾಫೋಸಾ ಅವರಿಗೆ ಫೋನ್ ಮಾಡಿ ಆಫ್ರಿಕನ್ ಖಂಡಕ್ಕೆ ತನ್ನ ಆಹಾರ ಮತ್ತು ರಸಗೊಬ್ಬರಗಳನ್ನು ರಫ್ತು ಮಾಡುವಲ್ಲಿ ರಷ್ಯಾ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತಿಳಿಸಿದರು. "ಒಪ್ಪಂದದ ಮುಖ್ಯ ಗುರಿ," ಅವರು ಕಪ್ಪು ಸಮುದ್ರದ ಧಾನ್ಯದ ಡೀಲ್ ಮೂಲಕ, "ಆಫ್ರಿಕನ್ ಖಂಡದಲ್ಲಿ ಸೇರಿದಂತೆ ಅಗತ್ಯವಿರುವ ದೇಶಗಳಿಗೆ ಧಾನ್ಯವನ್ನು ಪೂರೈಸುವುದನ್ನು ಕಾರ್ಯಗತಗೊಳಿಸಲಾಗಿಲ್ಲ." ಎಂದು ತಿಳಿಸಿದರು

ಕಪ್ಪು ಸಮುದ್ರದ ಧಾನ್ಯ ಡೀಲ್ ತಿಂಗಳೊಳಗೆ ಪುನರಾರಂಭವಾಗುವ ಸಾಧ್ಯತೆಯಿದೆ. ಹಿಂದಿನ ಅಮಾನತುಗಳು ಕೆಲವು ವಾರಗಳಿಗಿಂತ ಹೆಚ್ಚು ಕಾಲ ಉಳಿಯಲಿಲ್ಲ. ಆದರೆ ಈ ಬಾರಿ, ತನ್ನ ಕೃಷಿ ಉತ್ಪನ್ನಗಳನ್ನು ರಫ್ತು ಮಾಡುವ ಸಾಮರ್ಥ್ಯದ ಮೇಲೆ ರಷ್ಯಾಕ್ಕೆ ಇರುವ ತೊಡಕುಗಳಿಗೆ ಯು.ಎಸ್–ಯುರೋಪು ಪರಿಹಾರವನ್ನು ನೀಡುತ್ತದೆಯೇ ಎಂಬುದು ಸ್ಪಷ್ಟವಾಗಿಲ್ಲ. ನಿಸ್ಸಂಶಯವಾಗಿ, ಅಮಾನತುಗೊಳಿಸುವಿಕೆಯು ಹಸಿವಿನಿಂದ ಹೋರಾಡುವ ಪ್ರಪಂಚದಾದ್ಯಂತ ಲಕ್ಷಾಂತರ ಜನರ ಮೇಲೆ ಪರಿಣಾಮ ಬೀರುತ್ತದೆ. ಆಹಾರ ಮಾರುಕಟ್ಟೆಗಳಲ್ಲಿನ ಹಣಕಾಸಿನ ಜೂಜುಕೋರತನದ ಕಾರಣದಿಂದಾಗಿ ಹಸಿದಿರುವ ಶತಕೋಟಿಗಟ್ಟಲೆ ಇತರರು ಈ ಬೆಳವಣಿಗೆಗಳಿಂದ ನೇರವಾಗಿ ಪ್ರಭಾವಿತರಾಗುವುದಿಲ್ಲ.

NEW No. MAG(3)/NPP/205/2021-2022
JANASHAKTHI KANNADA VARA PATRIKE JULY 24-30, 2023 Price: Rs. 10/- Date of Publication: 21 JULY 2023 RNI No. KARKAN /2006/17926 Posted on 25-07-2023
Posted at BG PSO, BG - 560026 **Posted at Periodical Rate -** Rs. 2



ಅಯ್ಯಂಕಳಿ ನಗರ ಉದ್ಯೋಗ ಖಾತ್ರಿ ಯೋಜನೆ (ಎಯುಇಜಿಎಸ್) ಕೇರಳದಲ್ಲಿ 2006-11ರ ಅವಧಿಯ ಎಡ ಪ್ರಜಾಸತ್ತಾತ್ಮಕ ರಂಗದ (ಎಲ್‌ಡಿಎಫ್) ಸರಕಾರ 2010ರಲ್ಲಿ ಆರಂಭಿಸಿದ ದೇಶದ ಮೊತ್ತ ಮೊದಲ ನಗರ ಉದ್ಯೋಗ ಖಾತ್ರಿ ಯೋಜನೆ. 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಕನಿಷ್ಠ 100 ದಿನಗಳವರೆಗೆ ಉದ್ಯೋಗ ಖಾತರಿಯನ್ನು ಒದಗಿಸುವ ಗುರಿಯೊಂದಿಗೆ ಆರಂಭಿಸಿದ ಈ ಯೋಜನೆಯಲ್ಲಿ ಒಟ್ಟು 2.79 ಲಕ್ಷ ಕುಟುಂಬಗಳು ನೋಂದಾಯಿಸಿಕೊಂಡಿದ್ದು, ಇವರಲ್ಲಿ 96,000 ಕುಟುಂಬಗಳು ಸಂಪೂರ್ಣವಾಗಿ ಈ ಸ್ಕೀಮನ್ನೇ ಅವಲಂಬಿಸಿವೆ ಎಂದು ತಿಳಿದು ಬಂದಿದೆ.

ಕೇರಳದ ನಗರ ಉದ್ಯೋಗ ಖಾತರಿ ಯೋಜನೆ: 2022-23 ರಲ್ಲಿ 41 ಲಕ್ಷ ಕೆಲಸದ ದಿನಗಳ ಸೃಷ್ಟಿ

ಪ್ರಸಕ್ತ ಎಲ್‌ಡಿಎಫ್ ಸರಕಾರ ಈ ವರ್ಷದ ಬಜೆಟಿನಲ್ಲಿ 150 ಕೋಟಿ ರೂ.ಗಳನ್ನು ಈ ಸ್ಕೀಮಿಗೆ ನೀಡಿದ್ದು, ಮೊದಲ ತ್ರೈಮಾಸಿಕಕ್ಕೆ 29.85 ಕೋಟಿ ರೂ.ಗಳನ್ನು ಮಂಜೂರು ಮಾಡಿತ್ತು. ಇದರಲ್ಲಿ 23 ಕೋಟಿ ರೂ.ಗಳನ್ನು 6 ಮಹಾನಗರಪಾಲಿಕೆಗಳು, ಮತ್ತು 56 ನಗರಸಭೆಗಳು ಈಗಾಗಲೇ ಬಳಸಿಕೊಂಡಿರುವುದರಿಂದ ಜುಲೈ 8ರಂದು ಸರಕಾರ ಎರಡನೇ ತ್ರೈಮಾಸಿಕಕ್ಕೆ ಮತ್ತೆ 24 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ ಎಂದು ಸ್ಥಳೀಯ ಸ್ವಯಮಾಡಳಿತ ಮಂತ್ರಿ ಎಂ.ಬಿ. ರಾಜೇಶ್ ಹೇಳಿದ್ದಾರೆ. ಇದನ್ನು ನಗರಸಭೆಗಳು ಈ ಬಾರಿ ಹೊಸ ಕ್ಷೇತ್ರಗಳ ಮೇಲೆ ಮುಖ್ಯವಾಗಿ ತ್ಯಾಜ್ಯ ನಿರ್ವಹಣಾ ಕಾಮಗಾರಿಗಳ ಮೇಲೆ ಗಮನ ಕೇಂದ್ರೀಕರಿಸಲು ಬಳಸುತ್ತವೆ ಎಂದು ಅವರು ಹೇಳಿದ್ದಾರೆ.

ಕಳೆದ ಏಳು ವರ್ಷಗಳಲ್ಲಿ, ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರಕಾರಗಳ ಆಡಳಿತದಲ್ಲಿ ಈ ಸ್ಕೀಮಿಗೆ ನೀಡಿರುವ ಮೊತ್ತದಲ್ಲಿ 10 ಪಟ್ಟು ಹೆಚ್ಚಳವಾಗಿದೆ. 2022-23ರಲ್ಲಿ 113.93 ಕೋಟಿ ರೂ.ಗಳಿಂದ 41.11 ಲಕ್ಷ ದಿನಗಳ ಉದ್ಯೋಗ ಖಾತ್ರಿಯನ್ನು ಒದಗಿಸಲು ಸಾಧ್ಯವಾಗಿದೆ. 2015-16ರಲ್ಲಿ 7.48 ಕೋಟಿ ರೂ. ವೆಚ್ಚದಲ್ಲಿ 3ಲಕ್ಷ ಕೆಲಸದ ದಿನಗಳ ಉದ್ಯೋಗವನ್ನು ಕೊಡಲಾಗಿತ್ತು. ಸಂಪೂರ್ಣ ಯೋಜನಾ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ ಎಂಬುದು ಗಮನಾರ್ಹ.

ಗ್ರಾಮೀಣ ಉದ್ಯೋಗ ಖಾತ್ರಿಯೊಂದಿಗೆ, ನಗರದ ದುಡಿಮೆಗಾರರಿಗೂ ಉದ್ಯೋಗ ಖಾತ್ರಿಯ ಪ್ರಯತ್ನ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆ (ಮನರೇಗ)ಯನ್ನು 2005 ರಲ್ಲಿ ಪ್ರಾರಂಭಿಸಲಾಯಿತು, ಇದನ್ನು ಎಡ ಪಕ್ಷಗಳ ಮುತುವರ್ಜಿ ಮತ್ತು ಒತ್ತಡದಿಂದಾಗಿ ಮೊದಲ ಯುಪಿಎ ಸರ್ಕಾರದ ಅವಧಿಯಲ್ಲಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮ(ಸಿಎಂಪಿ)ದಲ್ಲಿ ಸೇರಿಸಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪ್ರಸಕ್ತ ಪ್ರಧಾನಿಗಳು ಆರಂಭದಲ್ಲಿ ಎಷ್ಟೇ ಟೀಕೆ ಮಾಡಿದ್ದರೂ, ಇದೀಗ ಜಗತ್ತಿನ ಅತಿ ದೊಡ್ಡ ಉದ್ಯೋಗ ಯೋಜನೆಯಾಗಿದ್ದು, ಇದನ್ನು ನಗರಗಳಿಗೂ ವಿಸ್ತರಿಸಬೇಕೆಂಬ ಬೇಡಿಕೆ ಎದ್ದು ಬಂದಿತ್ತು. ಆದರೆ ಇದನ್ನು ಜಾರಿಗೆ ತಂದಿರುವುದು ಕೇರಳದ ಎಲ್‌ಡಿಎಫ್ ಸರಕಾರ ಮಾತ್ರ. ಕೇರಳದ ಸಮಾಜ ಸುಧಾರಕ ಅಯ್ಯಂಕಳಿ ಅವರ ಹೆಸರಿನ ನಗರ ಉದ್ಯೋಗ ಖಾತರಿ ಯೋಜನೆಯನ್ನು ಅದು ರೂಪಿಸಿತು.

ಕೇರಳದಲ್ಲಿ ನಗರೀಕರಣದ ಪ್ರಮಾಣ ದೇಶದ ಸರಾಸರಿಗಿಂತ ಬಹಳ ಹೆಚ್ಚಿದ್ದು ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನಸಂಖ್ಯೆಯಲ್ಲಿ ಬಹಳ ವ್ಯತ್ಯಾಸವೇನಿಲ್ಲ. 2011 ರ ಜನಗಣತಿಯ ಪ್ರಕಾರ ಗ್ರಾಮೀಣ ಪ್ರದೇಶಗಳ ಒಟ್ಟು ಜನಸಂಖ್ಯೆ 1,74,55,506 ಮತ್ತು ನಗರ ಪ್ರದೇಶಗಳಲ್ಲಿ 1,59,32,171.

"ಈ ಸ್ಕೀಮ್ ನಗರ ಪ್ರದೇಶಗಳಲ್ಲಿನ ಜನರ ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ, ನಗರವಾಸಿ ಕುಟುಂಬಗಳಲ್ಲಿ ಕೌಶಲ್ಯರಹಿತ ದೈಹಿಕ ಕೆಲಸ ಮಾಡಲು ಸಿದ್ಧರಿರುವ ವಯಸ್ಕ ಸದಸ್ಯರಿಗೆ ವರ್ಷದಲ್ಲಿ 100 ದಿನಗಳ ವೇತನ-ಉದ್ಯೋಗವನ್ನು ಖಾತರಿಪಡಿಸುತ್ತದೆ. ಇತರ ಉದ್ಯೋಗ ಪರ್ಯಾಯಗಳು ವಿರಳವಾಗಿದ್ದಾಗ ಅಥವಾ ಅಸಮರ್ಪಕವಾಗಿದ್ದಾಗ, ಅವಲಂಬಿಸಬಹುದಾದ ಉದ್ಯೋಗದ ಮೂಲವನ್ನು ನೀಡುವ ಮೂಲಕ ಕೇರಳದ ನಗರ ಪ್ರದೇಶಗಳಲ್ಲಿನ ಜನರಿಗೆ ಬಲವಾದ, ಹಕ್ಕು-ಆಧಾರಿತ ಸಾಮಾಜಿಕ ಸುರಕ್ಷತಾ ಜಾಲವನ್ನು ಒದಗಿಸುವ ಗುರಿಯನ್ನು ಇದು ಹೊಂದಿದೆ" ಎಂದು ಸರ್ಕಾರ ಹೇಳಿದೆ.

ಈ ಯೋಜನೆಯು ಮನರೇಗಕ್ಕೆ ಸಮಾನವಾದ ಕೂಲಿಯಲ್ಲಿ ನಗರ ಪ್ರದೇಶಗಳಲ್ಲಿನ ಪ್ರತಿ ಮನೆಯ ವಯಸ್ಕ ಸದಸ್ಯರಿಗೆ 100-ದಿನಗಳ ಕೆಲಸದ ಭರವಸೆ ನೀಡುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿನ ವಾರ್ಡ್ ಸಭೆಗಳು ಯೋಜನೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ನಿರ್ಧರಿಸುತ್ತವೆ. ಇತ್ತೀಚೆಗೆ ಸರ್ಕಾರವು ಲೈಫ್ ಮಿಷನ್ ಅಡಿಯಲ್ಲಿ ಮನೆಗಳ ನಿರ್ಮಾಣವನ್ನು ಈ ಯೋಜನೆಯಲ್ಲಿ ಸೇರಿಸಿದೆ.

ಕೇರಳದ ಮತ್ತೊಂದು ಮಾದರಿ ಯೋಜನೆ

"ಎಯುಇಜಿಎಸ್" ಕೇರಳ ಸ್ಥಾಪಿಸಿರುವ ಮತ್ತೊಂದು ಮಾದರಿಯಾಗಿದೆ. ಈ ಯೋಜನೆಯು ನಗರ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕೇರಳವು ದೇಶದಲ್ಲಿ ಇಂತಹ ಕಾರ್ಯಕ್ರಮವನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿದೆ" ಎಂದು ಸ್ಥಳೀಯ ಸ್ವಯಮಾಡಳಿತ ಸಚಿವ ಎಂ ಬಿ ರಾಜೇಶ್ ತಿಳಿಸಿದ್ದಾರೆ.

ಏಪ್ರಿಲ್ 1,2023 ರಿಂದ ಪೂರ್ವಾನ್ವಯವಾಗುವಂತೆ ದಿನ ಕೂಲಿಯನ್ನು 311 ರಿಂದ 333ರೂ.ಗೆ ಹೆಚ್ಚಿಸುವ ನಿರೀಕ್ಷೆಯಿದೆ. ಮಹಿಳೆಯರಿಗೆ ಕನಿಷ್ಠ 50% ಖಾತ್ರಿಯೊಂದಿಗೆ, ಉದ್ಯೋಗಗಳನ್ನು ಒದಗಿಸುವುದರ ಜೊತೆಗೆ, ಇದು ನೋಂದಾಯಿಸಿದ ವಯಸ್ಕರಿಗೆ ಸಾಮಾಜಿಕ ಕಲ್ಯಾಣ ಕ್ರಮಗಳನ್ನು ಖಚಿತಪಡಿಸುತ್ತದೆ. ಕಾರ್ಮಿಕರು ಕೆಲಸದ ಸಮಯದಲ್ಲಿ ಗಾಯಗೊಂಡರೆ ಅಥವಾ ಅನಾರೋಗ್ಯಕ್ಕೆ ಒಳಗಾಗಿದ್ದರೆ ಅವರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತದೆ ಮತ್ತು ಆಸ್ಪತ್ರೆಗೆ ಸೇರಿದ ಸಂದರ್ಭದಲ್ಲಿ ಕೂಲಿಯ ಅರ್ಧವನ್ನು ನೀಡಲಾಗುತ್ತದೆ.

"ತ್ಯಾಜ್ಯ ನಿರ್ವಹಣೆ, ಸುಭಿಕ್ಷಾ ಕೇರಳ, ಮುಂಗಾರು ಪೂರ್ವ ನೈರ್ಮಲ್ಯ, ಆರೋಗ್ಯ ಜಾಗರೂಕತೆ, ಜಲ ಸಂರಕ್ಷಣೆ, ಅರಣ್ಯೀಕರಣ, ಪಶು ಕಲ್ಯಾಣ ಮತ್ತು ಪಿಎಂಎವೈ-ಲೈಫ್ ನ ಅಡಿಯಲ್ಲಿ ಮನೆ ನಿರ್ಮಾಣ ಕಾರ್ಯಗಳಿಗೆ ಆದ್ಯತೆ ನೀಡಲಾಗುವುದು. 2019-20 ರಿಂದ ಹೈನುಗಾರರನ್ನು ಫಲಾನುಭವಿಗಳಾಗಿ ಸೇರಿಸಲಾಗಿದೆ. ತ್ಯಾಜ್ಯ ನಿರ್ವಹಣೆಯ ಮೇಲೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ" ಎಂದು ರಾಜೇಶ್ ಹೇಳಿದರು.



ಬುಡಕಟ್ಟು ಜನರ ಮೇಲಿನ ಅಮಾನವೀಯ ದಾಳಿಗೆ ಖಂಡನೆ

ಮಣಿಪುರದಲ್ಲಿ ನಡೆಯುತ್ತಿರುವ ಬುಡಕಟ್ಟು ಜನರ ಮೇಲಿನ ಅಮಾನವೀಯ ದಾಳಿ, ಅತ್ಯಾಚಾರದಂತಹ ಘಟನೆಯನ್ನು ಖಂಡಿಸಿ ಜುಲೈ 21 ರಂದು ಬೆಂಗಳೂರಿನ ಪುರಭವನದ ಎದುರು ಪ್ರಗತಿಪರ ಸಂಘಟನೆಗಳು, ಸಾಹಿತಿಗಳು, ಕಲಾವಿದರು ಒಳಗೊಂಡ ಸಾವಿರಾರು ಜನರ ಪ್ರತಿಭಟನೆ ನಡೆಯಿತು. ಕೇಂದ್ರ ಸರ್ಕಾರವು ಈ ಘಟನೆಯನ್ನು ಮರೆಮಾಚುತ್ತಿದ್ದು, ಜನರು ನಾಚಿಕೆಪಡುವಂತಹ ಕೆಲಸವನ್ನು ಮಾಡುತ್ತಿರುವ ಕೇಂದ್ರ ಸರ್ಕಾರವನ್ನು ತೀವ್ರವಾಗಿ ಖಂಡಿಸಲಾಯಿತು. ಸಭೆಯನ್ನು ಉದ್ದೇಶಿಸಿ ಖ್ಯಾತ ಸಾಹಿತಿಗಳಾದ ಕೆ.ಮರಳಿಸಿದ್ದಪ್ಪ, ಎಸ್.ಜಿ.ಸಿದ್ದರಾಮಯ್ಯ, ಮಹಿಳಾ ಹೋರಾಟಗಾರ್ತಿ ಪ್ರಭಾವತಿ, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ವಿಮಲಾ, ಕೆ.ಎಸ್.ಲಕ್ಷ್ಮಿ, ಗೌರಮ್ಮ, ಶ್ರೀದೇವಿ ಸಿಪಿಐ(ಎಂ) ಪಕ್ಷ, ದಲಿತ ಸಂಘಟನೆಗಳ ಮುಖಂಡರು, ವಿದ್ಯಾರ್ಥಿ ಸಂಘಟನೆಗಳ ಮುಖಂಡರು, ಸೌಹಾರ್ದ ಕರ್ನಾಟಕ ಸಂಘಟನೆ ಹಾಗೂ ವಿವಿಧ ಸಂಘಟನೆಗಳ ಮುಖಂಡರು ಮಾತನಾಡಿದರು. ಪ್ರತಿಭಟನೆಯಲ್ಲಿ ಹಲವು ಸಂಘಟನೆಗಳ ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು, ಮುಖಂಡರು ಭಾಗವಹಿಸಿದ್ದರು.



JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**